ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ರಂಗ ಅಭಿನೇತ್ರಿ ರಿಹಮಾನವ್ವ ಕಲ್ಮನಿ


ಶ್ರೀ ಎಚ್. ಎಸ್. ಪಾಟೀಲ್

ಕನ್ನಡ ಪುಸ್ತಕ ಪ್ರಾಧಿಕಾರ

# ರಂಗ ಅಭಿನೇತ್ರಿ
# ರೆಹಮಾನವ್ವ ಕಲ್ಮನಿ



ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ
ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ



ರಂಗ ಅಭಿನೇತ್ರಿ, ರೆಹಮಾನವ್ವ ಕಲ್ಮನಿ ಇವರ
ಹಿರಿಯ ಮಗ, ರಂಗಭೂಮಿ ಹಿರಿಯನಟ
ಬಾಬಣ್ಣ ಕಲ್ಮನಿ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ

ಎಚ್.ಎಸ್. ಪಾಟೀಲ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು - ೫೬೦ ೦೦೨

**Kannada Kattidavaru Malike RANGA ABHINETRI REHAMANAVVA, KALMANI** A Dramatic Story By, H.S. Patil, Venkatesh Samudaya Bhavana, Ganesh Nagar, Ojinahalli Road, KOPPAL-583 231, Cell : 9482938940, Published By Kannada Pustaka Pradhikara, Third Floor, Kannada Bhavan, J.C. Road, Bangalore - 560 002.

© ಲೇಖಕರು

First Print : 2012
Pages : x + 102 = 112
Copies : 1000
Price : ₹ 60

ಮೊದಲ ಮುದ್ರಣ : 2012
ಪುಟಗಳು : x + ೧೦೨ = ೧೧೨
ಪ್ರತಿಗಳು : ೧೦೦೦
ಬೆಲೆ : ₹೬೦

ಕರಡು ತಿದ್ದಿದವರು : ಲೇಖಕರು

**ಪ್ರಕಾಶಕರು:**
ಬಿ.ಎಚ್. ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಮುದ್ರಕರು :
**ಪ್ರಿಂಟ್ ಪಾರ್ಕ್**
ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯಶ್ರೀರಾಂಪುರಂ ಅಂಚೆ,
ಬೆಂಗಳೂರು – ೫೬೦ ೦೨೧.
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್.ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡ ನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತ ಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ.ಎನ್ ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ' ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ' ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ – ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂಥಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂಥಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂಥಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡ ಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕ ಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂಥಹ ನೂರು ಜನ ಮಹನೀಯರು ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯು ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು– ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕನ ಅರಿಕೆ

ನಾನು ರಂಗ ನಟನಲ್ಲ, ಅಭಿನಯದಲ್ಲಿ ಗತಿಯಿಲ್ಲ. ನಾಟಕಗಳನ್ನು ನೋಡಿದ್ದೇನೆ, ಓದಿದ್ದೇನೆ. ಅದರಲ್ಲಿಯೂ ಕೊಪ್ಪಳ ಜಿಲ್ಲೆಯ ರಂಗಭೂಮಿ ಕುರಿತು ಅಧ್ಯಯನ ಮಾಡಿ ಕಿರುಹೊತ್ತಿಗೆ ಕೂಡ ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಹೊರತಂದಿದ್ದೇನೆ. ಇದನ್ನು ಗಮನಿಸಿದ ಆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ, ಚಿಂತಕರೂ, ಸಂಶೋಧಕರೂ, ಭರವಸೆದಾಯಕ ಕಥೆಗಾರರೂ ಆದ ಡಾ. ಎಚ್.ಟಿ. ಪೋತೆಯವರು, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿರುವುದರಿಂದ ಕನ್ನಡ ಕಟ್ಟಿದವರು ಮಾಲಿಕೆಯಲ್ಲಿ ರಂಗಭೂಮಿ ಅಭಿನೇತ್ರಿ, ರೆಹಮಾನವ್ವ ಕಲ್ಮನಿಯವರನ್ನು ಕುರಿತು ಬರೆಯಿಸಲು ನನ್ನ ಹೆಸರು ಸೂಚಿಸಿದರು. ನನ್ನ ಪಾಡಿಗೆ ನಾನು ಓದಿಕೊಂಡು ಇರುವವನಿಗೆ ಬರವಣಿಗೆ ಕಷ್ಟದ್ದು. ಕ್ಷೇತ್ರ ಕಾರ್ಯಕ್ಕಾಗಿ ತುಂಬ ಸಮಯ ತೆಗೆದುಕೊಂಡೆ. ಸಂಬಂಧಿಸಿದ ಸಾಹಿತ್ಯ ಸಂಗ್ರಹಿಸಿ, ಮತ್ತೊಮ್ಮೆ ಅವಲೋಕಿಸಿ ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿಯವರ ಚರಿತ್ರೆ ಕಟ್ಟಿಕೊಟ್ಟಿದ್ದೇನೆ. ನನ್ನದು ಚಾರಿತ್ರಿಕ ವಿಧಾನ. ಮುಂದೆ ಈ ಜಿಲ್ಲೆಯ ವಿಶ್ಲೇಷಣಾತ್ಮಕ ಬರವಣಿಗೆ ಮಾಡಬೇಕೆಂದುಕೊಂಡಿದ್ದೇನೆ. ಇದರಲ್ಲಿ ನನ್ನದೆಂಬುದೇನೂ ಇಲ್ಲ. ಇದರಲ್ಲಿರುವುದು ಪುಸ್ತಕಗಳ ಮಾಹಿತಿ. ಹಿರಿಯ ನಟ–ನಟಿಯರು, ರಂಗ–ಕರ್ಮಿಗಳು, ರಂಗಾಸಕ್ತ ಪ್ರೇಕ್ಷಕರು ಹೇಳಿದ ಸಂಗತಿಗಳು. ನಾನೊಬ್ಬ ಲಿಪಿಕಾರ ಮಾತ್ರ !

ಕನ್ನಡ ವೃತ್ತಿರಂಗಭೂಮಿಯ ಪ್ರವರ್ತಕರಾದ ಶಿರಹಟ್ಟಿ ವೆಂಕೋಬರಾಯರು ಮೂಲತಃ ಕೊಪ್ಪಳದವರು. ಗರುಡ ಸದಾಶಿವರಾಯರು ಕೊಪ್ಪಳ ತಾಲೂಕಿನ ಕವಲೂರಿನವರು. ಸಂಗನಬಸಪ್ಪ ಮಟ್ಟಿ ಕುಕನೂರಿನವರು. ಹಮ್ಮಿಗಿ ನೀಲಕಂಠಪ್ಪ, ಹಲಿಗೇರಿ ಭೀಮರಾವ್ ಬೇರೆ ಜಿಲ್ಲೆಯವರಾದರೂ ಅವರ ಬಾಲ್ಯ–ಬದುಕು ಕಳೆದದ್ದು ಈ ಜಿಲ್ಲೆಯ ಹಲಿಗೇರಿಯಲ್ಲಿ. ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಎಚ್.ಟಿ. ಅರಸರು ಹನುಮಸಾಗರದವರು. ಹೊಳೆ ಆಲೂರಿನ ಮಾರುತೇಶಮಾಂಡ್ರೆ, ಸೂಳೀಭಾವಿಯ ಪಿ.ಬಿ. ಧುತ್ತರಗಿ (ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತರು)ಯವರು ಇತ್ತೀಚಿನ ತಮ್ಮ ಅರ್ಧ ಆಯುಷ್ಯ ಕಳೆದದ್ದು ಕೊಪ್ಪಳ ಜಿಲ್ಲೆಯಲ್ಲಿ, ಖಾನಪ್ಪಗೌಡರು, ಕಾಳಪ್ಪ ಪತ್ತಾರರಂಥ ತಬಲಾ ವಾದಕರು, ಕಿನ್ನಾಳ ಶಿವರುದ್ರಪ್ಪ, ಕಲ್ಲೂರು ರಾಜಾಸಾಹೇಬರಂಥ

ಹಾರ್ಮೋನಿಯಂ ವಾದಕರು, ತಳಕಲ್ಲ ವೆಂಕರೆಡ್ಡಿಯವರಂಥ ನಾಟಕ ಕಂಪನಿ ಮಾಲೀಕರು ಇಲ್ಲಿಯವರು. ಶಿರಹಟ್ಟಿ ವೆಂಕೋಬರಾಯರ ಸೋದರ ಸಂಬಂಧಿ ಅಂಬಾದಾಸ ಹೂಲಗೇರಿ ಶತಮಾನದ ಹಿಂದೆ ಸ್ತ್ರೀ ಪಾತ್ರಕ್ಕೆ ಸವಾಯಿ ಗಂಧರ್ವರು, ಬಾಲಗಂಧರ್ವರನ್ನು ಸರಿಗಟ್ಟಿ ಬಲ್ಲಂಥವರ ಚರಿತ್ರೆ ಇನ್ನೂ ಹೊರಬಂದಿಲ್ಲ. ವಾಸುದೇವರಾವ್ ಹನುಮಸಾಗರ, ಗಂಗಾವತಿ ಬಸಪ್ಪ ಇವರ ಬಗ್ಗೆ ಏನೂ ತಿಳಿದಿಲ್ಲ. ಈ ಕುರಿತು ರಂಗಾಸಕ್ತರು ಇತ್ತ ಗಮನ ಹರಿಸಬೇಕಾಗಿದೆ.

ಕ್ಷೇತ್ರಕಾರ್ಯಕ್ಕೆ ಹೋದಾಗ ನಾಡೋಜ, ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತರಾದ ಡಾ. ಏಣ್ಗಿ ಬಾಳಪ್ಪನವರು, ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಎಚ್.ಟಿ. ಅರಸರು ಮುಚ್ಚು ಮರೆಯಿಲ್ಲದೆ ತಮ್ಮ ಅನುಭವಗಳನ್ನು ಹೇಳಿಕೊಂಡರು. ಸ್ತ್ರೀ ಪಾತ್ರಧಾರಿಗಳೂ, ರೆಹಮಾನವ್ವನ ಸಮಾನ ವಯಸ್ಕರಾದ ಲಾಡ್‌ಸಾಹೇಬ ಅಮೀನಗಡರು, ನುರಿತನಟ ನಾಟಕಕಾರ ಹಾಗೂ ನಿವೃತ್ತ ಶಿಕ್ಷಕ ಟಿ. ಪರಮೇಶ್ವರಪ್ಪ, ಸಿರಗುಪ್ಪದ ಯು.ಆರ್. ಶಿವರುದ್ರಪ್ಪ, ಗುಡಿಗೇರಿ ಎನ್. ಬಸವರಾಜರು, ಹಿರಿಯ ರಂಗನಟ ಅಬ್ದುಲ್‌ಸಾಬ ಅಣ್ಣಿಗೇರಿ 'ಅರವಿಂದ', ಶ್ರೀಮತಿ ಪುಷ್ಪಮಾಲಾ ಅಣ್ಣಿಗೇರಿ, ಲಲಿತಾ, ಮಂಜುಳಾರ ಭೀಕರ ಕಾರ ಅಪಘಾತದ ಪ್ರತ್ಯಕ್ಷ ದರ್ಶಿಗಳಾದ ಪ್ರತಿಭಾವಂತ ರಂಗಭೂಮಿ, ಚಲನಚಿತ್ರ ಕಲಾವಿದ ಬಸವರಾಜ ತಿರ್ಲಾಪುರ, ಗುಡಿಗೇರಿ ಬಸವರಾಜರ ಕಂಪನಿ ಮ್ಯಾನೇಜರ ಫಕೀರಪ್ಪ ಅಮ್ಮಣ್ಣವರ, ಅಗ ಪ್ರಚಾರ ಜೀಪಿನ ಡ್ರೈವರಾಗಿದ್ದ ಗುರುಸ್ವಾಮಿ ಹುಬ್ಬಳ್ಳಿ, ಹಿರಿಯ ರಂಗಕರ್ಮಿ ವಸಂತ ಕುಲಕರ್ಣಿ ಹುಬ್ಬಳ್ಳಿ ಮುಂತಾದವರು ನೀಡಿದ ಸಂದರ್ಶನಗಳು ಅತ್ಯಮೂಲ್ಯವಾದವುಗಳು.

ರೆಹಮಾನವ್ವ ಕಲ್ಮನಿಯವರ ಕರುಳಿನ ಕುಡಿ ಬಾಬಣ್ಣ ಕಲ್ಮನಿ, ಅವರ ಶ್ರೀಮತಿ ಮೆಹಬೂಬಬಿ (ಮಹಾದೇವಿ), ಇವರ ಮಗಳು ದಾನಮ್ಮ ಇವರು ಒದಗಿಸಿದ ಮಾಹಿತಿಗಳಿಗೆ, ಅಪೂರ್ವ ಭಾವಚಿತ್ರಗಳಿಗೆ ಋಣಿಯಾಗಿದ್ದೇನೆ. ಫೋನಿನಲ್ಲಿ ಸಂಪರ್ಕಿಸಿದಾಗ ಊಟ ಮಾಡುತ್ತಿದ್ದರೂ ಬೇಸರಿಸದೆ ಮಾಹಿತಿ ನೀಡಿದ್ದಾರೆ; ಸಂಶಯಗಳನ್ನು ನಿವಾರಿಸಿದ್ದಾರೆ. ಅನುಬಂಧದಲ್ಲಿ ನಾನು ಸಂದರ್ಶಿಸಿದವರ, ಸಂಪರ್ಕಿಸಿದವರ, ಹಾಗೂ ಆಧಾರ ಗ್ರಂಥಗಳ ಪಟ್ಟಿ ಕೊಟ್ಟಿದ್ದೇನೆ. ಆದರೂ ಇದು ಅಪೂರ್ಣ.

ವೃತ್ತಿರಂಗಭೂಮಿ ಬಗ್ಗೆ ಅಪಾರ ಕಾಳಜಿ ಹೊಂದಿರುವ ಡಾ. ವೀರಣ್ಣ ರಾಜೂರ, ಸಂಶೋಧಕ ಡಾ. ಬಿ.ವಿ. ಶಿರೂರರನ್ನು ಸಂಪರ್ಕಿಸಿದಾಗ ಕೆಲಸ ಸಾಗಲೆಂದು ಮುಂದುವರಿಸಲು ತಿಳಿಸಿದರು. ಉತ್ತರ ಕರ್ನಾಟಕದ

ವೃತ್ತಿರಂಗಭೂಮಿ ಕುರಿತು ಸಂಶೋಧನೆ ಮಾಡಿರುವ ಡಾ. ಬಸವರಾಜ ಜಗಜಂಪಿ, ಡಾ. ರಾಮಕೃಷ್ಣ ಮರಾಠೆಯವರು, ವೃತ್ತಿರಂಗಭೂಮಿಯ ಜಂಗಮ ಕೋಶದಂತಿರುವ ಗವೀಶ ಹಿರೇಮಠರು ಮಾಹಿತಿಗಳನ್ನು ನೀಡಿದ್ದಾರೆ. ಸೋದರ, ಸಾಹಿತಿ– ಪ್ರೊ. ಮಲ್ಲಿಕಾರ್ಜುನ ಹಿರೇಮಠರು ಹಸ್ತಪ್ರತಿ ಅವಲೋಕಿಸಿ ಲೋಪದೋಷಗಳತ್ತ ಬೆರಳು ಮಾಡಿ ತೋರಿಸಿ, ಸಲಹೆ ನೀಡಿದ್ದಾರೆ. ಗೆಳೆಯರಾದ ಡಾ. ಕೆ.ಬಿ. ಬ್ಯಾಳಿಯವರು ರೆಹಮಾನವ್ವನ ಕೊನೆಯ ದಿನಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ; ದಾನಮ್ಮ, ಮಮತಾ ಇಬ್ಬರೂ ಇವರ ವಿದ್ಯಾರ್ಥಿನಿಯರು.

''ಯಲಬುರ್ಗಾ ತಾಲೂಕಿನ ವೃತ್ತಿ ರಂಗಭೂಮಿ: ಒಂದು ಅಧ್ಯಯನ'' ಮಹಾಪ್ರಬಂಧದಿಂದ ಸಹಾಯ ಪಡೆದಿದ್ದೇನೆ. ಇದಕ್ಕಾಗಿ ಸಂಶೋಧಕ ಡಾ. ಮಲ್ಲಿಕಾರ್ಜುನ ಕುಂಬಾರರ ಉಪಕಾರ ಸ್ಮರಿಸುತ್ತೇನೆ. ತುಂಬ ಕಷ್ಟಪಟ್ಟು ರಂಗಭೂಮಿ ಬಗ್ಗೆ ಕೃತಿಗಳನ್ನು ಹೊರತಂದಿರುವ ಸಂದರ್ಭ ಗ್ರಂಥಗಳ ಲೇಖಕರ ಆಭಾರ ಮನ್ನಿಸುತ್ತೇನೆ. ಬಂಡಾಯ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಬರೆಯಲು ನೆನಪಿಸುತ್ತಿದ್ದರು. ಬೇಸರಿಸದೆ ಪ್ರೀತಿ, ವಿಶ್ವಾಸ ತೋರಿಸುತ್ತ, ಈ ಚರಿತ್ರೆಯ ಕರಡಚ್ಚು ತಿದ್ದಿಕೊಟ್ಟವರೂ ಇವರೇ. ನನ್ನ ಸಹಧರ್ಮಿಣಿಯ ನೆರವು, ಮಕ್ಕಳ, ಮೊಮ್ಮಕ್ಕಳ ಸಹಾಯವಂತೂ ಸರಿ, ಇವರೆಲ್ಲರಿಗೆ ನನ್ನ ನೆನಕೆಗಳು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ, ನಾಡಿನ ಶ್ರೇಷ್ಠ ಕವಿಗಳಲ್ಲೊಬ್ಬರಾದ ಡಾ. ಸಿದ್ಧಲಿಂಗಯ್ಯನವರ, ಸದಸ್ಯರಾದ ಡಾ. ಎಚ್. ಟಿ. ಪೋತೆಯವರ, ಉಳಿದ ಸದಸ್ಯರ ಹಾಗೂ ಅಧಿಕಾರ ವರ್ಗ, ವಿಶೇಷವಾಗಿ ಆಡಳಿತಾಧಿಕಾರಿಗಳಾದ ಬಿ.ಎಚ್. ಮಲ್ಲಿಕಾರ್ಜುನ ಇವರ ಕಾಳಜಿ ಹಾಗೂ ವಿಶ್ವಾಸಗಳಿಗೆ ವಂದನೆಗಳು. ಈ ಕೃತಿ ಹೊರಬರಲು ಕಾರಣರಾದ ಎಲ್ಲರಿಗೂ ವಂದನೆಗಳು.

– ಎಚ್.ಎಸ್. ಪಾಟೀಲ
ನಿವೃತ್ತ ಮುಖ್ಯೋಪಾಧ್ಯಾಯರು
ವೆಂಕಟೇಶ ಸಮುದಾಯ ಭವನ
ಗಣೇಶ ನಗರ, ಓಜಿನಹಳ್ಳಿ ರಸ್ತೆ
ಕೊಪ್ಪಳ–೫೮೩೨೩೧
ಮೊ: ೯೪೮೭೯೩೮೯೪೦.

## ಪರಿವಿಡಿ


೧. ನಾಂದಿ

೨. ತೆರೆ ಏಳುವ ಮುನ್ನ

೩. ಬದುಕಿನ ಅನ್ವೇಷಣೆಯಲ್ಲಿ

೪. ಬಾಲ್ಯದಲ್ಲಿ ಅಭಿನಯದ ಬೀಜಾಂಕುರ

೫. ತಳಕಲ್ಲ ವೆಂಕರೆಡ್ಡಿಯವರ ಕಂಪನಿಯಲ್ಲಿ

೬. ಏಣ್ಗಿ ಬಾಳಪ್ಪನವರೊಂದಿಗೆ

೭. ಹಂದಿಗನೂರು ಸಿದ್ಧರಾಮಪ್ಪನವರ ಕಂಪನಿಯಲ್ಲಿ

೮. ನಾಟಕ ಕಲೆ–ಅಭಿನಯ

೯. ನಾಟಕಕಾರ ಧುತ್ತರಗಿಯವರಿಗೆ ಆತ್ಮವಿಶ್ವಾಸ ಮೂಡಿಸಿದ ರೆಹಮಾನವ್ವ

೧೦. ಹೇಮರೆಡ್ಡಿ ಮಲ್ಲಮ್ಮನಾಗಿ

೧೧. ವಿಭಿನ್ನ ಪಾತ್ರಗಳಲ್ಲಿ

೧೨. ಎಚ್. ಟಿ. ಅರಸರು ಮಾರು ಹೋದ ರೆಹಮಾನವ್ವ

೧೩. ಗಾನ ಕೋಗಿಲೆ ಮನಸೂರು ಸುಭದ್ರಮ್ಮನವರನ್ನು ಮಾತಾಡಿಸಿದಾಗ

೧೪. ತೊಗಲು ಗೊಂಬೆ ಅಂತರ್ ರಾಷ್ಟ್ರೀಯ ಖ್ಯಾತಿಯ
ಬೆಳಗಲ್ ವೀರಣ್ಣನವರೊಂದಿಗೆ

೧೫. ಉರ್ದು ನೆಲದಲ್ಲಿ ಕನ್ನಡ ನಾಟಕ ಕಂಪನಿ

೧೬. ಶ್ರೀ ಲಲಿತ ಕಲಾ ನಾಟಕ ಕಂಪನಿಯ ಪ್ರಸಂಗಗಳು

೧೭. ಹವ್ಯಾಸಿ ರಂಗ ಕಲಾವಿದೆಯಾಗಿ ರೆಹಮಾನವ್ವ

೧೮. ಹಿರಿಯ ಮಗ ಬಾಬಣ್ಣ ಕಲ್ಮನಿ

೧೯. ಲಲಿತಾ ಕಲ್ಮನಿ

೨೦. 'ರಂಗಭೂಮಿ ಹುಲಿ' ಖ್ಯಾತಿಯ ಉಮೇಶ ಕಲ್ಮನಿ

೨೧. ಮಂಜುಳಾ ಕಲ್ಮನಿ

೨೨. ಮಹ್ಮದ ರಫಿ ಮುನ್ನಾ ಕಲ್ಮನಿ

೨೩. ನಾಟಕ ಕಂಪನಿ ಮಾಲೀಕಳಾಗಿ

೨೪. ಶ್ರೀ ಲಲಿತ ಕಲಾ ನಾಟ್ಯ ಸಂಘ ಪ್ರಯೋಗಿಸಿದ ಪ್ರಮುಖ ನಾಟಕಗಳು

೨೫. ಉಪಸಂಹಾರ

೨೬. ಅನುಬಂಧ

## ನಾಂದಿ

ಕಿತ್ತೂರು, ಕರ್ನಾಟಕದ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯಗಳ ಶಕ್ತಿ ಕೇಂದ್ರವಾಗಿದೆ. ಅಲ್ಲಿಯ ರಾಣಿ ಚೆನ್ನಮ್ಮ ರಾಣಿ ರುದ್ರಮ್ಮ ಹಾಗೂ ರಾಯಣ್ಣ ಉತ್ತರ ಕರ್ನಾಟಕದ ಕ್ಷಾತ್ರ ತೇಜಸ್ಸಾಗಿದ್ದಾರೆ. ಇವರ ಬಗ್ಗೆ ಬಂದಿರುವ ಉತ್ತರ ಕರ್ನಾಟಕದ ನಾಟಕಗಳು ದೇಶ ಭಕ್ತಿಯನ್ನು ಬಡಿದೆಬ್ಬಿಸಿವೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಬ್ರಿಟಿಷರು ನಮ್ಮನ್ನಾಳುತ್ತಿದ್ದಾಗ ಕಿತ್ತೂರು ಚೆನ್ನಮ್ಮ ನಾಟಕ ಪ್ರದರ್ಶನದಿಂದ ಸ್ಫೂರ್ತಿಗೊಂಡು, ಥೇಟರಿನೆದರು ವಿದೇಶಿ ವಸ್ತುಗಳನ್ನು ಸುಟ್ಟುಹಾಕುತ್ತಿದ್ದರು. ಘೋಷಣೆ ಕೂಗುತ್ತಿದ್ದರು: 'ಭಾರತ ಮಾತಾಕೀ ಜೈ', 'ಮಹಾತ್ಮಾಗಾಂಧೀಕೀ ಜೈ'. ತಮ್ಮ ಊರುಗಳಿಗೆ ನಾಟಕ ನೋಡಿ ಮರುಳುವಾಗ ದಾರಿಯಲ್ಲಿದ್ದ ಸಿಂದಿಗಿಡಗಳನ್ನು ಕಡಿದು ಹಾಕುತ್ತಿದ್ದರು. ಈ ನಾಟಕ ನೋಡಿ, ನಾಗನೂರು ರಾಚನಾಯ್ಕರ ಮನೆತನದ ವೀರಮಹಿಳೆ ಕಲೆಕ್ಟರನನ್ನೇ ಚಪ್ಪಲಿಯಿಂದ ಹೊಡೆದಳಂತೆ. (ಡಾ. ರಾಮಕೃಷ್ಣ ಮರಾಠೆ, ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ ಪು ೧೦೭). ಅಬ್ಬಿಗೇರಿ ಬಸನಗೌಡರು ತಮ್ಮ ಸಂಪತ್ತನ್ನು ಸುರಿದು ಆರಂಭಿಸಿದ ಕನ್ನಡ ಸಾಹಿತ್ಯ ಸೇವಾ ಸಂಗೀತ ನಾಟಕ ಮಂಡಳಿ ಮೂಲಕ ದೇಶಾಭಿಮಾನವನ್ನುಕ್ಕಿಸುವ ಕಿತ್ತೂರು ಚೆನ್ನಮ್ಮ ಝಾನ್ಸಿರಾಣಿ ಲಕ್ಷ್ಮೀಬಾಯಿ, ನರಗುಂದ ಬಂಡಾಯದಂಥ ನಾಟಕಗಳನ್ನು ಪ್ರದರ್ಶಿಸಿದರು. ಇದರಿಂದ ಸಿಟ್ಟಿಗೆದ್ದ ಬ್ರಿಟಿಷ್ ಸರಕಾರ ಕಿತ್ತೂರು ಚೆನ್ನಮ್ಮ ನಾಟಕಕ್ಕೆ ನಿಷೇಧಾಜ್ಞೆ ವಿಧಿಸಿತು. ಆದರೂ ಬಸನಗೌಡರು ಧೈರ್ಯಗುಂದದೆ ದಿಲ್ಲಿಯವರೆಗೆ ಹೋಗಿ ಅನುಮತಿಗಾಗಿ ಪ್ರಯತ್ನಿಸಿದರೂ ಸಫಲರಾಗಲಿಲ್ಲ (ಅದೇ ಪು ೧೦೭). ಇದು ಸ್ವಾತಂತ್ರ್ಯ ಪೂರ್ವಕಾಲ: ೧೯೩೮. ಗದಗ ರತ್ನಮ್ಮ ಅಭಿನಯಿಸಿದ ಈ ಕಂಪನಿಯ ಕಿತ್ತೂರು ಚೆನ್ನಮ್ಮ ನಾಟಕವನ್ನು ತಳಕಲ್ಲ ವೆಂಕರೆಡ್ಡಿಯವರು ನೋಡಿ, ಹುರುಪುಗೊಂಡು ತಮ್ಮ ಊರಲ್ಲಿ ಕಿತ್ತೂರು ಚೆನ್ನಮ್ಮ ನಾಟಕದ ಪ್ರಯೋಗಕ್ಕೆ ಸಿದ್ಧತೆಗಳನ್ನು ಮಾಡಿಕೊಂಡು, ಗದಗ ರತ್ನಮ್ಮರಂತೆ ಕಿತ್ತೂರು ಚೆನ್ನಮ್ಮನ ಪಾತ್ರಕ್ಕೆ ಪ್ರಸಿದ್ಧರಾಗಿದ್ದ ಹುಬ್ಬಳ್ಳಿ ಜಮುನಾಬಾಯಿಯನ್ನು ಒಪ್ಪಿಸಿ, ನಾಲ್ಕೈದು ತಿಂಗಳು ತಾಲೀಮು ನಡೆಸಿದರು. ಪ್ರಥಮ ಪ್ರಯೋಗ ಯಶಸ್ವಿಗೊಂಡು ಈ ಭಾಗದಲ್ಲಿ ಪ್ರಸಿದ್ಧಿ ಪಡೆದಿದ್ದರಿಂದ ನಾಟಕಕ್ಕೆ ಬೇಡಿಕೆ ಹೆಚ್ಚಾಯಿತು. ತಳಕಲ್ಲ ನಾಟಕ ಕಂಪನಿ ಹುಮ್ಮಸ್ಸಿನಿಂದ ಮುಂದಿನ ಪ್ರಯೋಗಗಳನ್ನು

ನಿಗದಿಗೊಳಿಸಿತು. ಮತ್ತೆ ಪ್ರ್ಯಾಕ್ಟೀಸಿಗೆ ಬಂದ ಹುಬ್ಬಳ್ಳಿ ಜಮುನಾಬಾಯಿ ಕೆಲವು ದಿವಸವಿದ್ದು, ಪ್ರಯೋಗಕ್ಕೆ ಮೂರು ನಾಲ್ಕು ದಿವಸಗಳಿರುವಾಗ ಹೇಳದೆ, ಕೇಳದೆ, ಕಳ್ಳತನದಿಂದ ಪರಾರಿಯಾಗಿಬಿಟ್ಟಳು. ಮಾಲೀಕ ವೆಂಕರೆಡ್ಡಿಯವರು ತಲೆಯ ಮೇಲೆ ಕೈಹೊತ್ತು ಕುಳಿತುಬಿಟ್ಟರು. ಆದರೆ ಆ ಊರಿನ ನಾಟಕ ಪ್ರೇಮಿಗಳು ಹಾಗೂ ಇವರಿಗೆ ಆಪ್ತರಾದವರು ಸಂತೋಷದ ಸುದ್ದಿ ತಂದರು. ವೆಂಕರೆಡ್ಡಿಯವರ ಮನೆಯ ದನಗಳನ್ನು ಕಾಯುವ ೧೨–೧೩ ವರ್ಷಗಳ ಹುಡುಗಿಯನ್ನು, ತಾಲೀಮು ಮನೆಯಲ್ಲಿ ಅವರೆದುರಿಗೆ ಕರೆದುಕೊಂಡು ಬಂದು ನಿಲ್ಲಿಸಿದರು. ಪ್ರ್ಯಾಕ್ಟೀಸಿಗೆಂದು ಹುಬ್ಬಳ್ಳಿ ಜಮುನಾಬಾಯಿ ಹಿಡಿಯುತ್ತಿದ್ದ ಕಟ್ಟಿಗೆಯ ಕತ್ತಿಯನ್ನು ಕೈಗೆ ಕೊಟ್ಟರು. ಆ ಬಾಲೆ ನಾಚದೆ, ಅಂಜದೆ, ಅಳುಕದೆ, ತಾನುಟ್ಟಿದ್ದ ದಟ್ಟಿ (ಸೀರೆ) ಯಿಂದ ವೀರಗಚ್ಚೆ ಹಾಕಿಕೊಂಡು, ಕೈಯಲ್ಲಿ ಹಿಡಿದಿದ್ದ ಕತ್ತಿಯನ್ನು ಝಳಪಿಸುತ್ತ ಕಿತ್ತೂರು ಚೆನ್ನಮ್ಮನಾಗಿ ಜಮುನಾಬಾಯಿ ನಾಟಕದಲ್ಲಿ ಹೇಳುತ್ತಿದ್ದ ವೀರಾವೇಶದ ಮಾತುಗಳನ್ನು ಹೇಳಿ ನೆರೆದಿದ್ದವರನ್ನು ಬೆಚ್ಚಿಬೀಳಿಸಿದಳು. ಯುದ್ಧದ ಸನ್ನಿವೇಶದಲ್ಲಿ ಆಕೆ ಕತ್ತಿವರಸೆ ಮಾಡುವುದನ್ನು ಚಾಚೂತಪ್ಪದೆ ಮಾಡಿ ತೋರಿಸಿದಳಲ್ಲದೆ, ಆ ನಾಟಕದ ಹಲವಾರು ಪ್ರಮುಖ ಪಾತ್ರಗಳ ಮಾತು (ಸಂಭಾಷಣೆ) ಹೇಳಿದ್ದನ್ನು ಕೇಳಿ ವೆಂಕರೆಡ್ಡಿಯವರು ದಂಗಾದರು. ಖುಷಿಯಾದರು. ಬೆಟ್ಟದಂತೆ ಬಂದಿದ್ದ ಸಮಸ್ಯೆ ಮಂಜಿನಂತೆ ಪರಿಹಾರವಾಯಿತು. ಹಾರ್ಮೋನಿಯಂ ಮಾಸ್ತರರನ್ನು, ತಬಲಾ ವಾದಕರನ್ನು, ಇತರ ಪಾತ್ರಗಳ ನಟರನ್ನು ಕರೆದು ತರಲಾಯಿತು. ಇವರೆಲ್ಲರೆದುರಿಗೆ ಬಾಲಿಕೆಯು ಮತ್ತೊಮ್ಮೆ ಹುರುಪಿನಿಂದ ಅಭಿನಯಮಾಡಿ ತೋರಿಸಿದಳು. ಇವರೆಲ್ಲರೆದುರಿಗೆ ಮೊದಲಿನದಕ್ಕಿಂತ ಉತ್ತಮವಾಗಿ ಅಭಿನಯಿಸಿ ತೋರಿಸಿದ್ದನ್ನು ವೆಂಕರೆಡ್ಡಿಯವರು ಗಮನಿಸಿದರು. ಅವರಿಗೆ ಧೈರ್ಯ ಬಂದಿತು. ಅಶುದ್ಧವಾಣಿಯನ್ನು ತಿದ್ದಿದರು; ಸಂಭಾಷಣೆಗಳನ್ನು ತಿಳಿಸಿ ಹೇಳಿಕೊಟ್ಟರು. ರಂಗಭೂಮಿಗೆ ಪ್ರವೇಶಿಸುವ, ನಿರ್ಗಮಿಸುವ ರೀತಿ, ನಿಲ್ಲುವುದು, ಸಿಂಹಾಸನದ ಮೇಲೆ ಆಸೀನಳಾಗುವುದು, ಕೈ ಎತ್ತುವುದು, ಎದುರಿಗಿದ್ದವರ ಮೇಲೆ ದೃಷ್ಟಿ ಬೀರುವುದು, ದೀರ್ಘ ಉಸಿರು ತೆಗೆದುಕೊಂಡು ಹೂಂಕರಿಸುವುದು, ಥ್ಯಾಕರೆ ಮೊದಲಾದ ಕಂಪಣಿ ಸರಕಾರದ ಅಧಿಕಾರಿಗಳ ಮೇಲೆ ಹೆಡೆಯೆತ್ತಿದ ಹಾವಿನಂತೆ ಫೂತ್ಕರಿಸುವುದು ಮುಂತಾದವುಗಳನ್ನು ಹಿರಿಯ ನಟಿ ಜಮುನಾರಂತೆ ಮಾಡಿದಳು. ಅಲ್ಲಲ್ಲಿ ಆಗುವ ತಪ್ಪುತಡೆಗಳನ್ನು ತಿದ್ದಿ ತಿಳಿಸಿದರು. ಹಾರ್ಮೋನಿಯಂ ಮಾಸ್ತರರು ಹಾಡು ಹೇಳಿಸಿದರು. ಸುಮಧುರ ಕಂಠವಿತ್ತು.

ತಾನು ಗ್ರಹಿಸಿದ್ದನ್ನು ಹಾಡಿದಳು. ಆಕೆಯಲ್ಲಿ ಅಭಿನಯ ಕಲೆಯೊಂದಿಗೆ ಸಂಗೀತ ಕಲೆಯೂ ಇರುವುದನ್ನು ಮನಗಂಡರು. ಎಳೆ ಸಿಕ್ಕರೆ ಹಚ್ಚಡ ನುಂಗುವ ಶಕ್ತಿ ಸಾಮರ್ಥ್ಯದ ಬಾಲಿಕೆ, ಸೂಕ್ಷ್ಮವಾಗಿ ಎಲ್ಲವನ್ನೂ ಆತ್ಮಸಾತ್ ಮಾಡಿಕೊಳ್ಳಲು ಹೆಣಗುತ್ತಿದ್ದಳು. ಎಡಬಿಡದೆ ಎಲ್ಲ ನಟ–ನಟಿಯರೊಂದಿಗೆ ತಾಲೀಮು ನಡೆಯಿತು. ನಿಗದಿತ ದಿನ ಕಿತ್ತೂರು ಚೆನ್ನಮ್ಮ ನಾಟಕ ಪ್ರದರ್ಶನಗೊಂಡಿತು. ದನಕಾಯುವ ಬಾಲಿಕೆ, ಅಭಿನೇತ್ರಿ ಹುಬ್ಬಳ್ಳಿ ಜಮುನಾಬಾಯಿಯನ್ನು ಮರೆಯಿಸಿಬಿಟ್ಟಳು. ಕನ್ನಡ ರಂಗಭೂಮಿಯಲ್ಲೊಬ್ಬ ಹೊಸ ಅಭಿನೇತ್ರಿ ೧೯೩೦ ರ ಆ ದಿನದ ಸೂರ್ಯೋದಯದೊಂದಿಗೆ ಆವಿರ್ಭವಿಸಿದ್ದಳು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ ಕಿತ್ತೂರು ಚೆನ್ನಮ್ಮನಾಗಿ ಅಭಿನಯಿಸಿ, ರಂಗಭೂಮಿ ರಾಣಿ, ಗಾನ ಕೋಗಿಲೆಯೆಂಬ ಬಿರುದು ಪಡೆದು, ಶ್ರೀ ಲಲಿತ ಕಲಾನಾಟ್ಯ ಸಂಘದ ಒಡತಿಯಾಗಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ವಿಜೇತೆಯಾಗಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಭೂಷಿತೆಯಾಗಿ ರೆಹಮಾನವ್ವ ಕಲ್ಮನಿ, ರೆಹಮಾನ್‌ಬಿ; ರೆಹಮಾನ್ ಜಾನ್ ಕುಕನೂರ ಮುಂತಾಗಿ ಕರೆಸಿಕೊಂಡವರೇ ಪ್ರಸಿದ್ಧ ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ.

ಎಂಟು ಹತ್ತು ವರ್ಷದ ರೆಹಮಾನ್‌ಬಿಯನ್ನು ಅಜ್ಜಿ ಹಸ್ನಮ್ಮ ತಳಕಲ್ಲ ವೆಂಕರೆಡ್ಡಿಯವರ ಮನೆಯಲ್ಲಿ ದನ ಕಾಯ್ದುಕೊಂಡಿರಲು ಜೀತಕ್ಕಿರಿಸಿದ್ದಳು. ಮನೆಯ ಒಡೆಯರಾದ ವೆಂಕರೆಡ್ಡಿಯವರು ಕಿತ್ತೂರು ಚೆನ್ನಮ್ಮ ನಾಟಕದ ಪ್ರ್ಯಾಕ್ಟೀಸು ತಾಲೀಮು ಮನೆಯಲ್ಲಿ ನಡೆಸುತ್ತಿದ್ದರು. 'ಮಾಲೀಕರಿದ್ದಲ್ಲಿ ಮನೆಯಾಳು. ಎನ್ನುವಂತೆ ರಾತ್ರಿಯಾಗುತ್ತಲೆ ಉಂಡು, ತಾಲೀಮು ಮನೆಗೆ ಬರುತ್ತಿದ್ದ ರೆಹಮಾನ್‌ಬಿ, ತಾಲೀಮು ಮುಗಿಸಿಕೊಂಡ ಮೇಲೆ ದನದ ಕೊಟ್ಟಿಗೆ ಸೇರಿ ಮಲಗಿಬಿಡುತ್ತಿದ್ದಳು. ರಾತ್ರಿ ನಡೆದ ನಾಟಕದ ಅಭಿನಯವನ್ನು ದನಕಾಯುವ ಹುಡುಗರೆದುರು ಮಾಡಿ ತೋರಿಸುತ್ತಿದ್ದಳು. ಹಾಡು ಹೇಳುತ್ತಿದ್ದಳು. ತಾಲೀಮಿನಲ್ಲಿ ಕಂಡ ಕುಣಿತ ಮಾಡಿ ತೋರಿಸುತ್ತಿದ್ದಳು. ಕಲೆಯೆನ್ನುವುದು ಅನುಕರಣೆ (Imitation). ತಾಲೀಮಿನಲ್ಲಿ ನಟ ನಟಿಯರು ಅನುಕರಿಸಿ ತೋರಿಸಿದ್ದನ್ನು ಈ ಮಗಳು ದನ ಮೇಯುವ ಹುಲ್ಲುಗಾವಲಿನಲ್ಲಿ ಅಭಿನಯಿಸಿ ತೋರಿಸುತ್ತಿದ್ದಳು. ಓರಿಗೆಯವರಿಗೊಂದು ಅಚ್ಚರಿ. ಬೆಳೆದು ನಿಂತ ಹಚ್ಚ ಹಸಿರಿನ ಪೈರಿನ ಹೊಲಗಳ ಬದುವಿನಲ್ಲಿ, ಗಿಡಮರಗಳ ನೆರಳಿನಲ್ಲಿ ಈ ಬಾಲಿಕೆಯ ನಟನೆಯನ್ನು ಕಂಡಿದ್ದ ಊರಿನ ನಾಟಕ ಪ್ರೇಮಿಗಳು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ ತಳಕಲ್ಲ ವೆಂಕರೆಡ್ಡಿಯವರಿಗೆ ತಿಳಿಸಿದರು. ಬೆಳಕು ಹರಿಯುವದರೊಳಗೆ ರೆಹಮಾನ್‌ಬಿ, ರೆಹಮಾನ್ ಜಾನ್ ಆಗಿದ್ದಳು. ಕಿತ್ತೂರು ಚೆನ್ನಮ್ಮನ ಪಾತ್ರ ಮಾಡಿದ್ದರಿಂದ ವೆಂಕರೆಡ್ಡಿಯವರು ಅಂಗಡಿಯಿಂದ

ಸಿಹಿ ತಿಂಡಿಗಳನ್ನು ತರಿಸಿ ತಿನ್ನಿಸಿದ್ದಲ್ಲದೆ, ಮನೆಯಲ್ಲಿ ಸಿಹಿಯೂಟ ಹಾಗೂ ಹಾಲು ಮೊಸರು, ಮೇಲಾಗಿ ಹೋಳಿಗೆ ತುಪ್ಪ ಉಣ್ಣಿಸಿ ಪ್ರೀತಿ ತೋರಿಸಿದರು. ಮನೆ ಮಂದಿಯೆಲ್ಲ ಈ ಹುಡುಗಿಯನ್ನು ಅಕರಾಸ್ತೆಯಿಂದ ಕಂಡರು. ಮನೆಯವರ, ಓಣಿಯವರ, ಊರವರ ಕಣ್ಮಣಿಯಾದಳು. ದನಕಾಯ್ದುಕೊಂಡು ದಿನ ನೂಕುತ್ತಿದ್ದ ರೆಹಮಾನ್‌ಬಿಯನ್ನು ರೆಹಮಾನ್‌ಜಾನೆಂದು ನಾಟಕ ಕಂಪನಿ ಮಾಲೀಕ ತಳಕಲ್ಲ ವೆಂಕರೆಡ್ಡಿಯವರು ಕರೆದರು. ಹೂವಿನ ಪರಿಮಳದಂತೆ, ಶ್ರೀಗಂಧದ ಸುವಾಸನೆಯಂತೆ ರೆಹಮಾನ್‌ಬಿಯ ಅಭಿನಯ ಕಲೆ, ತಳಕಲ್ಲ ತುಂಬ ಹರಡಿತು. ಪ್ರೇಕ್ಷಕರ ಮೂಲಕ ಆ ಊರಿನ ಸುತ್ತಮುತ್ತ ಹರಡಿತು. ಮುಂದೆ ಅದು ಕರ್ನಾಟಕದಾದ್ಯಂತ, ಪಕ್ಕದ ಮಹಾರಾಷ್ಟ್ರ, ಆಂಧ್ರದ ಗಡಿಯವರೆಗೆ ಪಸರಿಸಿತು. ರೆಹಮಾನ್‌ಬಿಯ ಬಾಳಿನ ಭಾಗ್ಯೋದಯವಾಯಿತು. ಹೈದರಾಬಾದ ಕರ್ನಾಟಕ್ಕೊಂದು ಹೆಮ್ಮೆಯ ಗರಿ ಮೂಡಿಸಿತು. ಮೊಗಲಾಯಿಯೆಂದು ಹೀಯಾಳಿಸುತ್ತಿದ್ದ ಉರ್ದು ಪ್ರದೇಶದ ಅಲ್ಪ ಸಂಖ್ಯಾತ ಮಹಿಳೆ ಕನ್ನಡ ರಂಗಭೂಮಿ ಸೇವೆಯ ಮೂಲಕ ಕನ್ನಡ ಕಟ್ಟಿದವರ ಸಾಲಿಗೆ ಸೇರಿದಳು.

## ತೆರೆ ಏಳುವ ಮುನ್ನ

ಹೊಟ್ಟೆಪಾಡಿಗಾಗಿ ಏನಾದರೂ ಮಾಡಬೇಕಲ್ಲ, ಯಾವುದಾದರೂ ವೃತ್ತಿ ಮಾಡಬೇಕಲ್ಲ? ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಎಂಬ ಕನಕದಾಸರ ಉಕ್ತಿಯಿದ್ದರೂ ಅದನ್ನು ಮೀರಿದ ಉದ್ದೇಶವನ್ನು ಹೊಂದಿ, ನಿಜಾಂ ಪ್ರಾಂತಕ್ಕೆ ಸೇರಿದ ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದ ರೆಹಮಾನವ್ವ ಕಲ್ಮನಿ, ನವಾಬ ಸಾಲಾರ ಜಂಗರ ಜಹಾಗೀರ ಜಿಲ್ಲೆ ಕೊಪ್ಪಳದ ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ ಶ್ರೀ ಲಲಿತಕಲಾ ನಾಟ್ಯ ಸಂಘವನ್ನು ಕಟ್ಟಿ ಬೆಳೆಸಿರುವುದು ನಿಜಕ್ಕೂ ಅಚ್ಚರಿಯನ್ನು, ಅಭಿಮಾನವನ್ನುಂಟು ಮಾಡುತ್ತದೆ. ಏಕೆಂದರೆ ಈ ಪ್ರದೇಶದಲ್ಲಿ ನಾಟಕ–ನೃತ್ಯ–ಸಂಗೀತ–ಸಾಹಿತ್ಯ–ಸಂಸ್ಕೃತಿಗಳಿಗೆ ಆ ಕಾಲ (೧೯೦೦)



ರಂಗ ಅಭಿನೇತ್ರಿ ರೆಹಮಾನವ್ವನವರ ಅಜ್ಜಿ ಹಸನ್ಮಾ

ದಲ್ಲಿ ಪ್ರೋತ್ಸಾಹವಿರಲಿಲ್ಲ. ಮುಖ್ಯವಾಗಿ ಈ ಪ್ರದೇಶದಲ್ಲಿ ಸರಕಾರಿ ಶಾಲೆಗಳಿರದಿದ್ದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳೂ ಇರದಿದ್ದರಿಂದ ವಿದ್ಯಾವಂತರಿರಲಿಲ್ಲ. ಮಹಿಳೆಯರಂತೂ ಶಿಕ್ಷಣದಿಂದ ವಂಚಿತರಾಗಿದ್ದವರು. ಇಂಥ ಅವಿದ್ಯಾವಂತ ನಾಡಿನಲ್ಲಿ ರೆಹಮಾನವ್ವರಂಥ ಅಲ್ಪ ಸಂಖ್ಯಾತ ಮಹಿಳೆ ಅದು ಹೇಗೆ ನಾಟಕ ಕಂಪನಿ ಆರಂಭಿಸಿದಳು. ಆಕೆಯ ಹುಟ್ಟು ಎಲ್ಲಾಯಿತು? ತಂದೆ–ತಾಯಿಗಳಾರು? ಯಾವ ಮನೆತನ ಎಲ್ಲಿ ಬೆಳೆದಳು, ಎಲ್ಲಿ ಶಿಕ್ಷಣ ಪಡೆದಳು, ಏಕೆ ರಂಗ ನಟಿಯಾದಳು? ರಂಗಭೂಮಿ ರಾಣಿಯೆಂದು ಪ್ರಸಿದ್ಧಿಗೆ ಬರಲು ಅದು ಹೇಗೆ ಪ್ರಯತ್ನಿಸಿದಳು? ತನ್ನ ಸಹಜ ಅಭಿನಯ ಹಾಗೂ ಮಧುರ ಕಂಠದಿಂದ ಪ್ರೇಕ್ಷಕರ ಮೇಲೆ ಮೋಡಿ ಮಾಡಿದಳು. ಎಲ್ಲೆಲ್ಲಿ ನಾಟಕ ಕಂಪನಿ ತೆಗೆದುಕೊಂಡು ಹೋಗಿ ನಾಟಕಗಳನ್ನು ಪ್ರಯೋಗಿಸಿದಳು? ಈ ಕಂಪನಿಯಲ್ಲಿದ್ದ ನಟರು ಯಾರು? ಎಂಥವರು! ತನ್ನ ನಾಟಕ ಕಂಪನಿ ನಡೆಸಲು ಪಟ್ಟ ಪಾಡಾವುದು? ಸಮಾಜ ಹೇಗೆ ಪ್ರತಿಕ್ರಿಯಿಸಿತು? ಮಕ್ಕಳಾದ ಬಾಬಣ್ಣ ಲಲಿತಮ್ಮ ಉಮೇಶ, ಮಂಜುಳಾ ಹಾಗೂ ಮುನ್ನಾ ಹೇಗೆ ಸಹಕರಿಸಿದರು? ಇವರೆಲ್ಲ ಬೆಳೆದು ಪ್ರಬುದ್ಧ ನಟರಾದಂತೆ ತಾಯಿಯ ಮನಸ್ಸು ತಿಳಿಯದಾದರು. ತಮ್ಮ ಬದುಕಿನಲ್ಲಿ ಏನೆಲ್ಲ ಏರಿಳಿತಗಳನ್ನು ಕಂಡರು. ರೆಹಮಾನವ್ವ ಮುಪ್ಪಿನ ವಯಸ್ಸಿನಲ್ಲಿದ್ದಾಗ ಆಕೆಯ ಇಬ್ಬರು ಹೆಣ್ಣು ಮಕ್ಕಳು ಅಪಘಾತದಲ್ಲಿ ತಮ್ಮ ಕಲಾ ಜೀವನದ ಏರಿಕೆಯಲ್ಲಿದ್ದಾಗಲೇ ಅಸುನೀಗಿದರು. ಕಿರಿಯ ಮಗ ಇದೇ ಅಪಘಾತದಲ್ಲಿ ಮಾರಣಾಂತಿಕ ಪೆಟ್ಟು ತಿಂದು ವಿಕಾರ ರೂಪ ತಾಳಿದಾಗ ಆತನನ್ನು ಬದುಕಿಸಿಕೊಳ್ಳಲು ಜೀವಮಾನದ ಸಂಪಾದನೆಯಾಗಿದ್ದ ಎಂಟು ಎಕರೆ ತೋಟ ಮಾರಿಬಿಟ್ಟಳು. ಬಡತನಕ್ಕೆ ಜಾರಿ ಬಿದ್ದಳು. ಮಗ ಬದುಕಿ ಉಳಿದರೆ ಇಂಥ ಹತ್ತು ಆಸ್ತಿ ಗಳಿಸಬಹುದೆಂದುಕೊಂಡಿದ್ದ ರೆಹಮಾನವ್ವ ಮಾಡಿಸಿಕೊಂಡಿದ್ದ ಬಂಗಾರದ ವಸ್ತ ಒಡವೆಗಳನ್ನು ಮಾರಿದಳೇ ಹೊರತು ಗಳಿಕೆ ಮಾಡಿಕೊಳ್ಳ ಲಾಗಲಿಲ್ಲ. ಮಕ್ಕಳು ಸಹಕರಿಸಲಿಲ್ಲವೋ, ಅಂಥ ಅವಕಾಶಗಳು ಒದಗಿಬರಲಿಲ್ಲವೋ, ವಿಧಿಯೇ ಆಕೆಗೆ ಕೈಕೊಟ್ಟಿತೋ, ಒಂದೂ ಅರ್ಥವಾಗುವುದಿಲ್ಲ.

ರಂಗಕಲಾ ಸಾಮ್ರಾಜ್ಞಿ, ಅಭಿನಯ ಸರಸ್ವತಿ, ರಂಗಭೂಮಿ ರಾಣಿಯೆಂದು ಕೀರ್ತಿಪಡೆದವಳು ವಿಧಿಯ ವಿಕಟಟ್ಟಹಾಸದಲ್ಲಿ ನಿರ್ಗತಿಕಳಾಗಿ ಬದುಕು ನೂಕಿದಳು. ಅನಾಥರಾದ ಮೊಮ್ಮಕ್ಕಳನ್ನು ತನ್ನ ಪಕ್ಕೆಯೊಳಗಿಟ್ಟುಕೊಂಡು ಇದ್ದಬಿದ್ದ ಒಡವೆ ಪಾತ್ರೆ–ಪಡಗ ಮಾರಿ ಅವರನ್ನು ಬೆಳೆಸಿದಳು. ವಿದ್ಯಾವಂತರನ್ನಾಗಿ ಮಾಡಿದಳು. ಅವರನ್ನು ದಾರಿಗೆ ಹಚ್ಚಿದಳು. ತಾನು ಮಾತ್ರ

ಬಡತನದಲ್ಲಿ ಕಾಲ ನೂಕುತ್ತ ಕೆಟ್ಟ ಪರಿಸ್ಥಿತಿಯಲ್ಲಿ ಮರಣವನ್ನಪ್ಪಿದಳು ಎಂಬುದರ ವಿವರಗಳನ್ನು ಮುಂದಿನ ಪುಟಗಳಲ್ಲಿ ಕಂಡುಕೊಳ್ಳಬೇಕಾಗಿದೆ. ತಾಯಿ ಕರುಳು ನಾಟಕದ ಕರುಣಾಜನಕ ಕಥೆಯಷ್ಟೇ ಕರುಣಾಜನಕ ಚರಿತ್ರೆಯಾಗಿದೆ; ರೆಹಮಾನವ್ವ ಕಲ್ಮನಿಯವರ ಬದುಕು.

ರೆಹಮಾನವ್ವ ಕಲ್ಮನಿಯವರು ಜನಿಸಿದ ಕುಕನೂರು ಪುರಾತನ ಊರು. ಇತಿಹಾಸ ಪೂರ್ವಕಾಲದ ಶಿಲಾಯುಗ ಸಂಸ್ಕೃತಿಯ ಕುರುಹುಗಳನ್ನು ಇಲ್ಲಿ ಕಾಣಬಹುದು. ಚಂದ್ರಹಾಸನ ರಾಜಧಾನಿ ಕುಂತಳವೆಂದರೆ ಇದೇ ಎನ್ನುತ್ತಾರೆ. ಶಾಸನಗಳಲ್ಲಿ 'ಕುಕ್ಕನೂರು ೩೦'ನ್ನು ಕುಂತಲ ತಿಲಕವೆಂದು ಬಣ್ಣಿಸಲಾಗಿದೆ. ಇಲ್ಲಿಯ ಅಧಿದೇವತೆ ಜೇಷ್ಠಾದೇವಿ, ಮಹಾಮಾಯೆ (ಮಮ್ಮಾಯವ್ವ) ಯಿಂದಾಗಿ ಜಾಗೃತ ಶಕ್ತಿ ಕೇಂದ್ರವಾಗಿದೆ. ಕಲ್ಯಾಣ ಚಾಲುಕ್ಯರು, ಕಲಚೂರ್ಯರು, ವಿಜಯನಗರದರಸರು ಈ ದೇವಿಗೆ ಅನೇಕ ದತ್ತಿದಾನಗಳನ್ನು ಪೂಜೆಗಾಗಿ ನೀಡಿದ್ದಾರೆ. ಕಲ್ಯಾಣ ಚಾಲುಕ್ಯರು, ಕಲಚೂರ್ಯ ಅರಸರು, ಅವರ ಅಧಿಕಾರಿಗಳು, ಕುಟುಂಬದವರು ಮಹಾಮಾಯೆಗೆ ಪೂಜೆ ಸಲ್ಲಿಸಿ ನಡಕೊಂಡ ಬಗ್ಗೆ ಶಾಸನಗಳಲ್ಲಿ ದಾಖಲೆಗಳಿವೆ. ಕುಂತಲ ನಾಡನ್ನು ಬಾದಾಮಿ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ಕಲಚೂರ್ಯರು, ಸಿಂದರು, ವಿಜಯ ನಗರದರಸರು ಮುಂತಾದವರು ಆಳಿದ್ದಾರೆ. ಇದೊಂದು ಅಗ್ರಹಾರವಾಗಿತ್ತೆಂದು ಸಂಸ್ಕೃತ ಬೋಧಿಸುತ್ತಿದ್ದ ಮಹಾಜನರಿದ್ದ ಊರೆಂದು, ಅದರ ಸೌಂದರ್ಯವನ್ನು ಶಾಸನಗಳಲ್ಲಿ ವರ್ಣಿಸಿ ಹೇಳಲಾಗಿದೆ. ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಪರಮಾಪ್ತನಾಗಿದ್ದ ಮಹಾದೇವ ದಂಡನಾಯಕ ಕಟ್ಟಿಸಿದ ದೇವಾಲಯಗಳ ಚಕ್ರವರ್ತಿಯೆನಿಸಿದ ಮಹಾದೇವ ದೇವಾಲಯ ಕುಕನೂರಿಗೆ ಸಮೀಪದ ಇಟಗಿಯಲ್ಲಿದೆ. ಇಟಗಿ ಹಾಗೂ ಕುಕನೂರು ಸುಪ್ರಸಿದ್ಧವಾದ ವಿದ್ಯಾ ಕೇಂದ್ರಗಳಾಗಿದ್ದವು. ಅಗ್ರಹಾರಗಳಾಗಿದ್ದವು. ಆಗಿನಿಂದ ಈವರೆಗೂ ವ್ಯಾಪಾರೋದ್ಯಮ, ಒಕ್ಕಲುತನ, ಶಿಕ್ಷಣ ಹಾಗೂ ರಾಜಕೀಯ ಕೇಂದ್ರವಾಗಿವೆ. ಸ್ವಾತಂತ್ರ್ಯದ ನಂತರ ನಿಜಾಮರ ಆಡಳಿತದಿಂದ ೧೯೪೮ರ ಸಪ್ಟೆಂಬರ್ ೧೭ರಂದು ವಿಮೋಚನೆ ಪಡೆದಾದ ಮೇಲೆ ರಾಜಕೀಯ ವರ್ಚಸ್ಸನ್ನು ಕಳೆದುಕೊಂಡು ಆರ್ಥಿಕ ಹಿನ್ನಡೆಯನ್ನು ಕಂಡಿವೆ. ಕುಕನೂರು ೧೯೭೮ರಿಂದ ಗ್ರನೈಟ್ ಗಣಿಗಾರಿಕೆ ಉದ್ದಿಮೆಯಿಂದ ಆರ್ಥಿಕ ಅಭಿವೃದ್ಧಿಯನ್ನು ಪಡೆದಿದೆ. ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದೆ. ೧೯೨೨ರಲ್ಲಿ ಆರಂಭಗೊಂಡ ವಿದ್ಯಾನಂದ ಗುರುಕುಲವಿದೆ. ಅದು ಅನೇಕ ಶೈಕ್ಷಣಿಕ ಶಾಖೆಗಳನ್ನು ಆರಂಭಿಸಿ,

ಪದವಿ ಕಾಲೇಜನ್ನು ನಡೆಸುತ್ತಿದೆ. ಶ್ರೀ ಗವಿಸಿದ್ದೇಶ್ವರ ಪ್ರೌಢಶಾಲೆ ಇಲ್ಲಿಯ ಹೆಸರಾಂತ ಶಿಕ್ಷಣ ಸಂಸ್ಥೆ. ಕೆ.ಎಲ್.ಈ. ಸೊಸಾಯಿಟಿಯವರು ಇಲ್ಲಿ ಕಾಲೇಜು ಆರಂಭಿಸಿದ್ದಾರೆ. ಜವಾಹರ ನವೋದಯ ಶಾಲೆ ಇಲ್ಲಿಯೇ ನಡೆದಿದೆ. ವರ್ಷಕ್ಕೊಮ್ಮೆ ಗುದ್ನೇಶ್ವರ ಜಾತ್ರೆ ನಡೆದು ಭಕ್ತಿಯ ಹೊಳೆಯನ್ನು ಹರಿಸುತ್ತದೆ.

ಹಿಂದಿನ ಈ ಎಲ್ಲ ನೆನಪುಗಳ ಬುತ್ತಿ ಕಟ್ಟಿಕೊಂಡು ರೆಹಮಾನವ್ವನನ್ನು ಕುರಿತು ಬರೆಯಲು ಮಾಹಿತಿ ಸಂಗ್ರಹಕ್ಕಾಗಿ ಹೊರಟೆ. ರೆಹಮಾನವ್ವ ಕಲ್ಮನಿ ಹೆತ್ತದ್ದು ೧೧ ಮಕ್ಕಳನ್ನು. ಅವರಲ್ಲಿ ಈಗ ಉಳಿದಿರುವವರೊಬ್ಬರೇ ಬಾಬಣ್ಣ ಕಲ್ಮನಿ. ಅವರು ಕೂಡ ರಂಗಭೂಮಿಯ ಹಿರಿಯ ನಟರು. ನಾಟಕ ಕಂಪನಿ ಮಾಲೀಕರು. ಅವ್ವ ರೆಹಮಾನವ್ವ ಕಲ್ಮನಿಯವರು ಸ್ಥಾಪಿಸಿದ ಶ್ರೀ ಲಲಿತ ಕಲಾ ನಾಟ್ಯಸಂಘವನ್ನು ಜೀವಂತವಾಗಿರಿಸಿಕೊಂಡು, ಸ್ವಂತದ್ದಾದ ವಿಜಯಲಕ್ಷ್ಮೀ ನಾಟಕ ಕಂಪನಿ ಮೂಲಕ ಈಗಲೂ ನಾಟಕಗಳನ್ನು ಪ್ರಯೋಗಿಸುತ್ತಿರುತ್ತಾರೆ. ಅವರೊಬ್ಬ ಹಿರಿಯ ನಟರಾಗಿದ್ದರೂ ಅಹಂಕಾರವಿಲ್ಲ, ಬಿಗುಮಾನವಿಲ್ಲ, ಒಳಗೊಂದು ಹೊರಗೊಂದು ಗೊತ್ತಿಲ್ಲ, ದೊಡ್ಡನಗು, ಯಾವದಕ್ಕೂ ತಲೆ ಬಿಸಿಮಾಡಿಕೊಳ್ಳದ ಸ್ವಭಾವ; ನಿರ್ಲಿಪ್ತರು. ಬರುವ ಕಡಿಮೆ ಆದಾಯ ಅಂದರೆ ಇವರಿಗೆ ಒಂದು ಸಾವಿರ ರೂಪಾಯಿ, ಅವರ ಶ್ರೀಮತಿಯವರಿಗೆ ಒಂದು ಸಾವಿರ ರೂಪಾಯಿ ಮಾಸಾಶನ ದೊರಕುತ್ತಿದೆ. ಇನ್ನುಳಿದ ಯಾವ ಆದಾಯವೂ ಇಲ್ಲ, ನಾಟಕಗಳು ಸಿಕ್ಕರೆ ೨೦೦–೩೦೦ ಕಿ.ಮೀ. ದೂರ ಪ್ರಯಾಣ ಮಾಡುತ್ತಾರೆ. ಕೊಟ್ಟಷ್ಟು ದುಡ್ಡು ತೆಗೆದುಕೊಂಡು ನಾಟಕ ಮುಗಿದ ತಕ್ಷಣ ಹೊರಟು ಬಿಡುತ್ತಾರೆ. ಇವರಿಗೆ ಯಾವ ವ್ಯಸನಗಳಿಲ್ಲ. ತಮ್ಮ ಟ್ರೂಪಿನ ಸಂತ ಶಿಶುನಾಳ ಶರೀಫ ಅಥವಾ ನಾಗಲಿಂಗಲೀಲೆಗಳಿಗೆ ಆಹ್ವಾನವಿದ್ದರೆ ಅವರೊಂದಿಗೆ ಹೋಗಿ ಪ್ರದರ್ಶನ ನೀಡುತ್ತಾರೆ. ಕಲೆಕ್ಷನ್ ಆದರೆ ಮಾತಾಡಿದಷ್ಟು ಹಣ ಕೊಡುತ್ತಾರೆ. ಕಲೆಕ್ಷನ್ ಆಗದಿದ್ದರೆ, ಯಾರೂ ಮನೆಯಿಂದ ದುಡ್ಡು ತಂದು ಹಾಕಿಕೊಡುವುದಿಲ್ಲ. ಹಾಗಂತ ತಮ್ಮೊಂದಿಗಿನ ತಂಡದ ಕಲಾವಿದರಿಗೆ ಮೊದಲು ನಿಗದಿತ ಸಂಭಾವನೆ ನೀಡಿ ಉಳಿದರೆ ತಾವು ತೆಗೆದುಕೊಳ್ಳುತ್ತಾರೆ. ಇರದಿದ್ದರೆ ಅವರಿಂದಲೇ ತಮ್ಮೂರು ಕುಕನೂರಿಗೆ ಬರುವಷ್ಟು ಖರ್ಚಿನ ಹಣ ಇಸಿದುಕೊಂಡು ಊರು ತಲುಪುತ್ತಾರೆ. ಇದ್ದರೆ ಮನೆಗೆ ಹಣ ಕೊಡುತ್ತಾರೆ. ಇರದಿದ್ದರೆ ಯಾರನ್ನೂ ಬಯ್ಯದೆ, ಅವರನ್ನು ಹೀಯಾಳಿಸದೆ ಹೆಂಡತಿ ಮೆಹಬೂಬಬಿ ಅವರಿಗೆ ದೊಡ್ಡ ನಗೆಯಿಂದಲೇ ಕೈಕೊಟ್ಟಿತು ಈ ಸಲ ಎಂದು ಹೇಳುತ್ತಾರೆ. ಅವರಾದರೂ ಇನ್ನೇನು ಗತಿ ಎಂದು ಗೊಣಗುವುದಿಲ್ಲ, ಮುಖ

ಸಣ್ಣದು ಮಾಡಿಕೊಳ್ಳುವುದಿಲ್ಲ, ಕೈ ಹಿಡಿದ ೪೦ ವರ್ಷಗಳಿಂದಲೂ ಗಂಡನನ್ನು ಗದರಿಸಿದ್ದಿಲ್ಲ, ಮುಖ ತೊಳೆದು ಬರ್‍ರಿ, ಊಟ ಮಾಡ್ರಿ, ನಿದ್ದಿಗೆಟ್ಟೀರಿ ಆರಾಮು ನಿದ್ದೆ ಮಾಡ್ರಿ ಎನ್ನುತ್ತಾರೆ. ಅವರು ಹಾಗೆಯೇ ಮಾಡುತ್ತಾರೆ. ಇಂಥ ಇದ್ದೊಬ್ಬ ಮಗ ಬಾಬಣ್ಣನವರನ್ನು ಹುಡುಕಿಕೊಂಡು ಹೊರಟೆ. ನನಗಾಗಿ ಗಂಡ ಹೆಂಡತಿ ಮನೆಯಲ್ಲಿ ಕಾಯುತ್ತಿದ್ದರು. ದೊಡ್ಡ ನಗೆಯೊಂದಿಗೆ 'ಬರ್‍ರಿ ಬರ್‍ರಿ' ಎಂದರು. ಬಾಬಣ್ಣನಿಗೆ ತಮ್ಮ ಅವ್ವನ ಬಗ್ಗೆ ತುಂಬ ಅಕ್ಕರೆ, ಅವರ ಅತ್ತೆ ಬಗ್ಗೆ ಹೆಂಡತಿಗೆ ತುಂಬ ಗೌರವ. ಅವರ ತಾಯಿಯ ಬಗ್ಗೆ ಪ್ರಶ್ನಿಸಿದರೆ ಗೊತ್ತಿದ್ದುದನ್ನು ಹೇಳಿ ಬಿಡುತ್ತಾರೆ. ಗೊತ್ತಿರದಿದ್ದರೆ ಹೆಂಡತಿಯ ಮುಖ ನೋಡುತ್ತಾರೆ. ಆಗ ಅವರು ತಮಗೆ ಗೊತ್ತಿದ್ದುದನ್ನು ಸರಿಯಾದದ್ದನ್ನು ಹೇಳಿ ತಿದ್ದುತ್ತಾರೆ. ಮೊದಲನೇ ಪ್ರಶ್ನೆ ನಿಮ್ಮ ತಾಯಿಯ ತಾಯಿ ಹೆಸರೇನು? ಎಂದು ಕೇಳಿದರೆ, ಆಕೆ ಯಾರ ಮಗಳೆಂದು ಕೇಳಿದರೆ ತಬ್ಬಿಬ್ಬು ಇಬ್ಬರೂ. ಇವರ ಹಿರಿಯ ಮಗಳು ದಾನಮ್ಮ ಅದೇ ಕುಕನೂರಿನಲ್ಲಿ ಗಂಡನ ಮನೆಯಲ್ಲಿದ್ದಾಳೆ. ಆಕೆಯ ಹತ್ತಿರ ಕರೆದುಕೊಂಡು ಹೋದರು. ಆಕೆ ಹೇಳಿದಳು. ಬಾಬಾನ (ಅಪ್ಪನ) ತಾಯಿ ರೆಹಮಾನವ್ವ ಅಂದರೆ ನಮ್ಮ ಅಜ್ಜಿಯ ಹೆಸರು: ರೆಹಮಾನ್‌ಬಿ. ರಂಗ ಭೂಮಿ ರಾಣಿಯೆಂದು ಪ್ರಸಿದ್ಧರಾದಾಗ ರೆಹಮಾನ್ ಜಾನ್ ಎಂದು ಎಲ್ಲರೂ ಕರೆಯುತ್ತಿದ್ದರು. ಹಿಂದಿನ ನಾಟಕ ಕಂಪನಿಗಳ ಹ್ಯಾಂಡ್‌ಬಿಲ್ (ಕರ ಪತ್ರ) ಗಳಲ್ಲಿ ರೆಹಮಾನ್ ಜಾನ್ ಕುಕನೂರು ಎಂದು ಮುದ್ರಿಸಲಾಗಿದೆ. ಹೌದು ನನಗೂ ನೆನಪಿಗೆ ಬಂದಿತು. ಹೈದರಾಬಾದ್ ವಿಮೋಚನೆ (೧೯೪೮ರ ಸಪ್ಟೆಂಬರ್ ೧೭) ಗೊಂಡಿತ್ತು, ಅದಕ್ಕೆ ರಜಾಕಾರರ ಹಾವಳಿ, ಪಠಾಣರ ಹಾವಳಿ ಎಂದೆನ್ನುತ್ತಾರೆ. ಅದಾಗಿ ವರ್ಷೊಪ್ಪತ್ತಾಗಿತ್ತು, ನಮ್ಮೂರು ಬಿಸರಹಳ್ಳಿಯಲ್ಲಿ ಚಂದ್ರೋದಯ ಸಂಗೀತ ನಾಟಕ ಮಂಡಳಿಯೆಂಬ ಹವ್ಯಾಸಿ ರಂಗ ಕಲಾವಿದರು, ಅಕ್ಷಯಾಂಬರ ನಾಟಕ ಅಭಿನಯಿಸುತ್ತಿದ್ದರು. ದ್ರೌಪದಿ ಪಾತ್ರಕ್ಕಾಗಿ ಎಲ್ಲೂಬಾಯಿ ಗದಗ ಎಂಬವರು ಬಂದಿದ್ದರು. ಆಕೆ ಮುಂದಿನ ಪ್ರಯೋಗಗಳಿಗೆ ಬರಲಿಲ್ಲ, ಆಗ ನಮ್ಮೂರಿಗೆ ಹತ್ತಿರದ ಕುಕನೂರು ರೆಹಮಾನ್‌ಜಾನ್ ಎಂಬವರು ದ್ರೌಪದಿ ಪಾತ್ರ ವಹಿಸುತ್ತಾರೆಂದು ಕರಪತ್ರ ಹಂಚಲಾಗುತ್ತಿತ್ತು, ಅದೇ ಆಗ ಅಕ್ಷರ ಲೋಕಕ್ಕೆ ಕಾಲಿಡುತ್ತಿದ್ದ ನಾನು ಓದು ಬರಹ ಬಾರದವರಿಗೆ ಓದಿ , ಓದಿ ಹೇಳುತ್ತಿದ್ದೆನಲ್ಲದೆ, ನಾಟಕದವರು ಸೈಕಲ್ ಮೇಲೆ ಓಡಾಡಿ ಪ್ರಚಾರ ಮಾಡುವಂತೆ ನಾವೂ ರೆಹಮಾನ್ ಜಾನ್ ಕುಕನೂರು ದ್ರೌಪದಿ ಪಾತ್ರ ಮಾಡುವರೆಂದೂ ತಪ್ಪದೆ ನೋಡಿರಿ. ನೋಡದೆ ನಿರಾಶರಾಗಬೇಡಿರಿ. ನಿರಾಶರಾಗಿ ಮರುಗಬೇಡಿರಿ ಎಂದು

ಪ್ರಚಾರ ಮಾಡುತ್ತಿದ್ದೆವು. ಇದೆಲ್ಲ ನೆನಪು ಮರುಕಳಿಸಿತು. ಅಜ್ಜಿಗೆ ತುಂಬ ಹತ್ತಿರದಾಕೆ ಮೊಮ್ಮಗಳು ದಾನಮ್ಮ, ಬಾಬಣ್ಣನ ಹಿರಿಯ ಮಗಳು. ಮುಪ್ಪಿನ ಕಾಲದಲ್ಲಿ ಅಜ್ಜಿಯ ಹತ್ತಿರವಿದ್ದಳು. ರೆಹಮಾನವ್ವನ ಇಬ್ಬರು ಮಕ್ಕಳು ಲಲಿತಮ್ಮ ಮತ್ತು ಮಂಜುಳಾ ಕಾರು ಅಪಘಾತದಲ್ಲಿ ಅಸುನೀಗಿದ ಬಳಿಕ ಆಕೆಗೆ ಶ್ರೀ ಲಲಿತಕಲಾ ನಾಟ್ಯ ಸಂಘವನ್ನು ಮುಂದುವರಿಸಲಾಗಲಿಲ್ಲ. ಮಗ ಬಾಬಣ್ಣನ ಶ್ರೀ ವಿಜಯಲಕ್ಷ್ಮೀ ನಾಟ್ಯಸಂಘವೂ ಕುಂಟುತ್ತ ನಡೆದು ನಿಂತುಬಿಟ್ಟಿತು. ಅಪಘಾತದಲ್ಲಿ ಸತ್ತವರೇನೋ ಸತ್ತರು. ಹಿರಿಯ ಮಗಳು ಲಲಿತಮ್ಮನ ಮಕ್ಕಳು ಮಮತಾ ಮತ್ತು ನವೀನರು ತೀರ ಚಿಕ್ಕವರು. ದಾನಮ್ಮ ಇವರಿಗಿಂತ ಮೂರು ವರ್ಷ ಹಿರಿಯಳು. ಈ ಮೂವರನ್ನು ಬೆನ್ನಿಗೆ ಕಟ್ಟಿಕೊಂಡು ಇದೇ ಕಾರು ಅಪಘಾತದಲ್ಲಿ ಮುನ್ನಾನ ಮುಖ ಮೋರೆ ದವಡೆಗಳೆಲ್ಲ ಮುರಿದು ಹನುಮಪ್ಪನ ಮುಸುಡಿಯಾಗಿತ್ತು. ಸ್ಫುರದ್ರೂಪಿಯಾಗಿದ್ದ ಮುನ್ನಾ, ಹಲವು ಹತ್ತು ಪಾತ್ರಗಳಲ್ಲಿ ಮಿಂಚುತ್ತಿದ್ದ ಮುನ್ನಾ, ಆಕಾರದಪ್ಪಿ ಹೋಗಿದ್ದ, ನೋವಿನಿಂದ ಒದ್ದಾಡುತ್ತಿದ್ದ. ಇದಕ್ಕಿಂತ ಹೆಚ್ಚಾಗಿ ಅಕ್ಕನವರಿಬ್ಬರು ಸತ್ತು ಸುಖ ಕಂಡರು. ತಾನು ಉಳಿದು ಅಂಗವಿಕಲನಾಗಿ ಹೇಗೆ ಬದುಕಬೇಕೆಂಬ ಸಮಸ್ಯೆ ಆತನನ್ನು ಕಾಡುತ್ತಿತ್ತು. ಪಾತ್ರ ಮಾಡುವುದನ್ನುಬಿಟ್ಟು, ತನಗೆ ಬೇರೇನೂ ಬಾರದೆಂದೂ ವ್ಯಥೆಪಡುತ್ತಿದ್ದನು. ಅಪಘಾತದಲ್ಲಿ ತಾನುಳಿದು ಜೀವಂತ ಹೆಣವಾದೆನಲ್ಲ! ಎಂದು ಕಣ್ಣೀರು ಹಾಕುತ್ತಿದ್ದನು. ತಾಯಿ ಕರುಳು ಕುದ್ದುಹೋಯಿತು. ಕೊನೆಯ ಮಗ ಮುನ್ನಾನನ್ನು ಹೇಗಾದರೂಮಾಡಿ ಉಳಿಸಿಕೊಳ್ಳಬೇಕು, ಅವನನ್ನು ಮುಂಚಿನಂತೆ ಮಾಡಬೇಕು, ಮತ್ತೆ ಪಾತ್ರಗಳನ್ನು ಮಾಡುವಂತಾಗಬೇಕೆಂದು ಹಂಬಲಿಸಿದಳು. ತನ್ನ ಜೀವಮಾನದ ಅವಧಿ ಸಂಪಾದನೆ ಕುಕನೂರಿನ ಮುಂದಿನ ಎಂಟು ಎಕರೆ ಮಸಾರಿ ಭೂಮಿಯ ತೋಟ! ಕಲ್ಮನಿಯವರ ಮನೆತನದ ದೊಡ್ಡ ಆಸ್ತಿ. ಊರವರಿಗೆಲ್ಲ ಆ ತೋಟದ ಮೇಲೆ ಕಣ್ಣಿತ್ತು. ನಾಟಕ ಕಂಪನಿ ಮಾಲೀಕಳಾಗಿದ್ದಂತೆ ತೋಟದ ಒಡತಿಯಾಗಿದ್ದಳು. ಹಿರಿಯ ಮಗ ಬಾಬಣ್ಣನನ್ನು ಕರೆದು ಕೇಳಿದಳು. ತಮ್ಮನನ್ನು ಉಳಿಸಬೇಕೆಂದು ಬೇಡಿಕೊಂಡಳು. ಆತನನ್ನು ಉಳಿಸಲು ತೋಟ ಮಾರಿಬಿಡು ಎಂದಾಗ ಬಾಬಣ್ಣ ಸಮ್ಮತಿ ಸೂಚಿಸಿದನು. ಮುನ್ನಾ ಗುಣಮುಖನಾದರೆ ಅಂಥ ಹತ್ತು ತೋಟಗಳಿಸಬಹುದೆಂದು ತಾಯಿಗೆ ಹೇಳಿದನು. ಮಂಗಳೂರಿನ ಮಣಿಪಾಲ ಆಸ್ಪತ್ರೆಯಲ್ಲಿದ್ದು ಚಿಕಿತ್ಸೆಕೊಡಿಸಿದಳು. ೨–೩ ವರ್ಷಗಳ ಸತತ ಚಿಕಿತ್ಸೆಯಿಂದ ಬದುಕಿ ಉಳಿದನಲ್ಲದೆ, ಮುಂದೆ ಪೌರಾಣಿಕ ನಾಟಕಗಳಲ್ಲಿ ದೈತ್ಯ ಪಾತ್ರಗಳನ್ನು, ಸಾಮಾಜಿಕ ನಾಟಕಗಳಲ್ಲಿ

ನಾಯಕ ನಟನಾಗಿ, ವಿಲನ್ ಆಗಿ ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿ ಹೆಸರುವಾಸಿಯಾದ. ಸ್ವಂತ ನಾಟಕ ಕಂಪನಿ ನಿಂತು ಹೋಗಿತ್ತು. ತಾನು ಬೇರೆ ಕಂಪನಿ ಸೇರಿಕೊಂಡಿದ್ದರೆ, ಹಳ್ಳಿಯ ಅಮೆಚ್ಯೂರ ನಾಟಕಗಳಿಗೆ ಹೋಗಿದ್ದರೆ ಸಂಭಾವನೆ ಬರುತ್ತಿತ್ತು. ಪೆಟ್ಟುತಿಂದು ನರಳುವ ಮಗನನ್ನು ಬಿಟ್ಟು ದೂರ ಸರಿಯುವಂತಿಲ್ಲ, ಕೈಯಲ್ಲಿ ಕಾಸಿಲ್ಲ, ಉತ್ಪನ್ನವಿಲ್ಲ, ನಾಟಕಗಳಿಲ್ಲ, ಅನಾಥರಾದ ಮೊಮ್ಮಕ್ಕಳು, ಬಾಬಣ್ಣಾ ಆತನ ಹೆಂಡತಿ ಹೊಟ್ಟೆ ಪಾಡಿಗಾಗಿ ಕಂಪನಿಯಿಂದ ಕಂಪನಿಗೆ ಅಲೆದಾಡುತ್ತ ತಮ್ಮ ಮಕ್ಕಳನ್ನು ಈಕೆಯಲ್ಲಿಯೇ ಬಿಟ್ಟು ಹೋಗಿದ್ದರು. ಇನ್ನೊಬ್ಬ ಮಗ ಉಮೇಶ ಬೇರೆ ಕಂಪನಿಗಳಲ್ಲಿದ್ದ. ದಾನವ್ವ, ಬಾಬಣ್ಣಾ ಮತ್ತು ಆತನ ಪತ್ನಿ ಮೆಹಬೂಬಬಿ ಈ ಎಲ್ಲ ವಿಷಯಗಳನ್ನು ತಿಳಿಸಿದಾಗ ನನ್ನ ಕೊರಳ ಸೆರೆ ಬಿಗಿದುಕೊಂಡಿದ್ದವು. ಆ ದುಃಖದ ಸನ್ನಿವೇಶದಿಂದ ಹೊರಬರಬೇಕಾದರೆ ಸಮಯವೇ ಹಿಡಿಯಿತು.

ಹುಟ್ಟುತ್ತಲೇ ರೆಹಮಾನ್‌ಬಿ ಹೆಸರಿನ ರೆಹಮಾನವ್ವ ರಂಗಭೂಮಿಯ ಪ್ರಖ್ಯಾತ ನಟಿಯಾದಳು. ಇವರದು ಕುಕನೂರಿನ ಪಾತರದವರ ಮನೆತನ. ಇವರಿಗೆ ಮೊದಲು ಸಂದಿಮನಿಯವರೆನ್ನುತ್ತಿದ್ದರು. ಕಲ್ಲಿನ ಮನೆ ಕಟ್ಟಿಸಿಕೊಂಡು ವಾಸಿಸಿದ್ದರಿಂದ ಕಲ್ಮನಿಯವರೆಂದು ಕರೆಯಿಸಿಕೊಂಡರು. ಈ ಮನೆತನದ ಹಸ್ನಮ್ಮ ಗಟ್ಟಿ ಹೆಣ್ಣು ಮಗಳು. ಕುಕನೂರು, ಇಟಗಿ ಹಾಗೂ ತಳಕಲ್ಲಗಳ ತಮ್ಮ ಪಾತರದವರ ಮನೆತನಗಳೊಂದಿಗೆ ಯಾವಾಗಲೂ ಸ್ಪರ್ಧೆಗಿಳಿಯುತ್ತಿದ್ದಳು. ಇದರಿಂದಾಗಿ ಈಕೆಯ ಮೇಲೆ ಎಲ್ಲರ ಕಣ್ಣಿತ್ತು. ಹಸ್ನಮ್ಮನ ಮಗಳು ಹುಸ್ನಮ್ಮ. ಆ ಕಾಲದಲ್ಲಿ ಹುಸ್ನಮ್ಮ ಕನ್ನಡ, ಉರ್ದುಗಳನ್ನು ಕಲಿತುಕೊಂಡು ಮಿಡ್ಲ್ (ಏಳನೆಯ ತರಗತಿ) ಪಾಸಾಗಿ ಶಿಕ್ಷಕಿಯಾಗಿದ್ದಳು. ಇವರ ಮಗಳು ರೆಹಮಾನವ್ವ. ರೆಹಮಾನವ್ವ ಹುಟ್ಟಿದ್ದು, ಮೂಲಾ ನಕ್ಷತ್ರದ ಪ್ರಥಮ ಚರಣದಲ್ಲಿ, ಬಾಯಿ ಮೇಲಾಗಿ ಕೊರಳಿಗೆ ಮಾಸ ಸುತ್ತಿಕೊಂಡು ಹುಟ್ಟಿದಾಕೆ. ಹುಟ್ಟಿದ ನಕ್ಷತ್ರದಿಂದಲೇ ಮನೆಯವರು ನಡುಗಿ ಹೋದರು. ನಿಂತು ನಿಂತಲ್ಲಿಯೇ ಹಿಂಡುತ್ತಿದ್ದ ಎಮ್ಮೆ ಸತ್ತು ಹೋಯಿತು. ಬಾಣಂತನ ಮಾಡಿಸಿದ ಸೂಲಗಿತ್ತಿಗೆ ಸಾವೊಂದು ಕೇಡೊಂದುಂಟಾಯಿತಂತೆ, ಶಿಕ್ಷಕಿ ಹುಸ್ನಮ್ಮ ರೆಹಮಾನ್‌ಬಿಯನ್ನು ಹಡೆದ ಮೇಲೆ ಏಳೆಂಟು ತಿಂಗಳು ರೋಗದಿಂದ ನರಳಿ ನರಳಿ ತೀರಿಕೊಂಡಳು. ತಂದೆ ಯಾರೆಂಬುದು ಗೊತ್ತಿಲ್ಲ, ಯಾರೆಂದು ಮಗಳಿಗೆ ಹೇಳಲು ಆಕೆ ಬದುಕಿ ಉಳಿಯಲಿಲ್ಲ, ಅನಾಥ ಶಿಶುವಿನ ಪಾಲನೆ, ಪೋಷಣೆಯ ಭಾರ ಅಜ್ಜಿ ಹಸ್ನಮ್ಮನ ಮೇಲೆ ಬಿತ್ತು.

ರೆಹಮಾನಬಿ ಎಂಟ್ಹತ್ತು ವರ್ಷದವಳಾದ ಮೇಲೆ, ತಳಕಲ್ಲದ ಶ್ರೀಮಂತ ರೈತರಾದ ವೆಂಕರೆಡ್ಡಿಯವರ ಮನೆಯಲ್ಲಿ ದನ ಕಾಯ್ದುಕೊಂಡಿರಲು ಇಟ್ಟಳು. ಬಡತನದಿಂದಾಗಿ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಕಷ್ಟವಾಗಿರುವಾಗ ಮೊಮ್ಮಗಳನ್ನು ಜೋಪಾನ ಮಾಡುವುದು ಇನ್ನೂ ಕಷ್ಟ. ಲಂಗವುಟ್ಟು ಕುಕನೂರಿನಲ್ಲಿ ಶಾಲೆಗೆ ಹೋಗುತ್ತಿದ್ದ ರೆಹಮಾನ್‌ಬಿ ಶ್ರೀಮಂತರ ಮನೆಯ ದನಕಾಯುವ ಜೀತದಾಳಾದಳು. ತಳಕಲ್ಲು, ಜೋಳದರಾಶಿ ಅಂಕೋಲಾ ೬೩ನೆಯ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಕೊಪ್ಪಳದಿಂದ ಭಾನಾಪೂರ ರೈಲು ನಿಲ್ದಾಣದಲ್ಲಿಳಿದು ೨ ಕಿಲೋ ಮೀಟರ ಅಂತರ ಕ್ರಮಿಸಬೇಕು. ಕಪ್ಪು ಹಾಗೂ ಮಸಾರಿ ಭೂಮಿಯಿಂದ ಸಂಪದ್ಭರಿತ ಊರಾಗಿದೆ. ಹತ್ತನೆಯ ಶತಮಾನದಲ್ಲಿ ಇದೊಂದು ಅಗ್ರಹಾರವಾಗಿತ್ತು, ಕ್ರಿ. ಶ. ೯೧೧ ರಲ್ಲಿ ಕಲ್ಯಾಣದ ಆಹವಮಲ್ಲ ಆಳಿಕೆಮಾಡುತ್ತಿರುವಾಗ ಇವನ ಸಾಮಂತ ಸೋಭನರಸು, ಬನವಾಸಿ ೧೨,೦೦೦ ವನ್ನಾಳುತ್ತಿದ್ದನು. ಇವನ ಕೈಕೆಳಗೆ ಸಾವಿಯಣ್ಣ ಕುಕ್ಕನೂರು –೩೦ನ್ನಾಳುತ್ತಿದ್ದ. ಈತ, ಅಗ್ರಹಾರ ತಳಕಲ್ಲಿನ ನಾಗಲೇಶ್ವರ ದೇವಾಲಯಕ್ಕೆ ೪೦೦ ಮತ್ತರು ಭೂಮಿ ಧಾರೆಯೆರೆದಿದ್ದಾನೆ. ತಳಕಲ್ಲದಲ್ಲಿ ಮಹಾಮಹಿಮ, ಸೂಫಿ ಸಂತರಾದ ಹುಸೇನ್ ಶಾವಲಿ ದರ್ಗಾವಿದೆ. ಕಳೆದ ಶತಮಾನದ ಆದಿಯಲ್ಲಿದ್ದ ಅವಧೂತ, ಅಜ್ಜಾರಾಮಪ್ಪನವರ ಗದ್ದುಗೆಯಿದೆ. ಪಂ. ಪಂಚಾಕ್ಷರಿ ಗವಾಯಿಗಳು ಗೌರವಿಸುತ್ತಿದ್ದ, ಪಂ. ಮಲ್ಲಿಕಾರ್ಜುನ ಮನಸೂರ ಪಂ. ರಾಜಗುರುಗಳಂಥ ಸಂಗೀತ ದಿಗ್ಗಜರು ಹುಡುಕಿಕೊಂಡು ಬಂದು ಅವರೆದುರಿಗೆ ವಿನೀತರಾಗಿ ಹಾಡುತ್ತಿದ್ದ ತಬಲಾ ವಿದ್ವಾಂಸ ಖಾನಪ್ಪಗೌಡರ ಊರು. ಇವರ ಶಿಷ್ಯರಾದ ಮರಿತಿಮ್ಮಪ್ಪ ಪತ್ತಾರ, ಸೋದರ ಕಾಳಪ್ಪ ಪತ್ತಾರ ಮೊದಲಾದವರು ಕರ್ನಾಟಕದ ಸುಪ್ರಸಿದ್ಧ ತಬಲಾವಾದಕರಾಗಿದ್ದಾರೆ. ಹಾರ್ಮೋನಿಯಂ, ಪಿಟೀಲು, ಮದ್ದಳೆ, ಕೊಳಲು, ಶಹನಾಯಿ ವಾದಕರೂ ಇಲ್ಲಿದ್ದರು. ಶಿರಹಟ್ಟಿ ವೆಂಕೋಬರಾಯರ, ಗರುಡ ಸದಾಶಿವರಾಯರ, ವಾಮನರಾಯರ ನಾಟಕ ಕಂಪನಿಗಳಲ್ಲಿದ್ದ ರಂಗ ಕಲಾವಿದರು, ಸಂಗೀತಗಾರರು ಭೆಟ್ಟಿ ನೀಡುವ ತಾಣವಾಗಿತ್ತು. ಇದರ ಜೊತೆಗೆ ನಾಟಕದ ತಳಕಲ್ಲ ವೆಂಕರೆಡ್ಡಿಯವರ ಆಕರ್ಷಣೆ ಬೇರೆ ಈ ಊರಿಗಿದೆ.

ಈಗಲೂ ತಳಕಲ್ಲ ಎಂದ ಕೂಡಲೇ ರಂಗಾಸಕ್ತರಿಗೆ ನೆನಪಾಗುವುದು ಉರುಸಿನ ವೆಂಕಪ್ಪ, ನಾಟಕದ ವೆಂಕಪ್ಪ, ಶ್ರೀ ರಂಜನಿ ಸಂಗೀತ ನಾಟಕ ಮಂಡಳಿ ಒಡೆಯರಾದ ತಳಕಲ್ಲ ವೆಂಕರೆಡ್ಡಿ. ಇವರ ಪೂರ್ಣ ಹೆಸರು ವೆಂಕರೆಡ್ಡಿ

ಸೋಮರೆಡ್ಡಿ ಬಸವರೆಡ್ಡಿಯವರ ಅಂತ. ಇವರ ತಂದೆ ಸೋಮರೆಡ್ಡಿ ಊರಿನ ಆಗರ್ಭ ಶ್ರೀಮಂತರು. ಇವರಿಗೆ ಒಬ್ಬನೇ ಒಬ್ಬ ಪುತ್ರ ಈ ವೆಂಕರೆಡ್ಡಿ, ನಾಟಕದ, ಉರುಸಿನ ವೆಂಕರೆಡ್ಡಿ ! ಈತನಿಗೆ ಹಲವು ಉತ್ತಮ ಹವ್ಯಾಸಗಳಿದ್ದವು. ಊರಿನ ಹಾಡುಗಾರರನ್ನು ಸೇರಿಸಿ ಭಜನಾ ಮೇಳ ಕಟ್ಟಿದ. ಊರಿನ ಜಾತ್ರೆ–ಉರುಸು–ಹಬ್ಬಗಳಂದು ಕುಸ್ತಿ, ಬಯಲಾಟ, ನಾಟಕ, ಗೀಗೀ ಮೇಳ, ರಿವಾಯತ್ ಪದಗಳು ಮುಂತಾದವುಗಳನ್ನು, ಊರಿನಲ್ಲಿ ಯುವಕರನ್ನು ಸೇರಿಸಿ ಕೋಲಾಟ ಪದ, ಕುಣಿತ, ಮರಗಾಲು ಕಟ್ಟಿಕೊಂಡು ಕುದುರಿ ಕುಣಿತ ಇತ್ಯಾದಿ ಜಾನಪದ ನೃತ್ಯಗಳನ್ನೇರ್ಪಡಿಸುತ್ತಿದ್ದನು. ಒಬ್ಬನೇ ಮಗನಾಗಿದ್ದರಿಂದ ತಂದೆ ಮಗನ ಹವ್ಯಾಸಗಳಿಗೆ ಸಹಕಾರ ನೀಡಿ, ಪ್ರೋತ್ಸಾಹಿಸುತ್ತಿದ್ದನು. ೧೯೩೮ರಲ್ಲಿ ತಳಕಲ್ಲ ವೆಂಕರೆಡ್ಡಿ ಶ್ರೀ ರಂಜನಿ ಸಂಗೀತ ನಾಟಕ ಮಂಡಳಿ ಸ್ಥಾಪಿಸಿರುವುದಾಗಿ ರಂಗಭೂಮಿ ಇತಿಹಾಸ ಕೃತಿಗಳಲ್ಲಿ ದಾಖಲಾಗಿದೆ. ಆದರೆ ಇವರ ರಂಗಭೂಮಿ ಚಟುವಟಿಕೆಗಳು ಅಂದರೆ ನಾಟಕ ಪ್ರಯೋಗ ೧೯೩೮ಕ್ಕೂ ೧೦ ವರ್ಷ ಮುನ್ನ ೧೯೨೮ ರಿಂದಲೇ ಆರಂಭಗೊಂಡಿರುವುದಾಗಿ ಊರಿನ ಕಲಾಸಕ್ತ ಬಂಧುಗಳು ಅಭಿಪ್ರಾಯಪಡುತ್ತಾರೆ. ರಂಗಭೂಮಿಯ ಆ ಕಾಲದ ಸಂಗತಿಗಳನ್ನು ಗಮನಿಸಿದರೆ ಈ ಮಾತು ಸತ್ಯವೂ ಹೌದು. ಇಲ್ಲಿಯ ರಂಗ ಚಟುವಟಿಕೆಗಳ ಆಧಾರದಿಂದ ಈ ನಿರ್ಣಯಕ್ಕೆ ಬಂದಿದ್ದೇನೆ. ಹುಸೇನ್‌ಶಾವಲಿ ದರ್ಗಾದ ಉರುಸು ಬಂದಾಗ ಊರಿನ ಯುವಕರನ್ನು ಅದರಲ್ಲಿಯೂ ಹೊಲ ಮನೆಗಳಿರದ ಕೂಲಿ ಕಾರ್ಮಿಕರು, ನಿರಾಶ್ರಿತರನ್ನು ಸೇರಿಸಿಕೊಂಡು ನಿರಾಶ್ರಿತರ ನಾಟಕ ಕಂಪನಿ ಸಂಘಟಿಸಿದ್ದನು. ಉರುಸಿನಲ್ಲಿ ಈ ನಾಟಕಗಳನ್ನು ಆಡಿಸುತ್ತಿದ್ದುದರಿಂದ ಉರುಸಿನ ಯಂಕಪ್ಪ ಎಂದು ಗ್ರಾಮಸ್ಥರು ಹೆಸರಿಟ್ಟಿದ್ದರು. ನಮ್ಮ ಮೊಗಲಾಯಿ ಪ್ರಾಂತದಲ್ಲಿ ಮಳೆಗಾಲದಲ್ಲಿ ಮಲ್ಲೇಶಪ್ಪ ಎಂಬವರು ನಾಟಕಗಳನ್ನಾಡಿಸು ತ್ತಿದ್ದರು. ಆಗ ಮಳೆಗಾಲದಲ್ಲಿ ನಾಟಕ ಕಂಪನಿಗಳು ಬಂದಾಗುತ್ತಿದ್ದವು. ಅಂಥ ಸಂದರ್ಭದಲ್ಲಿ ನಾಟಕಗಳಿಲ್ಲದೆ ಖಾಲಿ ಇರುತ್ತಿದ್ದ ನಟ ನಟಿಯರನ್ನು ಕೂಡಿಸಿಕೊಂಡು ನಾಟಕಗಳನ್ನು ಆಡಿಸುತ್ತಿದ್ದನು. ಆದ್ದರಿಂದ ಇವರನ್ನು 'ಮಳೆಗಾಲದ ಮಲ್ಲೇಶಪ್ಪ' ಎಂದು ಕರೆಯುತ್ತಿದ್ದರು. ದೇವದುರ್ಗ ತಾಲೂಕಿನ ಗಬ್ಬೂರು ಗುರುವಿನ ಶರಣಯ್ಯ ಎಂಬವರು ಸುಗ್ಗಿ ಸೀಜನ್‌ನಲ್ಲಿ ನಾಟಕಗಳನ್ನಾಡಿಸುತ್ತಿದ್ದುದರಿಂದ ಸೀಜನ್ ಶರಣಯ್ಯ ಎಂದು ಹೆಸರಾಗಿದ್ದರು. ಇವರೊಂದಿಗೆ ಉರುಸಿನವೆಂಕಪ್ಪ ಸೇರುತ್ತಾರೆ.

ನಾಟಕ ಹವ್ಯಾಸದ ಉರುಸಿನ ವೆಂಕಪ್ಪನವರಿಗೂ ಕುಕನೂರಿನ ಕಲ್ಮನಿ ಮನೆತನಕ್ಕೂ ಆತ್ಮೀಯ ಸಂಬಂಧವಿತ್ತು. ಅನಾಥ ಮೊಮ್ಮಗಳು ಶ್ರೀಮಂತರ ಮನೆಯಲ್ಲಿ ಹಾಲು, ಮೊಸರು, ಮಜ್ಜಿಗೆಯುಂಡು ಸುಖವಾಗಿ ಬೆಳೆಯಲೆಂದು ಆಶಿಸಿದಳು. ಅಂತೆಯೇ ಎಂಟ್ಹತ್ತು ವರ್ಷದ ರೆಹಮಾನವ್ವನನ್ನು ಶಾಲೆ ಬಿಡಿಸಿ ದನ ಕಾಯಲು ಇವರ ಮನೆಯಲ್ಲಿರಿಸಿದಳು. ಕ್ರಿಯಾಶೀಲ, ಜೊತೆಗೆ ಆರ್ಥಿಕ ಬಲ ಹೊಂದಿದ್ದ ಯುವಕ ವೆಂಕರೆಡ್ಡಿ ತನ್ನ ಹಲವು ಹತ್ತು ಸಂಪರ್ಕಗಳಿಂದ ಪ್ರೇರೇಪಿತನಾಗಿ ಊರಲ್ಲಿಯ ಕಲಾಸಕ್ತ ನಿರಾಶ್ರಿತರನ್ನು ಸೇರಿಸಿಕೊಂಡು 'ನಿರಾಶ್ರಿತರ ನಾಟಕ ಕಂಪನಿ' ೧೯೨೫–೨೬ ರಿಂದಲೇ ಆರಂಭಿಸಿದ್ದನು. ಶೇಂಗಾ ಸುಗ್ಗಿ, ಹತ್ತಿ ಸುಗ್ಗಿ (ಸೀಜನ್) ಬಂದಾಗ ಬಯಲಾಟ, ನಾಟಕ, ಕುಸ್ತಿ, ಗೀಗೀ ಲಾವಣಿ, ರಿವಾಯತ್ ಹಾಡುಗಳ ಪ್ರದರ್ಶನ ಸಂಘಟಿಸುತ್ತಿದ್ದನು. ನಾಟಕ ಕಂಪನಿ ಆರಂಭಿಸುವುದು, ಲುಕ್ಸಾನ್ ಆದ ಕೂಡಲೇ ಮುಚ್ಚುವುದು ನಡೆದೇ ಇತ್ತು. ಅಂತೆಯೇ ಇದನ್ನು ಸೀಜನ್ (ಸುಗ್ಗಿ) ನಾಟಕ ಕಂಪನಿ ಎಂದು ಕರೆಯುತ್ತಿದ್ದರು. ಸೀಜನ್, ಸುಗ್ಗಿಕಾಲದ ಕಂಪನಿಯೆಂದು ಜನ ಕರೆದರೋ, ಸ್ವತಃ ವೆಂಕಪ್ಪನವರು ಕರೆದುಕೊಂಡರೋ ಅಂತೂ ಈಗಲೂ ಆ ಊರಲ್ಲಿ 'ನಿರಾಶ್ರಿತರ ಕಂಪನಿ' ಉರುಸಿನ ಯಂಕಪ್ಪನ ಕಂಪನಿ ಸೀಜನ್ ನಾಟಕ ಕಂಪನಿ ಎಂದು ಕರೆಯುವುದು ವಾಡಿಕೆಯಾಗಿದೆ. ಇವರೆಲ್ಲ ಸೇರಿ ನಾಟಕ ಪ್ರ್ಯಾಕ್ಟೀಸ್ ಮಾಡಲು, ಅಂದರೆ ತಾಲೀಮು ಮಾಡುವುದಕ್ಕಾಗಿ ಒಂದು ದೊಡ್ಡ ಹಳೆಯ ಮನೆಯನ್ನು ಹಿಡಿದಿದ್ದರು. ಇದನ್ನು ಊರಿಗೆ ಬಂದವರಿಗೆ, ಹೋದವರಿಗೆ ನಾಟಕದ ಮನೆಯೆಂದು ಈಗಲೂ ತೋರಿಸುತ್ತಾರೆ. ತಳಕಲ್ಲಿಗೆ ಗದಗ ಹತ್ತಿರವಾಗುತ್ತದೆ. ಆದರೊಂದಿಗೆ ವ್ಯಾಪಾರ ವಹಿವಾಟು ಹೆಚ್ಚು. ಅಲ್ಲಿಗೆ ಬರುತ್ತಿದ್ದ ನಾಟಕ ಕಂಪನಿಗಳು, ಮೂಕಿ ಸಿನಿಮಾಗಳು, ಸರ್ಕಸ್ ಕಂಪನಿಗಳು, ಸಂಗ್ಯಾ ಬಾಳ್ಯಾ, ಶ್ರೀಕೃಷ್ಣ ಪಾರಿಜಾತದ ಪ್ರಯೋಗಗಳು, ಗೊಂದಲಿಗರ ಹಾಡುಗಳು ಯುವಕ ವೆಂಕರೆಡ್ಡಿಯನ್ನು ಆಕರ್ಷಿಸಿದ್ದವು. ರಾಜಕೀಯ ಸಮಾರಂಭಗಳು ಅದರಲ್ಲಿಯೂ ಭಾರತ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳು ಸೂಕ್ಷ್ಮಮತಿಯಾದ ವೆಂಕರೆಡ್ಡಿಯವರಿಗೆ ಹಲವು ಪ್ರೇರಣೆ ನೀಡುತ್ತಿದ್ದವು. ಹೊಸರಿತ್ತಿಯ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹದೇವಪ್ಪನವರ ಸಂಪರ್ಕ ಅದು ಹೇಗೋ ಬಂದಿತ್ತು. ಗಾಂಧಿ ಅನುಯಾಯಿಯಾಗಿದ್ದ ಮೈಲಾರ ಮಹಾದೇವಪ್ಪನವರ ಸಹವಾಸದಿಂದ ವೆಂಕರೆಡ್ಡಿ ಖಾದಿ ವ್ರತಧಾರಿಯಾದರು. ಯಾವಾಗಲೂ ಖಾದಿ ಧೋತರ ಜುಬ್ಬಾ, ಜಾಕೀಟು ಮತ್ತು ಖಾದಿ ಟೊಪ್ಪಿಗೆ ಧರಿಸುತ್ತಿದ್ದರು.

ತಳಕಲ್ಲ ಉರುಸು ಬೇಸಿಗೆಯಲ್ಲಿ ಬರುವುದಕ್ಕೆ ೪-೫ ತಿಂಗಳು ಮೊದಲು ನಾಟಿಕಾಸಕ್ತರನ್ನು ಕೂಡಿಸಿಕೊಂಡು ತಾಲೀಮು ನಡೆಯಿಸಿ, ತಾವೇ ನಿರ್ದೇಶಿಸಿ ನಾಟಕ ಪ್ರಯೋಗ ಮಾಡುತ್ತಿದ್ದರು. ಇಷ್ಟೊತ್ತಿಗೆ ವೆಂಕರೆಡ್ಡಿಯವರು, ವಣಗೇರಿಯ ದುಂಡನಗೌಡರು ಮಾಲೀ ಪಾಟೀಲರ ಕಲ್ಯಾಣ ಬಸವೇಶ್ವರ ದೇವಸ್ಥಾನ ಸಮಿತಿ ಹವ್ಯಾಸಿ ಕಲಾ ತಂಡದ ಸಂಪೂರ್ಣ ರಾಮಾಯಣದಲ್ಲಿ ಹನುಮಂತನ ಪಾತ್ರವಹಿಸಿ ಅನುಭವ ಪಡೆದಿದ್ದರು. ಆ ಕಾಲದ ಹೆಸರಾಂತ ನಾಟಕ ಕಂಪನಿಗಳ ನಾಟಕಗಳನ್ನು ನೋಡಿ ನಟನೆ, ಸಂಗೀತ ಮುಂತಾದವುಗಳನ್ನು ಕಲಿತುಕೊಂಡಿದ್ದರು. ತಳಕಲ್ಲು ಯಲಬುರ್ಗಾ ತಾಲೂಕದಲ್ಲಿದ್ದು ಅದು ಅಂಗ್ರೇಜಿಯ ಗದಗ, ರೋಣ, ಹುನಗುಂದ ಹಾಗೂ ಬಾದಾಮಿ ತಾಲೂಕುಗಳಿಗೆ ಹೊಂದಿಕೊಂಡಿರುವುದರಿಂದ ಅವುಗಳೆಲ್ಲ ಮುಂಬೈ ಪ್ರಾಂತದವುಗಳಾಗಿರುವುದರಿಂದ, ಅಲ್ಲಿಯ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳ ಪ್ರಭಾವವುಂಟಾಗಿತ್ತು, ಹಾಗಂತಲೇ ಯಲಬುರ್ಗಾ ತಾಲೂಕು ತುಂಬ ಜಾಗೃತಗೊಂಡ ತಾಲೂಕಾಗಿರುವುದನ್ನು ಇಂದಿಗೂ ಗಮನಿಸಬಹುದು.

ತಳಕಲ್ಲಿನ ವೆಂಕರೆಡ್ಡೆಪ್ಪನವರ ಆಶ್ರಯ ದೊರಕಿದ ರೆಹಮಾನ್‌ಬಿ ದನಕಾಯುವ ಹುಡಿಗಿಯಾಗಿದ್ದವಳು, ತನ್ನ ಬಾಳಿನ ಪುಣ್ಯ ವಿಶೇಷವೆನ್ನುವಂತೆ ಹುಬ್ಬಳ್ಳಿ ಜಮುನಾಬಾಯಿ, ಕಿತ್ತೂರು ಚೆನ್ನಮ್ಮ ನಾಟಕ ಪ್ರಯೋಗ ಮುಂದಿರುವಾಗ ಕಳ್ಳತನದಿಂದ ಪಲಾಯನ ಮಾಡಿದ್ದರಿಂದ ಈಕೆ ಆ ಪಾತ್ರ ಮಾಡಿ ಹೇಗೆ ಪ್ರಖ್ಯಾತಳಾದಳು. ರೆಹಮಾನ್‌ಬಿ ರೆಹಮಾನ್‌ಜಾನ್ ಆದಳೆಂಬುದನ್ನು ಆರಂಭದಲ್ಲಿ ಕಂಡುಕೊಂಡಿದ್ದೇವೆ. ತನ್ನ ಬದುಕಿನುದ್ದಕ್ಕೂ ವೆಂಕರೆಡ್ಡಿಯವರಿಗೆ ಶಿರಬಾಗಿ ಗುರುವೆಂದು, ಆಶ್ರಯದಾತರೆಂದು ಅವರೆಷ್ಟು ಬೈದರೂ, ದಂಡಿಸಿದರೂ, ವೃತ್ತಿ ದ್ವೇಷದಿಂದ ಆಕೆಯ ನಾಟಕ ಕಂಪನಿಗೆ ಹಾನಿ ಮಾಡಿದ್ದರೂ, ಸಾರ್ವಜನಿಕವಾಗಿ ಅವಮಾನಿಸಿದ್ದರೂ ಸಹಿಸಿಕೊಂಡು, ಗೌರವದಿಂದ ಕಾಣುತ್ತ ಬಂದಿರುವುದನ್ನು, ಈ ಪ್ರದೇಶದ ಜನರು ಕಂಡಿದ್ದಾರೆ. ರೆಹಮಾನವ್ವನ ಒಳ್ಳೆಯ ಗುಣಗಳನ್ನು ಮೆಚ್ಚಿ ಕೊಂಡಾಡುತ್ತಾರೆ. ಆದರೆ ತಳಕಲ್ಲ ವೆಂಕರೆಡ್ಡಪ್ಪನವರ ರಂಗಭೂಮಿಯ ಗರಡಿಯಲ್ಲಿ ಪಳಗಿ ಹೊರಬಂದು, ಶ್ರೇಷ್ಠ ಅಭಿನೇತ್ರಿಯೆಂದು ಕರ್ನಾಟಕದಾದ್ಯಂತ ಪ್ರಸಿದ್ಧಿ ಪಡೆದಳೆಂಬುದು ಅಷ್ಟೇ ಸತ್ಯದ ಸಂಗತಿ.

## ಬದುಕಿನ ಅನ್ವೇಷಣೆಯಲ್ಲಿ



ರಂಗ ಅಭಿನೇತ್ರಿ, ರೆಹಮಾನವ್ವ ಕಲ್ಮನಿ ಆರಂಭ ಕಾಲದಲ್ಲಿ

ರೆಹಮಾನವ್ವ ಕಲ್ಮನಿಯವರು ಯಾವಾಗ ಜನಿಸಿದರೆಂಬುದರ ಬಗ್ಗೆ ಲಿಖಿತ ದಾಖಲೆಗಳಿಲ್ಲ, ಅವರ ಹಿರಿಯ ಮಗ ಬಾಬಣ್ಣ ಕಲ್ಮನಿಯವರಲ್ಲಿಯೂ ಇಲ್ಲ. 'ಯಲಬುರ್ಗಿ ತಾಲೂಕಿನ ವೃತ್ತಿರಂಗ ಭೂಮಿ' ಕುರಿತು ಪಿ.ಎಚ್‌ಡಿ. ಮಾಡಿರುವ ಸಂಶೋಧಕ ಡಾ. ಮಲ್ಲಿಕಾರ್ಜುನ ಕುಂಬಾರರು ತಮ್ಮ ಮಹಾ ಪ್ರಬಂಧದಲ್ಲಿ ೦೨–೦೫–೧೯೧೭ರಂದು ಜನಿಸಿದರೆಂದು ತಿಳಿಸಿದ್ದಾರೆ. ಆದರೆ ಇದಕ್ಕೆ ಯಾವ ಆಧಾರವನ್ನೂ ನೀಡುವುದಿಲ್ಲ, ಚರ್ಚೆಯನ್ನು ಮಾಡಿಲ್ಲ. ಇದರಿಂದಾಗಿ ಇವರು ಯಾವಾಗ ಹುಟ್ಟಿದರೆಂಬುದು ಊಹೆಗೆ ಮಾತ್ರ ಸಾಧ್ಯ. ಅವರ ಹಿರಿಯ ಮಗ ಬಾಬಣ್ಣನವರಿಗೆ ಈಗ (೨೦೧೦) ೭೬ ವರ್ಷ ನಡೆಯುತ್ತದೆ. ಅವರ ತಾಯಿ ೧೭ ವರ್ಷದವರಿದ್ದಾಗ ಮಗ ಹುಟ್ಟಿರುವುದಾಗಿ ಹೇಳುತ್ತಿದ್ದರಂತೆ. ಅನಂತರ ಹತ್ತು ಮಕ್ಕಳನ್ನು ಹೆತ್ತರು. ಒಟ್ಟು ೧೧ ಮಕ್ಕಳು. ಇವರಲ್ಲಿ ಬಾಬಣ್ಣ, ಲಲಿತಮ್ಮ, ಉಮೇಶ, ಮಂಜುಳಾ ಮತ್ತು ಮುನ್ನಾ ಮಾತ್ರ ಬದುಕಿ ಉಳಿದು ದೊಡ್ಡವರಾದವರು. ಇವರೆಲ್ಲ ರಂಗಭೂಮಿ ಹಾಗೂ ಚಲನ ಚಿತ್ರಗಳಲ್ಲಿ ಅಭಿನಯಿಸಿ, ಕಲಾವಿದರೆಂದು ಹೆಸರಾದವರು. ಬಾಬಣ್ಣ ೦೨–೧೧–೧೯೩೪ರಲ್ಲಿ ಜನಿಸಿದ್ದರಿಂದ ತಾಯಿ ೧೯೧೭ರಲ್ಲಿ ಜನಿಸಿರಬೇಕು. ಡಾ. ಮಲ್ಲಿಕಾರ್ಜುನ ಕುಂಬಾರರು, ಇದೇ ಮಹಾಪ್ರಬಂಧದಲ್ಲಿ ಹಲವಾರು ಮಾಹಿತಿದಾರರಿಂದ ಸಂಗತಿಗಳನ್ನು ತಿಳಿದುಕೊಂಡು, ರಂಗಭೂಮಿ ಹಿರಿಯ ನಟರಾದ ಸಂಗನಬಸಪ್ಪ ಮಟ್ಟಿಯವರು ೧೯೩೮ರಲ್ಲಿ ಕುಕನೂರಲ್ಲಿ ನಾಟಕ ಕಂಪನಿ ಆರಂಭಿಸಿದರೆಂದು ಹೇಳುತ್ತಾರಲ್ಲದೆ, ಅವರ ಕಂಪನಿಯ ಪ್ರಥಮ ಪ್ರಯೋಗ ಭಕ್ತ ಪ್ರಹ್ಲಾದ ನಾಟಕವೆಂದೂ, ಇದರಲ್ಲಿ ರೆಹಮಾನವ್ವ ಹಿರಣ್ಯಕಶ್ಯಪುವಿನ ಪತ್ನಿ ಖಯಾದು ಪಾತ್ರ ಮಾಡಿದ್ದರೆಂದು ಹೇಳಿದ್ದಾರೆ. ಭರತ ಕಲಾ ನಾಟ್ಯ ಸಂಘ ಕುಕನೂರು ನಾಟಕಗಳನ್ನು ಪ್ರಯೋಗಿಸಿದ ಊರುಗಳ ಪಟ್ಟಿಯಲ್ಲಿ ಅಳವಂಡಿ ಇದೆ. ಇದರಿಂದ ಕ್ಷೇತ್ರ ಕಾರ್ಯಕ್ಕಾಗಿ ಅಳವಂಡಿಗೆ ಹೋದಾಗ, ೧೯೩೩ರಲ್ಲಿ ಜನಿಸಿದ

ಇಬ್ಬರು ಲಿಂಗನಗೌಡ ಮಾಲೀಪಾಟೀಲ ವಕೀಲರು ಹಾಗೂ ನಿವೃತ್ತ ಮುಖ್ಯಾಧ್ಯಾಪಕ ರುದ್ರಪ್ಪ ಮಾಗಳದರನ್ನೂ ಸಂದರ್ಶಿಸಿದೆ. ಅಳವಂಡಿ, ಕಲಾಭಿಮಾನಿಗಳ, ಕಲಾ ಪೋಷಕರ ಊರು. ಲಿಂಗನಗೌಡ ವಕೀಲರ ದೊಡ್ಡಪ್ಪ, ಮಾಜಿ ಶಾಸಕ ಅಳವಂಡಿ ಶಂಕರಗೌಡರ ಹಿರಿಯಣ್ಣ ಸೋಮನಗೌಡ ಮಾಲೀಪಾಟೀಲರು ಶ್ರೀ ರಂಜನ್ ಸೇವಾ ಸಂಗೀತ ನಾಟ್ಯ ಸಂಘವನ್ನು ೧೯೩೪ರಲ್ಲಿ ಆರಂಭಿಸಿದ್ದರು. ರುದ್ರಪ್ಪ ಮಾಗಳದರು ತಮ್ಮ ಎಂಟನೆಯ ವಯಸ್ಸಿನಿಂದ ೧೪ ನೆಯ ವಯಸ್ಸಿನವರೆಗೆ ಕುಕನೂರಿನಲ್ಲಿದ್ದು ಪ್ರಾಥಮಿಕ ವಿದ್ಯಾಭ್ಯಾಸ ಮಾಡಿದವರು. ಅವರು ಸಂಗನಬಸಪ್ಪನವರನ್ನು ಬಲ್ಲವರು. ಅಳವಂಡಿಯಲ್ಲಿ ಅವರ ಸಂಬಂಧಿಕರು ಇದ್ದುದರಿಂದ ಅವರ ಸಹಾಯದಿಂದ 'ಭಕ್ತ ಪ್ರಹ್ಲಾದ' ನಾಟಕ ಪ್ರಯೋಗಿಸಿದ್ದನ್ನು ನೆನಪಿಸಿಕೊಂಡರು. ''ನಾನಾಗ ೫-೬ ವರ್ಷದವನಿರಬೇಕು. ಚೆನ್ನಾಗಿ ನೆನಪಿದೆ. ಕಂಭವೊಡೆದು, ನರಸಿಂಹ ಪ್ರತ್ಯಕ್ಷನಾಗುವ ದೃಶ್ಯ ಧಡಲ್‌ಬಾಜಿ ಹಚ್ಚಿ ಭಯಂಕರ ಸ್ಫೋಟ ಮಾಡುತ್ತಿದ್ದರು. ಪ್ರೇಕ್ಷಕರು ಕಕ್ಕಾವಿಕ್ಕಿಯಾಗಿ ನೋಡುತ್ತಿದ್ದರು, ನಾವೂ ಕೂಡ. ಈ ನಾಟಕ ಕಂಪನಿ, ನಮ್ಮ ಮನೆ ಹಿತ್ತಲ ಬಾಗಿಲ ತೆಗೆದರೆ ಇರುವ 'ಬಣಕಾರ ವಠಾರ'ದಲ್ಲಿ ನಾಟಕವಾಡುತ್ತಿತ್ತು, ಅವರು ಮುಂದುವರಿದು, ಇನ್ನೊಂದು ಮಹತ್ವದ ಅಂಶ ಹೇಳಿದರು. ''ರೆಹಮಾನವ್ವನ ಹೆರಿಗೆ ಆಗಿತ್ತು, ಬಾಣಂತನಕ್ಕೆ ಬೇಕಾದ ಸಾಣಿಕಲ್ಲನ್ನು ನಮ್ಮ ಮನೆಯಿಂದ ಒಯ್ದಿದ್ದರು. ಅವರು ಊರು ಬಿಡುವಾಗ ನಾನು ಅವರು ಇಳಿದುಕೊಂಡ ಮನೆಯಿಂದ ತಂದಿದ್ದೆ.'' ಇದು ಲಲಿತಮ್ಮ ಹುಟ್ಟಿದ ಸಂಗತಿ. ರೆಹಮಾನವ್ವನವರ ಎರಡನೇ ಹೆರಿಗೆ.

ಅಳವಂಡಿ ವಕೀಲ ಲಿಂಗನಗೌಡರು, ತಮ್ಮ ದೊಡ್ಡಪ್ಪ ಸೋಮನಗೌಡರು ೧೯೩೪ರಲ್ಲಿ ಶ್ರೀ ರಂಜನ್ ನಾಟಕ ಮಂಡಳಿ ಸ್ಥಾಪಿಸಿ, ಅದರ ಮೂಲಕ ಅಬ್ಬಿಗೇರಿ ಬಸನಗೌಡರು ಪ್ರಯೋಗಿಸುತ್ತಿದ್ದ ಕಿತ್ತೂರು ಚೆನ್ನಮ್ಮ ನಾಟಕವನ್ನು ಗದಗ ರತ್ನಮ್ಮನವರ ಪ್ರಧಾನ ಪಾತ್ರದಲ್ಲಿ ಅಭಿನಯಿಸುತ್ತಿದ್ದರು. ಆ ಕಾಲಕ್ಕೆ ಕಿತ್ತೂರು ಚೆನ್ನಮ್ಮನ ಪಾತ್ರಕ್ಕೆ ಗದಗ ರತ್ನಮ್ಮ , ಹುಬ್ಬಳ್ಳಿ ಜಮುನಾಬಾಯಿ ಸುಪ್ರಸಿದ್ದರು. ಇವರ ಸಾಲಿನಲ್ಲಿ ಕುಕನೂರು ರೆಹಮಾನವ್ವ ಕಿತ್ತೂರು ಚೆನ್ನಮ್ಮನ ಪಾತ್ರಕ್ಕೆ ಬರುತ್ತಾರೆ. ಇಂಥ ಮಹಾನ್ ಅಭಿನೇತ್ರಿ ಅಳವಂಡಿಯಲ್ಲಿ ಅನೇಕ ಸಲ ತಮ್ಮ ನಾಟಕ ಪ್ರಯೋಗಿಸಿದ್ದಾರೆ. ಕಿತ್ತೂರು ಚೆನ್ನಮ್ಮ ಪಾತ್ರದಲ್ಲಿ ಅಭಿನಯಿಸಿ ಹಿಂದಿನವರನ್ನು ಮೀರಿಸಿದ್ದಾರೆ. ಮಗ್ಗಲಿನ ಉಪ್ಪಿನ ಬೆಟಗೇರಿಯಲ್ಲಿ ಇವರ ನಾಟಕಗಳು ದಿನಬಿಟ್ಟು ದಿನ ನಡೆಯುತ್ತಿದ್ದವು. ನಮ್ಮ ಕಾಕಾ ಶಂಕರಗೌಡರು

ನಾಟಕವಿದ್ದಾಗ ತಪ್ಪದೆ ನಾಲ್ಕಾರು ಚಕ್ಕಡಿ ಕಟ್ಟಿಸಿಕೊಂಡು ಹೋಗಿ, ಆಹೇರು ಮಾಡಿ ಬರುತ್ತಿದ್ದರು. ಅಳವಂಡಿ ಶಂಕರಗೌಡರು ರೆಹಮಾನವ್ವನಿಗೆ ರಕ್ಷಕನಾಗಿದ್ದರು. ಕಷ್ಟ ಬಂದಾಗ ಅವರ ಸಹಾಯ ಪಡೆಯುತ್ತಿದ್ದಳು.

ಈ ಬಗ್ಗೆ ಬಾಬಣ್ಣನವರನ್ನು ಪ್ರಶ್ನಿಸಿದಾಗ ''ನಾನು ಹುಟ್ಟಿದ್ದು ೦೨–೧೧–೧೯೩೪, ಶಾಲೆಯಲ್ಲಿ ದಾಖಲೆಯಿದೆ. ನಾಲ್ಕುವರ್ಷಕ್ಕೆ ಒಂದರಂತೆ, ನಮ್ಮನ್ನು ಹಡೆದೀನಿ ಅಂತ ಅವ್ವ ಅಂತಿದ್ಲು. ತಂಗಿ ಲಲಿತವ್ವ ಅಳವಂಡಿ ಕ್ಯಾಂಪಿನಲ್ಲಿ ಹುಟ್ಟಿರಬೇಕು. ಅವ್ವ ಹಡೆದ ಮೂರನೇ ದಿವಸಕ್ಕ ಪಾತ್ರಾ ಮಾಡಾಳ. ಆಗ ನಾಟಕಗಳು ೨–೩ ದಿವಸಕ್ಕೊಮ್ಮೆ ಆಗುತ್ತಿದ್ದವು. ಬಾಬಣ್ಣ ಮುಂದುವರಿದು, ಲಲಿತವ್ವ ಬದುಕಿದ್ದರೆ ೭೨ ವರ್ಷದಾಕ್ಯಾಗಿರುತ್ತಿದ್ದಳು. ಹಾಗೆ ನೋಡಿದರೆ ಅವ್ವ ೧೧ ಮಕ್ಕಳನ್ನು ಹಡೆದಾಳ. ಲಲಿತವ್ವ, ಉಮೇಶ, ಮಂಜುಳಾ, ಮುನ್ನಾ ನಾನು ಐವರು ಉಳಿದು ಪಾತ್ರಾ ಮಾಡೇವಿ. ಯಲಬುರ್ಗಿ ಕ್ಯಾಂಪನಾಗ ಚಿನ್ನಮ್ಮಾ ಎಂಬ ತಂಗಿ ಹುಟ್ಟಿದ್ದಳು. ಆಕಿಯೂ ತೀರಿಕೊಂಡಳು. ಸಿಂಧನೂರಿನಲ್ಲಿ, ಮುದ್ದಾಪುರದಲ್ಲಿ ಹುಟ್ಟಿದ ಕೂಸುಗಳು ಸತ್ತವು'' ಎಂದು ಹೇಳಿದರು ಅತ್ಯಂತ ದುಃಖದಿಂದ. ಅವರ ಅತ್ತೆ ರೆಹಮಾನವ್ವ ಸಾಯುವವರೆಗೆ ಅಕ್ಕರೆಯಿಂದ ಮಹಾದೇವಿಯೆಂದೇ ಕರೆಯುತ್ತಿದ್ದ ಬಾಬಣ್ಣನವರ ಶ್ರೀಮತಿ ಮೆಹಬೂಬಬಿ ''ಬಳ್ಳಾರಿ ಜಿಲ್ಲೆಯ ಅಲ್ಪಿಯಲ್ಲಿ ನಮ್ಮ ನಾಟಕದ ಕ್ಯಾಂಪ್ ಇತ್ತು, ಮುಂದಿನ ಕ್ಯಾಂಪ್ ಸಿರಿಗೆರಿಗೆ ಆಗುವದಿತ್ತು, ಅಲ್ಲಿ ಒಂದು ಗಂಡು ಕೂಸು ಹುಟ್ಟಿತ್ತು, ಮೂರನೇ ದಿವಸ ನಾ ಸಿರಿಗೇರಿಗೆ ಹೋಗಿ ಮನೆ ನೋಡ್ಕೊಂಡು ಬರ್ತಿನಿ ಮುಂದಿನ ಕ್ಯಾಂಪಿಗೆ, ನೀ ಕೂಸು ನೋಡ್ಕೊ ಅಂತಾ ಹೇಳಿ ಹೋಗಿ, ಸಾಯಂಕಾಲ ಬಂದರು. ಆ ಕೂಸು ಹಾಲು ಕುಡೀಲಿಲ್ಲ, ಬಂದ ಮೇಲೆ ತಮ್ಮ ಎದೆ ಹಾಲು ಕುಡಿಸಿದರು. ರಾತ್ರಿ ಎರೆದೆವು. ಬೆಳಿಗ್ಗೆ ಜ್ವರ ಬಂದವು. ಸಿರಗುಪ್ಪ ದವಾಖಾನೆಗೆ ಎತ್ತಿನ ಚಕ್ಕಡ್ಯಾಗ ಹೋದ್ವಿ. ಅಲ್ಲಿ ಆ ಗಂಡು ಕೂಸು ಸತ್ತಿತು. ತಂದು ಮಣ್ಣು ಮಾಡಿದ್ವಿ'' ಎಂಬ ದುಃಖದ ಸಂಗತಿಯನ್ನು ನೆನಪಿಸಿದರು. ಇಂಥ ಸಂಗತಿಗಳ ಲೆಕ್ಕವಿಟ್ಟವರಾರು?

ಬಾಬಣ್ಣ ಮಂಜುಳಾ ಹುಟ್ಟಿದ ಬಗ್ಗೆ ''ಮುದ್ಗಲ್ಲದಲ್ಲಿ ಕ್ಯಾಂಪ್ ಇತ್ತು, ಹರಿಶ್ಚಂದ್ರ ನಾಟಕ ನಡೆದಿತ್ತು, ಡಿ. ದುರ್ಗಾದಾಸ ಹರಿಶ್ಚಂದ್ರ, ಅವ್ವ ತಾರಾಮತಿಯಾಗಿ, ಎಲಿವಾಳ ಸಿದ್ದಯ್ಯ ನಕ್ಷತ್ರಿಕನಾಗಿ ಅಭಿನಯಿಸುತ್ತಿದ್ದರು. ಕಾಶೀ ಪಟ್ಟಣದಲ್ಲಿ ತಾರಾಮತಿಯನ್ನು ಬ್ರಾಹ್ಮಣನಿಗೆ ಮಾರುವ ದೃಶ್ಯ, ಅವ್ವ ಅವರೊಂದಿಗೆ ಶೋಕದ ಸನ್ನಿವೇಶದಲ್ಲಿ ಅಭಿನಯಿಸಿ ನಿರ್ಗಮಿಸಿದ ಮೇಲೆ

ಗ್ರೀನ್ ರೂಮಿನಲ್ಲಿ ಮಂಜವ್ವ (ಮಂಜುಳಾ)ನನ್ನು ಹಡೆದಳು. ಮುಂದಿನ ಸೀನಿಗೆ ನಾನು, ತಾರಾಮತಿಯಾಗಿ ಸೀರೆ ಉಟ್ಕೊಂಡು ಪಾತ್ರ ನಿರ್ವಹಿಸಿದೆ. ಮುಂದೆ ಯಥಾ ಪ್ರಕಾರ ಮೂರನೇ ದಿವಸಕ್ಕ ತಾರಾಮತಿ ಪಾತ್ರ ಮಾಡಿದಳು. ಮಂಜವ್ವ ಹುಟ್ಟಿದ್ದು ಮೊಹರ್ರಂ ಹಬ್ಬ ರಾತ್ರಿ ೨–೩೦ ಗಂಟೆಕ್ಕ. ಆಕೀ ಆ್ಯಕ್ಸಿಡೆಂಟಿನಲ್ಲಿ ಸತ್ತಿದ್ದು ಮಧ್ಯರಾತ್ರಿ ಮಿಕ್ಕಿ ೨–೩೦ಕ್ಕ. ಅಂದೂ ಮೊಹರ್ರಂ ಹಬ್ಬ ಇತ್ತು, ಎಂಥ ಯೋಗ! ಮುನ್ನಾ ಕೂಡ ಗಬ್ಬೂರ್ ಕ್ಯಾಂಪಿನಲ್ಲಿ ಹೀಗೇ ಹರಿಶ್ಚಂದ್ರ ನಾಟಕ ಅವ್ವ ತಾರಾಮತಿ ಪಾತ್ರ ವಹಿಸಿದ್ದಳು. ನಾಟಕದ ಮಧ್ಯೆ ಹೆರಿಗೆ ಬೇನೆ ಬಂದು, ಗ್ರೀನ್ ರೂಮಿನಲ್ಲಿ ಹಡೆದಳು. ಮುನ್ನಾ ಹುಟ್ಟಿದ ಹುರುಪಿನಿಂದ ಸಂತೋಷಗೊಂಡು, ಅವ್ವ ಕಂಪನಿಯ ಎಲ್ಲರಿಗೂ ಬೂಂದಿ, ಜಿಲೇಬಿ, ಊಟ ಮಾಡಿಸಿದಳು. ಮತ್ತೆ ಮೂರನೇ ದಿವಸಕ್ಕ ಪಾತ್ರ ವಹಿಸಿದಳು'' ದೊಡ್ಡ ನಗುವಿನೊಂದಿಗೆ ಬಾಬಣ್ಣ ಹೇಳುತ್ತ ಹೋದರು.

ಸ್ತ್ರೀ ಪುರುಷರಿಬ್ಬರಲ್ಲಿ ನಿಸರ್ಗ, ತಾಯಿ ಗರ್ಭದಲ್ಲಿ ಮಗು ಬೆಳೆಯುವ ಶಕ್ತಿಯನ್ನು ನೀಡಿದೆ. ಹುಟ್ಟಿದ ಮಗುವಿಗೆ ಮೊಲೆಯೂಡಿಸಿ ಬೆಳೆಸುವ ಶಕ್ತಿ ಸಾಮರ್ಥ್ಯವನ್ನು ತಾಯಿಯಲ್ಲಿರಿಸಿದೆ. ಪುರುಷ ತಾನು ಎಷ್ಟೇ ಜವಾಬ್ದಾರಿ ಹೊರ ಬೇಕೆಂದರೂ ಅದು ಅನಿವಾರ್ಯವಾಗಿ ಸ್ತ್ರೀಯ ಮೇಲೆ ಬೀಳುತ್ತದೆ. ಸಾವು ನೋವು ಸಂಕಟಗಳನ್ನನುಭವಿಸಿ, ಹೆರಿಗೆ ನೋವು ತಾಳಿ, ನಿದ್ದೆಗೆಟ್ಟು ಪಾಲನೆ ಪೋಷಣೆ ಮಾಡುತ್ತಾಳೆ. ಆ ತಾಯ್ತನಕ್ಕಾಗಿ ಹಂಬಲಿಸುತ್ತಾಳೆ. ತಪಸ್ಸು ಮಾಡುತ್ತಾಳೆ. ಮಕ್ಕಳ ಏಳಿಗೆಗಾಗಿ ಹಾರೈಸುತ್ತಾಳೆ. ಸಂತತಿಯನ್ನು ಮುಂದುವರಿಸುತ್ತಾಳೆ. ಹನ್ನೊಂದು ಮಕ್ಕಳನ್ನು ಹೆತ್ತು ಹೊತ್ತು, ಜೋಪಾನ ಮಾಡಿ ಅವರಿಗಾಗಿ, ಅವರ ಮಕ್ಕಳಿಗಾಗಿ ಕಷ್ಟಪಟ್ಟಂತೆ ರಂಗಭೂಮಿಗೂ ರೆಹಮಾನವ್ವ ಕಲ್ಮನಿ ಶ್ರಮಿಸಿದ್ದಾರೆ. ಗರ್ಭಿಣಿ ಸ್ತ್ರೀಯರು ಹೆರಿಗೆ ಸಮಯದಲ್ಲಿ ಸೂಲಗಿತ್ತಿಯಿಂದ ನೆರವು ಪಡೆಯುತ್ತಾರೆ. ಯಾರ, ಯಾವ ಸಹಾಯವಿಲ್ಲದೆ, ಗ್ರೀನ್ ರೂಮಿನಲ್ಲಿ ಮಕ್ಕಳಿಗೆ ಜನ್ಮ ನೀಡಿರುವುದು ನಿಜಕ್ಕೂ ರೆಹಮಾನವ್ವನ ಗಟ್ಟಿಗತನವನ್ನು , ಕಷ್ಟಸಹಿಷ್ಣುತೆಯನ್ನು ತೋರಿಸುತ್ತದೆಂದು ಮರಿಯಮ್ಮನ ಹಳ್ಳಿ ರಂಗ ಕೋಗಿಲೆ ಕೆ. ನಾಗರತ್ನಮ್ಮ ಹೇಳಿರುವುದಲ್ಲದೆ, ರಾಯಚೂರಿನ ಸಮಾರಂಭ ದಲ್ಲಿ ಭೆಟ್ಟಿಯಾದಾಗ, ತಾವು ಅನುಭವಿಸುತ್ತಿರುವ ಕಷ್ಟ ಪರಿಸ್ಥಿತಿಯನ್ನು ಮುಚ್ಚು ಮರೆಯಿಲ್ಲದೆ ಇವರಲ್ಲಿ ಹೇಳಿಕೊಂಡಿದ್ದನ್ನು ಸಂದರ್ಶನದಲ್ಲಿ ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರರಿಗೆ, ಹೈದರಾಬಾದ ವಿಮೋಚನಾ ಭೂಗತ– ಸತ್ಯಾಗ್ರಹಿಗಳಿಗೆ, ರೆಹಮಾನವ್ವ ರಕ್ಷಣೆ ನೀಡಿರುವುದಲ್ಲದೆ, ಆರ್ಥಿಕ ನೆರವನ್ನು

ನೀಡಿದ್ದಾಳೆ. ಅಂಥ ಪ್ರಸಂಗಗಳಿಂದ ಪ್ರಭುತ್ವದ ದಂಡನೆಗೂ ಒಳಗಾಗಿದ್ದಾಳೆ, ವೈರತ್ವವನ್ನು ಎದುರಿಸಿದ್ದಾಳೆ. ಕೊನೆಗಾಲದಲ್ಲಿ ಕಷ್ಟ ಕೋಟಲೆಗಳನ್ನು ಅನುಭವಿಸಿ, ತನ್ನ ೭೬ ನೆಯ ವಯಸ್ಸಿನಲ್ಲಿ ೧೦–೧೦–೧೯೯೭ರಂದು ನಿಧನಳಾದಳು.

## ಬಾಲ್ಯದಲ್ಲಿ ಅಭಿನಯದ ಬೀಜಾಂಕುರ

ರೆಹಮಾನ್‌ಬಿಯನ್ನು ಎಂಟ್ಹತ್ತು ವರ್ಷದ ಹುಡುಗಿಯಾಗಿದ್ದಾಗ ಅಜ್ಜಿ ತಳಕಲ್ಲಿಗೆ ಕರೆದುಕೊಂಡು ಹೋಗುವ ಮೊದಲು ಆಕೆ ಅಯ್ಯನವರ ಗಾಂವಠೀ ಶಾಲೆಯಲ್ಲಿ, ಅಕ್ಷರ ಕಲಿತುಕೊಂಡು, ಓದಿ ಬರೆಯುತ್ತಿದ್ದಳು. ಆದರೆ ಆಕೆ ದನ ಕಾಯಲು ತೊಡಗಿದ್ದರಿಂದ ಓದು ಬರಹ ಮರೆತವಾದರೂ ಸ್ಮೃತಿ ಪಟಲದಲ್ಲಿ ಅವು ಉಳಿದುಕೊಂಡಿದ್ದವು. ಪ್ರಕೃತಿಯ ಮಡಿಲಲ್ಲಿ ದನ ಕರುಗಳನ್ನು ಮೇಯಿಸುವ ಕಾಯಕದಲ್ಲಿ ಬಹಳಷ್ಟು ವಿದ್ಯೆ ಕಲಿತಳು. ಓರಿಗೆಯ ಗೆಳತಿಯರು, ಗೆಳೆಯರು, ಹೇಳುವ ಕತೆಗಳು, ಒಗಟುಗಳು, ಒಡಪುಗಳು, ಹಾಡುಗಳು, ಮೂಕ ಪ್ರಾಣಿಗಳೊಡನಾಟ, ಅವುಗಳ ಸಲಿಗೆ, ಸ್ನೇಹ ಆಕೆಯ ಮೃದು ಮನಸ್ಸನ್ನು ಪುಳಕಗೊಳಿಸುತ್ತಿದ್ದವು. ತಳಕಲ್ಲು ಜನಪದ ಕಲೆ–ಸಂಸ್ಕೃತಿಗಳಿಗೆ ಹೆಸರಾಗಿದ್ದಂತೆ ಧಾರ್ಮಿಕ ಆಚರಣೆಗೂ ಪ್ರಸಿದ್ಧವಾಗಿತ್ತು, ಊರಲ್ಲಿ ನಡೆಯುವ ಹಬ್ಬ ಹರಿದಿನ, ಉರುಸುಗಳಲ್ಲಿ ನಡೆಯುತ್ತಿದ್ದ ಬಯಲಾಟ, ಸಣ್ಣಾಟ ಹಾಗೂ ರಿವಾಯತ್ ಪದಗಳನ್ನು ಕಿವಿ ಮೇಲೆ ಹಾಕಿಕೊಂಡಿದ್ದಳು. ಫಲವತ್ತಾದ ಕೆಂಪು (ಮಸಾರಿ) ಕರಿ (ಎರೆ) ಮಣ್ಣಿನ ಭೂಮಿಯನ್ನು ಹೊಂದಿ, ಒಳ್ಳೆಯ ಬೆಳೆಯನ್ನು ತೆಗೆಯುವ ರೈತರು, ಕೂಲಿ ಕಾರ್ಮಿಕರು ಸುಖದಿಂದಿದ್ದರು. ಸಂಜೆಯಾಗುತ್ತಲೆ ಹೆಣ್ಣು ಮಕ್ಕಳು ರಾತ್ರಿ ಅಡಿಗೆಗೆ ಕುಳಿತರೆ ಒಂದು ಕಡೆಗೆ ಭಜನಾ ಪದಗಳು, ಸತ್ಸಂಗಗಳು, ಪುರಾಣ ಪ್ರವಚನಗಳು ನಡೆಯುತ್ತಿದ್ದವು. ಧಣಿಯರ ಮನೆಯ ಜೀತದಾಳುಗಳು ಮಾತ್ರ, ಇಂಥವಕ್ಕೆ ಬರುತ್ತಿರಲಿಲ್ಲ, ಒಕ್ಕಲಿಗರ ಮಕ್ಕಳು, ತಮ್ಮ ದನಗಳನ್ನು ಮೇಯಿಸಲು ಬರುತ್ತಿದ್ದರು. ಇವರೆಲ್ಲ ಒಟ್ಟಿಗೆ ಕುಳಿತು ಆಡುವುದು, ಕೇಕೆ ಹಾಕಿ ಕುಣಿಯುವುದು, ಹಾಡು ಹೇಳುವುದು, ಬುತ್ತಿ ಉಣ್ಣುವುದು, ಮಾತಾಡುವುದು, ಹಕ್ಕಿಗಳ ಹಾಡು ಎಲ್ಲವೂ ಈಕೆಗೆ ಪೂರಕವಾಗಿದ್ದವು. ರೆಹಮಾನ್‌ಬಿ ಯಾರಿಗಿಲ್ಲದ ಅನುಕರಣ ಶಕ್ತಿಯನ್ನು ಪಡೆದಿದ್ದಳು. ಕಲೆ ಆಕೆಗೆ ಹುಟ್ಟಿನಿಂದ ಬಂದಿದ್ದಿರಬೇಕು. ನಾಟಕ ನಿಂತು ಹೋಗುವ ಕಠಿಣ ಸಂದರ್ಭದಲ್ಲಿ ಆಸರೆಯಾಗಿ, ತನ್ನ ನಟನಾ ಪ್ರತಿಭೆಯನ್ನು ತೋರಿದ್ದರಿಂದ ಮಾಲೀಕರಾಗಿದ್ದ ವೆಂಕರೆಡ್ಡಿ ಯವರಿಗೆ, ತುಂಬ ಸಂತೋಷವಾಯಿತು. ಸ್ಥಳೀಯವಾಗಿದ್ದ ಸಂಗೀತ ಕಲಾವಿದರಿಂದ

ಅಭ್ಯಾಸ ಮಾಡಿಸಿದರು. ರಾಮಾಯಣ, ಮಹಾಭಾರತಗಳಲ್ಲದೆ ಜಾನಪದ ಹಾಗೂ ಪೌರಾಣಿಕ ಕತೆಗಳನ್ನು ಕೇಳುವುದು ಶಾಸ್ತ್ರ ಪುರಾಣ ಕೀರ್ತನಗಳ ಒಡನಾಟದಿಂದ ರೆಹಮಾನ್‌ಬಿ ಮತ್ತಷ್ಟು ಜ್ಞಾನವನ್ನು ಪಡೆದುಕೊಂಡಿರಬೇಕು. ಅಕ್ಷರ ಜ್ಞಾನವನ್ನು ಬಿಟ್ಟರೆ ಹೆಚ್ಚು ಕಲಿತಿರದ ಬಾಲಿಕೆ ಪ್ರಬುದ್ಧಳಾಗಲು ತಳಕಲ್ಲ ವಾತಾವರಣ ಹಾಗೂ ಅಲ್ಲಿಯ ರಂಗ ಚಟುವಟಿಕೆಗಳು ಕಾರಣವಾಗಿರಬೇಕು. ತಳಕಲ್ಲು ಆಕೆಯ ರಂಗಜೀವನದ ತಳಪಾಯವಾಯಿತು. ಶಾಲಾ ಪರೀಕ್ಷೆಗಳನ್ನು ಪಾಸಾಗದೆ, ಪ್ರಪಂಚ ಪರೀಕ್ಷೆಯಲ್ಲಿ ಹಲವು ಗೆಲುವು ಕಂಡಿದ್ದಳು.

ರಕ್ತ ರಾತ್ರಿ ನಾಟಕ ಕಾರಟಗಿಯಲ್ಲಿ ನಡೆದಿತ್ತು. ಅಲ್ಲಿಯ ಖಾನಸಾಬ, ಬಾಬಣ್ಣನನ್ನು (ಹಿರಿಯ ಮಗ) ಕೃಷ್ಣನ ಪಾತ್ರಕ್ಕೆ ಕರೆದನು. ''ನಾನು ರಕ್ತರಾತ್ರಿ ನಾಟಕದಾಗ ದ್ರೌಪದಿ, ಮದಹಂಸಿ, ಅರ್ಜುನ, ಭೀಮ, ದುರ್ಯೋಧನ ಮೊದಲಾದ ಸ್ತ್ರೀ ಪುರುಷ ಪಾತ್ರ ಮಾಡೀನಿ. ಆದರೆ ಅವ್ವ ಕೃಷ್ಣನ ಪಾತ್ರ ಮಾಡಿಸಿಲ್ಲ. ಒಲ್ಲೆ'' ಎಂದರು. ಆದರೂ ಖಾನಸಾಬ ನಾಟಕ ಪುಸ್ತಕ, ಮುಂಗಡ ಹಣ ಕೈಯಲ್ಲಿಟ್ಟು, ಕಾರಟಗಿಯಲ್ಲಿ ಇಂಥದಿನ, ಇಂಥಲ್ಲಿ ರಕ್ತರಾತ್ರಿ ನಾಟಕ ಕೃಷ್ಣನ ಪಾತ್ರಕ್ಕ ಬಂದು ಹಾಜರಾಗೆಂದು ಒತ್ತಾಯಿಸಿ ಹೇಳಿ ಹೋದನು. ಹುಬ್ಬಳ್ಳಿಯಲ್ಲಿದ್ದ ಬಾಬಣ್ಣ ತಮ್ಮ ಅವ್ವನಿದ್ದ ಕುಕನೂರಿಗೆ ಬಂದು ನಡೆದ ವಿಷಯ ಹೇಳಿದ. ಅಭಿನಯ, ಹಾಡು ಹೇಳಿ ಕೊಟ್ಟಳು. ಏಕೆಂದರೆ ರೆಹಮಾನವ್ವ ರಕ್ತರಾತ್ರಿಯಲ್ಲಿ ಶ್ರೀ ಕೃಷ್ಣನ ಪಾತ್ರ ಬಹಳ ಚೆನ್ನಾಗಿ ಮಾಡುತ್ತಿದ್ದಳು. ಯಾರೂ ಈಕೆ ಸ್ತ್ರೀ ಯೆಂದು ಗುರುತಿಸುತ್ತಿರಲಿಲ್ಲ. ಕಾರಟಗಿ ನಾಟಕಕ್ಕೆ ಹಾರ್ಮೋನಿಯಂ ಮಾಸ್ತರಾಗಿ ಬಹುದೊಡ್ಡ ಸಂಗೀತ ನಿರ್ದೇಶಕ ಕಂಪ್ಲಿ ವಾದಿರಾಜರು ಬಂದಿದ್ದರು. ಬಾಬಣ್ಣ ಕೃಷ್ಣನ ಪಾತ್ರದಲ್ಲಿ, ಅಶ್ವತ್ಥಾಮನ ಆಟಾಟೋಪ: ''ಎಲೆ ಉತ್ತರೆ! ದಿನ ಮೂರು ಕಳೆವುದರೊಳಗಾಗಿ ಈ ಪೃಥ್ವಿ ನಿಃಪಾಂಡವ ಪೃಥ್ವಿ. ನಿನ್ನ ಗರ್ಭಸ್ಥ ಪಿಂಡಕ್ಕೂ ಪ್ರಳಯ !''ವೆಂದು ಭಯ ಹುಟ್ಟಿಸುತ್ತಿರುವನು. ಉತ್ತರೆ, ದ್ರೌಪದಿಯರಿಗೆ ಕೃಷ್ಣ ಪರಮಾತ್ಮ ಅಭಯ ನೀಡುತ್ತಾನೆ. ''ಪಾಂಡವರ ಬಾಳಿನ ಹಿನ್ನೆಲೆಯೋಳ್ ಝುಳಪಿಸುವ ದೈವೀಶಕ್ತಿಯ ಸೆಣಸಾಟದಲ್ಲಿ ತನ್ನ ಕಸುವ ಕಳೆದುಕೊಳ್ಳುವನು ಅಶ್ವತ್ಥಾಮ''; ಈ ಡೈಲಾಗ್ ಹೇಳಿ ಸೀನ್ ಮುಗಿದಾಗ ಸೈಡ್ ವಿಂಗಿಗೆ ಬಂದ ಹಾರ್ಮೋನಿಯಂ ಮಾಸ್ಟರ್ ಕೆ. ವಾದಿರಾಜರು, ಈವರೆಗೆ ನಾವು ರಸದಾಟದಲ್ಲಿ ಎಂದು ಡೈಲಾಗ್ ಹೊಡೆಯುತ್ತಲೇ ಇದ್ದೇವೆ. ಇದನ್ನು ನೀನು ಸೆಣಸಾಟ ಎಂದು ಹೇಗೆ ತಿದ್ದಿಕೊಂಡಿಯೆಂದರು. ಬಾಬಣ್ಣ ಅಲ್ಲಿಯೆ ಇದ್ದ ಅವ್ವ ರೆಹಮಾನವ್ವನನ್ನು ತೋರಿಸಿದ. ವಾದಿರಾಜರು ಆಕೆಯ ಈ ಮಾರ್ಪಾಡಿಗೆ ತಲೆದೂಗಿದರಂತೆ. ಅಂಥ

ಪಾಂಡಿತ್ಯ ಆಕೆಗೆ ಬಂದು ಬಿಟ್ಟಿತ್ತು. ಇಂಥವೆಷ್ಟೋ ಘಟನೆಗಳು, ಇದೊಂದು ಸಣ್ಣ ಉದಾಹರಣೆ.

ರೆಹಮಾನವ್ವನಿಗೆ ಈ ಪಾಂಡಿತ್ಯ ಹೇಗೆ ಬಂತೆಂದು ಸೋಜಿಗಗೊಂಡಿದ್ದೆ. ಇದನ್ನು ಬಳ್ಳಾರಿಯಲ್ಲಿ ಕಂಡ ಸುಭದ್ರಮ್ಮ ಮನಸೂರರಲ್ಲಿ ಹೇಳಿಕೊಂಡೆ. ಅವರು ರೆಹಮಾನವ್ವನ ನಂತರದ ಪೌರಾಣಿಕ ಪಾತ್ರಗಳಿಗೆ ಹೆಸರಾದ ಅಭಿನೇತ್ರಿ. ಹೇಮರೆಡ್ಡಿ ಮಲ್ಲಮ್ಮ ನಾಟಕದ ಮಲ್ಲಮ್ಮ, ರಕ್ತ ರಾತ್ರಿಯ ದ್ರೌಪದಿ, ಅಕ್ಷಯಾಂಬರದ ದ್ರೌಪದಿ, ಚಿತ್ರಾಂಗದಾದ ಚಿತ್ರಾಂಗದ, ಕುರುಕ್ಷೇತ್ರದ ದ್ರೌಪದಿ ಪಾತ್ರಗಳಿಗೆ ರೆಹಮಾನವ್ವನಂತೆ ಪ್ರಸಿದ್ಧರು. ''ನಾವೇನೂ ಶಾಲೆ–ಕಾಲೇಜಿಗೆ ಹೋಗಿ ಓದಿದವರಲ್ಲ. ೩ನೇ ತರಗತಿ ಓದಿದವರು. ರೆಹಮಾನವ್ವನು ಅಷ್ಟು ಕೂಡ ಓದಿರಲಿಕ್ಕಿಲ್ಲ. ನಾವೆಲ್ಲ ಹೇಗೆ ಈ ಪಾತ್ರಗಳಲ್ಲಿ ಅಸ್ಖಲಿತವಾಗಿ ಸಂಭಾಷಣೆ ಹೇಳುತ್ತಿದ್ದೆವೆಂದರೆ ಕಂದಗಲ್ಲ ರಾಯರು, ನಲವಡಿ ಶ್ರೀ ಕಂಠಶಾಸ್ತ್ರಿಗಳು, ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು, ಎಚ್. ಟಿ. ಮಹಾಂತೇಶ ಶಾಸ್ತ್ರಿಗಳು ಇವರೇ, ಇವರ ನಾಟಕಗಳೇ ನಮಗೆ ಗುರುಗಳು. ಸಂಭಾಷಣೆಗಳ ಸಂದರ್ಭ, ಸಮಯ, ಅದರ ಅರ್ಥ ಅವುಗಳನ್ನು ಹೇಳಬೇಕಾದ ರೀತಿ, ಶಬ್ದಗಳ ಉಚ್ಚಾರಣೆ, ಪ್ರಾಸಬದ್ಧವಾದ ಮಾತುಗಳು ನಮ್ಮ ನಾಲಿಗೆಯ ಮೇಲೆ ನಲಿಯುವಂತೆ ಮಾಡುತ್ತಿದ್ದವು. ಅಲ್ಲಿ ಬರುವ ರೌದ್ರ, ಭೀಭತ್ಸ, ಭಯಾನಕ, ಶೃಂಗಾರ, ಹಾಸ್ಯ ರಸಗಳ ಹೊಳೆ ನಮ್ಮನ್ನು ಎಚ್ಚರಗೊಳ್ಳುವಂತೆ ಮಾಡುತ್ತಿದ್ದವು. ನಮಗೆ ರಂಗ ನಿರ್ದೇಶನ ನೀಡುತ್ತಿದ್ದ ಸಿಡಿಗಿನಮಳೆ ಚಂದ್ರಶೇಖರಯ್ಯನವರು, ಪನ್ನಾಪುರ ಮಹಾಂತಯ್ಯನವರು, ಕಂಪ್ಲಿ ವಾದಿರಾಜರು, ಸಿರಿಗೆರೆ ನಾಗನಗೌಡರು, ಎಚ್. ಸಿದ್ಧಪ್ಪ ಮಾಸ್ತರ ಓಜಿನಹಳ್ಳಿ ಮುಂತಾದವರು ಪೌರಾಣಿಕ ನಾಟಕಗಳನ್ನು ಕಲಿಸುವುದರಲ್ಲಿ ಬಲ್ಲಿದರು. ಅವಿದ್ಯಾವಂತರನ್ನು ಕೂಡ ತಿದ್ದಿ ತೀಡಿ ಬಡಿದು, ಬಯ್ದು ನಟರನ್ನಾಗಿ ಮಾಡುತ್ತಿದ್ದರು. ತಳಕಲ್ಲ ವೆಂಕರೆಡ್ಡಿಯವರು, ಕುಕನೂರು ಸಂಗನ ಬಸಪ್ಪನವರು, ಹಮ್ಮಿಗಿ ನೀಲಕಂಠಪ್ಪ, ಕಿನ್ನಾಳ ಶಿವರುದ್ರಪ್ಪ, ಕಲ್ಲೂರು ರಾಜಾಸಾಹೇಬರು ಮುಂತಾದವರು ರೆಹಮಾನವ್ವನನ್ನು ತಿದ್ದಿದರು.

ಗರುಡ ಸದಾಶಿವರಾಯರು ತಮ್ಮ ಕಂಪನಿಗಳಲ್ಲಿ ಅಭಿನಯಿಸುತ್ತಿದ್ದ ನಟರು ಕಂಪನಿ ಬಿಟ್ಟು ಹೋದರೂ, ಯಾವ ಕಂಪನಿಯವರು ಕರೆದುಕೊಳ್ಳದಿದ್ದರೂ ಹವ್ಯಾಸಿ ತಂಡದವರಿಗೆ ನಾಟಕ ಕಲಿಸಲು ಬರುವಂತೆ ಹಾರ್ಮೋನಿಯಂ, ತಬಲಾ ಮುಂತಾದ ವಾದ್ಯಗಳನ್ನು ನುಡಿಸಲು ತರಬೇತಿ ನೀಡುತ್ತಿದ್ದರು. ಹೀಗಾಗಿ ಹಮ್ಮಿಗಿ ನೀಲಕಂಠಪ್ಪ, ಕಿನ್ನಾಳ ಶಿವರುದ್ರಪ್ಪ, ಗುನ್ನಳ್ಳಿ ಲಿಂಗಪ್ಪ (ಸುಬ್ರಾಯ)

ಮೊದಲಾದವರು ನಾಟಕ ಕಲಿಸಿ ಜೀವನ ನಿರ್ವಹಣೆ ಮಾಡಿದರು. ಕೊನೆಯ ತನಕ ಇವರೆಲ್ಲ ಸ್ವಾಭಿಮಾನದಿಂದ ಬದುಕುವಂತೆ ಗರುಡ ಸದಾಶಿವರಾಯರು ಬದುಕನ್ನು ಕಟ್ಟಿಕೊಟ್ಟಿದ್ದರು.

## ತಳಕಲ್ಲ ವೆಂಕರೆಡ್ಡಿಯವರ ಕಂಪನಿಯಲ್ಲಿ

ತನ್ನ ೧೩ ನೆಯ ವಯಸ್ಸಿನಲ್ಲಿ ತಳಕಲ್ಲ ಕಂಪನಿಯಲ್ಲಿ ಹುಬ್ಬಳ್ಳಿ ಜಮುನಾ, ಕಿತ್ತೂರು ಚೆನ್ನಮ್ಮ ನಾಟಕದಲ್ಲಿ ಚೆನ್ನಮ್ಮನ ಪಾತ್ರ ವಹಿಸಲು ಕೈ ಕೊಟ್ಟಾಗ, ರೆಹಮಾನವ್ವನ ಪುಣ್ಯ ವಿಶೇಷವೆಂಬಂತೆ ಬೆಳಕಿಗೆ ಬಂದಳು. ತಿಪ್ಪೆಯಲ್ಲಿದ್ದ ವಜ್ರದಂತೆ ಪ್ರಕಾಶಕ್ಕೆ ಬಂದಳು. ರೆಹಮಾನಬಿ ಎಂದಿದ್ದವಳು ರೆಹಮಾನ್ ಜಾನ್ ಎಂದು ಪ್ರಸಿದ್ಧಿ ಪಡೆದಳು. ಒಡೆಯರಾದ ವೆಂಕರೆಡ್ಡಿಯವರು ತಮ್ಮ ನಾಟಕ ಕಂಪನಿಯಲ್ಲಿ ಖಾಯಂ ನಟಿಯಾಗಿರಿಸಿಕೊಂಡರು. ತಾವು ಪ್ರಯೋಗಿಸುತ್ತಿದ್ದ ನಾಟಕಗಳಲ್ಲಿ ಪಾತ್ರ ನೀಡಿದರು. ತಿದ್ದಿದರು, ತೀಡಿದರು. ಅಬ್ಬಿಗೇರಿ ಬಸನಗೌಡರ ಕಿತ್ತೂರು ಚೆನ್ನಮ್ಮ ನಾಟಕ ಗದಗ ರತ್ನಮ್ಮನವರ ಅಭಿನಯದಿಂದಾಗಿ ಪ್ರಖ್ಯಾತಿ ಗೊಂಡಿತ್ತಲ್ಲದೆ ಪ್ರೇಕ್ಷಕರಲ್ಲಿ ರಾಷ್ಟ್ರ ಭಕ್ತಿಯನ್ನು, ದೇಶ ಪ್ರೇಮವನ್ನು ಉಕ್ಕಿ ಹರಿಸುತ್ತಿತ್ತು, ಇದರಿಂದ ಬ್ರಿಟಿಷ ಆಳರಸರು ಆ ನಾಟಕವನ್ನು ನಿಷೇಧಿಸಿದರು. ಆ ನಾಟಕದಿಂದಲೇ ಪ್ರೇರಿತರಾದ ತಳಕಲ್ಲ ವೆಂಕರೆಡ್ಡೆಪ್ಪನವರು ಅದೇ ನಾಟಕವನ್ನು ಪ್ರಯೋಗಿಸಿ ಪ್ರಸಿದ್ಧಿಗೆ ಬಂದರು. ನಿಜಾಂ ಪ್ರಾಂತದಲ್ಲಿ ಕಿತ್ತೂರು ಚೆನ್ನಮ್ಮನಾಗಲಿ, ಝಾನ್ಸಿ ಲಕ್ಷ್ಮೀಬಾಯಿ, ನರಗುಂದ ಬಾಬಾಸಾಹೇಬ ಇತ್ಯಾದಿ ನಾಟಕಗಳನ್ನು ಪ್ರಯೋಗಿಸಲು ನಿಷೇಧಾಜ್ಞೆ ಇರಲಿಲ್ಲ, ಇಲ್ಲಿಯ ಅಧಿಕಾರಿಗಳಿಗೆ ಕನ್ನಡ ಬರುತ್ತಿರಲಿಲ್ಲ, ತಿಳಿಯುತ್ತಿರಲಿಲ್ಲ.

ವೆಂಕರೆಡ್ಡಿಯವರ ಕಂಪನಿಯಲ್ಲಿ ಕಿತ್ತೂರು ಚೆನ್ನಮ್ಮನಾಗಿ ರೆಹಮಾನ್ ಜಾನ್, ರುದ್ರಪ್ಪನಾಯಕನಾಗಿ ಹಳ್ಳಿಗುಡಿ ಸದಾಶಿವಪ್ಪ, ವೀರಾವೇಶದಿಂದ ಪಾತ್ರವಹಿಸುತ್ತಿದ್ದರು. ಮುಂದೆ ಇವರು ಪ್ರಪಂಚ ಪರೀಕ್ಷೆ (ರಾಜಾ ಭರ್ತೃಹರಿ) ಟಿಪ್ಪು ಸುಲ್ತಾನ ಹಾಗೂ ಉತ್ತರ ಭೂಪ ನಾಟಕಗಳನ್ನು ಕಲಿತು ಪ್ರಯೋಗಿಸಿದರು. ಈ ವರೆಗೆ ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ರೆಹಮಾನ್ ಜಾನ್ ಮಲ್ಲಮ್ಮನಾಗಿ ವೆಂಕರೆಡ್ಡಿಯವರು ಭರಮರೆಡ್ಡಿಯಾಗಿ ಪಾತ್ರವಹಿಸಿ ಜಯಭೇರಿ ಬಾರಿಸಿದ್ದರು. ನಲವಡಿ ಶ್ರೀ ಕಂಠ ಶಾಸ್ತ್ರಿಗಳ ಪೂರ್ವಾರ್ಧ ಹೇಮರೆಡ್ಡಿ ಮಲ್ಲಮ್ಮನನ್ನು ತಡವಲ್ಲಾದ ವಿಷ್ಣುಪಂತ ಕುಲಕರ್ಣಿಯವರ ವಿಶ್ವರಂಜನಿ ನಾಟಕ ಸಂಘ ಪ್ರಯೋಗಿಸುತ್ತಿತ್ತು, ಉತ್ತರಾರ್ಧವನ್ನು ಭೀಮಪ್ಪ ಹೂಗಾರರ ಭಾಗ್ಯೋದಯ

ನಾಟಕ ಮಂಡಳಿ ಅಥಣಿ ಪ್ರಯೋಗಿಸುತ್ತಿತ್ತು. ಇವೆರಡನ್ನು ಸೇರಿಸಿ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕ ಪ್ರಯೋಗಿಸುವ ಹುಮ್ಮಸ್ಸಿನಿಂದ ನಲವಡಿ ಶ್ರೀಕಂಠ ಶಾಸ್ತ್ರಿಗಳು ತಳಕಲ್ಲ ವೆಂಕರೆಡ್ಡಿಯವರಿಗೆ ಈ ನಾಟಕ ನೀಡಿದರು. ತಾವೇ ನಿಂತು ಪ್ರ್ಯಾಕ್ಟೀಸು ಮಾಡಿಸಿದರು. ಇದೊಂದು ಐತಿಹಾಸಿಕ ಘಟನೆ. ಹೇಮರೆಡ್ಡಿ ಮಲ್ಲಮ್ಮನಾಗಿ ಪ್ರಥಮವಾಗಿ ಬಣ್ಣ ಹಚ್ಚಿಕೊಂಡಿದ್ದ ಯರಗುಪ್ಪಿ ಲಿಂಗರಾಜ ಬುವಾ ಮಲ್ಲಮ್ಮನಾಗಿ, ಅಮೀನಗಡ ಲಾಡಸಾಹೇಬ ನಾಗಮ್ಮನಾಗಿ, ಡಿ. ದುರ್ಗಾದಾಸ ವೇಮಣ್ಣನಾಗಿ ಸ್ವತಃ ವೆಂಕರೆಡ್ಡಿ ಭರಮರೆಡ್ಡಿಯಾಗಿ, ಬೆಟ್ಟದೂರು ಶಂಕರಯ್ಯನವರು ಮಲ್ಲಿಕಾರ್ಜುನನಾಗಿ, ಗರುಡ ಶ್ರೀಪಾದರಾಯರು ಮಲ್ಲಮ್ಮನ ಅತ್ತೆ ಪದ್ಮಮ್ಮನಾಗಿ ಅಭಿನಯಿಸಿದ್ದರು. ೭–೮ ಗಂಟೆಯವರೆಗೆ ಈ ನಾಟಕ ನಡೆಯುತ್ತಿತ್ತು. ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ಪ್ರಥಮವಾಗಿ ಪ್ರಯೋಗಿಸಿದ ಕೀರ್ತಿ ತಳಕಲ್ಲ ವೆಂಕರೆಡ್ಡಪ್ಪನವರಿಗೆ ಸಲ್ಲುತ್ತದೆ. ಪೂರ್ವಾರ್ಧ ಹಾಗೂ ಉತ್ತರಾರ್ಧ ಹೇಮರೆಡ್ಡಿ ಮಲ್ಲಮ್ಮ ನಾಟಕಗಳಲ್ಲಿ ಮಲ್ಲಮ್ಮನಾಗಿ ಪಾತ್ರ ವಹಿಸಿದ್ದ ರೆಹಮಾನ್‌ಜಾನ್‌ರಿಗೆ ತಮಗೆ ಆ ಪಾತ್ರ ನೀಡದಿರುವುದಕ್ಕೆ ಅವಮಾನವೆನಿಸಿತು. ಇದರಿಂದಾಗಿ ಅವರು ಬೇರೆ ನಟರೊಂದಿಗೆ ಬೇರೆ ಬೇರೆ ಕಂಪನಿಗಳಿಗೆ ಹೋಗುವ ಅನಿವಾರ್ಯತೆ ಉಂಟಾಯಿತು.

ಕುಕನೂರು ಪಶ್ಚಿಮಕ್ಕೆ ೧೦ ಕಿ.ಮೀ. ಅಂತರದಲ್ಲಿ ಫಲವತ್ತಾದ ಜಮೀನುಗಳಿಂದ ಕೂಡಿದ ಚಿಕ್ಕೇನಕೊಪ್ಪ ಗ್ರಾಮವಿದೆ. ಅಲ್ಲಿಯ ವೀರಪ್ಪ ಮೇವುಂಡಿಯವರ ಪುತ್ರ ನಂದಪ್ಪ. ತಮ್ಮ ಹಳ್ಳಿಯ ನಾಟಕಗಳಲ್ಲಿ ಅಭಿನಯಿಸಿ ರಂಗಾಸಕ್ತಿಯಿಂದ ತಳಕಲ್ಲ ಕಂಪನಿಗೆ ಸೇರಿದನು. ಅಂಗಸೌಷ್ಠವವುಳ್ಳ ಸಾಧಾರಣ ಎತ್ತರದ ಸ್ಪುರದ್ರೂಪಿ ಯುವಕ ಅಭಿನಯಪಟುವಾಗಿದ್ದನು. ಮಾಲೀಕರು ಈತನ ಹೆಸರು ನಂದಕುಮಾರ ಮೇವುಂಡಿ ಎಂದು ಬದಲಿಸಿ ತುಂಬ ಪ್ರಚಾರ ನೀಡಿದರು. ಈತನಿಗೆ ರೆಹಮಾನ್‌ಜಾನ್ ನಾಯಕಿಯಾಗಿ ಪಾತ್ರ ನಿರ್ವಹಿಸಿದಳು. ಕಿತ್ತೂರು ಚೆನ್ನಮ್ಮ ಹೇಮರೆಡ್ಡಿ ಮಲ್ಲಮ್ಮ, ನೆಲ್ಲೂರು ನಂಬೆಕ್ಕ, ಬಡತನ ಭೂತಗಳಲ್ಲಿ ಇವರು ಜೊತೆಯಾಗಿ ಅಭಿನಯಿಸಿದರು. ಛೀ ಹುಚ್ಚು ಖೋಡಿ ಮನಸು, ಹದಿನಾರರ ವಯಸು, ಎನ್ನುವಂತೆ ನಂದಕುಮಾರ ಮತ್ತು ರೆಹಮಾನ್ ಜಾನ್ ದೈಹಿಕ ಆಕರ್ಷಣೆಗಳೊಳಗಾದರು. ಕಂಪನಿಬಿಟ್ಟು ಓಡಿ ಹೋದರು. ಹಲವಾರು ಕಂಪನಿಗಳಿಗೆ ಎಡತಾಕಿದರು. ಶಾಂತಿನಿವಾಸ ಕಂಪನಿಗೆ ಇವರು ಹೋದಾಗ ಅದರಲ್ಲಿ ಡಾ. ರಾಜಕುಮಾರ್, ಪಂಢರೀಬಾಯಿ ಯವರಂಥ, ಧೀಮಂತ ನಾಯಕ ನಟರಿದ್ದರೆಂದು ಡಾ. ಮಲ್ಲಿಕಾರ್ಜುನ

ಕುಂಬಾರವರ 'ಯಲಬುರ್ಗಾ ತಾಲೂಕಿನ ರಂಗಭೂಮಿ ಒಂದು ಅಧ್ಯಯನ, ಎಂಬ ಪಿಎಚ್.ಡಿ. ಮಹಾ ಪ್ರಬಂಧದಲ್ಲಿ ಉಲ್ಲೇಖಗೊಂಡಿದೆ.

ನಂದಕುಮಾರ್ ಹಾಗೂ ರೆಹಮಾನ್ ಜಾನ್‌ರ ಮದುವೆಯನ್ನು ಸ್ವತಃ ತಳಕಲ್ಲ ವೆಂಕರೆಡ್ಡಿಯವರು ನಿಂತು ಮಾಡಿ, ಆಶೀರ್ವದಿಸಿ ಕಳಿಸಿದರೆಂದು ಹೇಳುತ್ತಾರೆ. ಇವರ ಬಗ್ಗೆ ತಿಳಿದುಕೊಳ್ಳಲು ನಂದಕುಮಾರರ ಊರಾದ ಚಿಕ್ಕೇನಕೊಪ್ಪಕ್ಕೆ ಹೋದಾಗ ನನ್ನ ಹಳೆಯ ಮಿತ್ರರು, ಕಲಬುರ್ಗಿಯ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಆರ್.ಎಲ್. ಬಡಿಗೇರರನ್ನು ಸಂಪರ್ಕಿಸ ಬೇಕೆಂದರು. ಪ್ರೊ. ಆರ್. ಎಲ್. ಬಡಿಗೇರವರಲ್ಲಿಗೆ ಹೋದಾಗ ಕೆಲವು ವಿವರಗಳನ್ನು ನೀಡಿದರು. ''ಅನೇಕ ಕಂಪನಿಗಳಲ್ಲಿ ಅಲೆದಾಡಿ ನಂದಕುಮಾರ ರೆಹಮಾನ್‌ಜಾನ್‌ರನ್ನು ಕರೆದುಕೊಂಡು ಚಿಕ್ಕೇನಕೊಪ್ಪಕ್ಕೆ ಬಂದರು. ಚಿಕ್ಕೇನ ಕೊಪ್ಪದಲ್ಲಿ ಮುಟಗಿ ಸಂಗಪ್ಪ ಕಲಾ ಪ್ರೇಮಿ, ಬಡಿಗೇರ ಲಿಂಗಪ್ಪನವರು, ಬಿಸನಳ್ಳಿ ಲಿಂಗಪ್ಪ ಎಲ್ಲರೂ ಸೇರಿ ಸೊಲ್ಲಾಪುರ ಸಿದ್ಧರಾಮೇಶ್ವರರನ್ನು ಕುರಿತು ನಾಟಕವಾಡಬೇಕೆಂದು ನಿಶ್ಚಯಿಸಿದರು. ನಲವಡಿ ಶ್ರೀಕಂಠಶಾಸ್ತ್ರಿಗಳನ್ನು ಚಿಕ್ಕೇನಕೊಪ್ಪಕ್ಕೆ ಬರಮಾಡಿಕೊಂಡರು. ಅವರಿಗೆ ಎಲ್ಲ ಸವಲತ್ತುಗಳನ್ನು, ಸಂಭಾವನೆಯನ್ನು ನೀಡಿ ಸಿದ್ಧರಾಮೇಶ್ವರ ನಾಟಕ ಬರೆಯಿಸಿದರು. ಅವರೇ ನಾಟಕದ ಪ್ರ್ಯಾಕ್ಟೀಸು ಮಾಡಿಸುತ್ತಿದ್ದರು. ಕಲ್ಲೂರು ರಾಜಾಸಾಹೇಬರು ಹಾರ್ಮೋನಿಯಂ ಹಾಗೂ ಹಾಡುಗಳನ್ನು, ಸಂಗನಾಳ ಶಾಸ್ತ್ರೀಮಠ ಸಿದ್ಧರಾಮಯ್ಯ ನವರು ಕೂಡ್ರಿಸಿದರು. ಕರೀಂಸಾಬ ಕಲ್ಲೂರು ತಬಲಾವಾದಕರಾಗಿದ್ದರು. ಶ್ರೀಮಂತರ ಊರಾಗಿದ್ದರಿಂದ ಬಡವರನ್ನು ಬಿಟ್ಟು ಊರವರೇ ನಾಟಕ ಪ್ರಯೋಗಕ್ಕೆ ಹಣವನ್ನು ಕೂಡಿಸಿದರು. ನಂದಕುಮಾರ ಮೇವುಂಡಿ ಸಿದ್ಧರಾಮನಾಗಿ, ರೆಹಮಾನ್‌ಜಾನ್ ಅಕ್ಕಮಹಾದೇವಿ, ಬಿಸನಳ್ಳಿ ಲಿಂಗಪ್ಪ ಪಾರ್ವತಿಯಾಗಿ, ಹಾಸ್ಯ ಪಾತ್ರದಲ್ಲಿ ಬಡಿಗೇರ ಲಿಂಗಪ್ಪ ಒಳ್ಳೆಯ ಅಭಿನಯ ನೀಡಿದ್ದಾಗಿ ಹಿರಿಯರು ಹೇಳುತ್ತಿದ್ದರು. ಈ ಹವ್ಯಾಸಿ ನಾಟಕ ತಂಡ ಇಷ್ಟಕ್ಕೆ ಕೈ ಕಟ್ಟಿ ಕೂಡ್ರಲಿಲ್ಲ.

ಸಿದ್ಧರಾಮೇಶ್ವರರ ಕರ್ಮಭೂಮಿಯಾದ ಸೋಲ್ಲಾಪುರಕ್ಕೆ ಈ ನಾಟಕ ತಂಡ ಹೋಗಿ ಅಲ್ಲಿ ಯಶಸ್ವಿಯಾಗಿ ಹಲವಾರು ಪ್ರಯೋಗಗಳನ್ನು ಮಾಡಿತು. ಚಿಕ್ಕೇನಕೊಪ್ಪದಂಥ ಒಂದು ಮೊಗಲಾಯಿ ಹಳ್ಳಿ, ರೆಹಮಾನವ್ವನಂಥ ಉದಯೋನ್ಮುಖ ನಟಿಯೊಂದಿಗೆ ನಂದಕುಮಾರ ಮೇವುಂಡಿಯವರ ಸಂಘಟನಾ ಶಕ್ತಿ ಮತ್ತು ರಂಗಾಸಕ್ತಿಯಿಂದ ಅಲ್ಲಿಯ ಹಿರಿಯರ, ಕಲಾವಂತರ ಪಾಲ್ಗೊಳ್ಳುವಿಕೆಯಿಂದ ಶಿವಯೋಗಿ ಸಿದ್ಧರಾಮ, ಸೊಲ್ಲಾಪುರದಲ್ಲಿ ಪ್ರದರ್ಶನ ನೀಡಿತೆಂಬುದು ದಾಖಲಿಸಬೇಕಾದ ಸಂಗತಿಯಾಗಿದೆ.

ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ, ಗಂಗಾವತಿ ಹಾಗೂ ಯಲಬುರ್ಗಾ ತಾಲೂಕುಗಳಲ್ಲಿ ಕೊನೆಗೆ ಬರುವಂಥದು ಯಲಬುರ್ಗಾ. ಆರ್ಥಿಕವಾಗಿ ಬಹಳ ಹಿಂದುಳಿದಿರುವ ಯಲಬುರ್ಗಾ ಕನಿಷ್ಠವಾದದ್ದಲ್ಲ. ಯಲಬುರ್ಗಾ ತಾಲೂಕಿನ ಜನರು ಜಾಣರು ಅನ್ನುವುದಕ್ಕಿಂತ ತುಂಬ ಪ್ರಯತ್ನಶೀಲರು. ಕಠಿಣ ಪರಿಶ್ರಮಿಗಳು. ಮಳೆ ಬೀಳದ, ಬೆಳೆ ಬಾರದ ಪ್ರದೇಶವಾಗಿರುವುದರಿಂದ ಇವರು ಸಾಹಸಿಗರಾಗಿದ್ದಾರೆ. ನ್ಯಾಯಾಂಗ ಇಲಾಖೆಗೆ ದೊಡ್ಡ ಕೊಡುಗೆ ನೀಡಿದೆ. ಹೈಕೋರ್ಟ ನ್ಯಾಯಾಧೀಶರಾಗಿದ್ದಾರೆ, ಜಿಲ್ಲಾ ನ್ಯಾಯಾಧೀಶರು , ಮುನ್ಸಿಫ್‌ರು ಬಹಳ. ನ್ಯಾಯವಾದಿಗಳಂತೂ ಪ್ರಸಿದ್ಧರು. ಈ ತಾಲೂಕಿನಲ್ಲಿ ಅನೇಕ ನಾಟಕ ಕಂಪನಿಗಳು, ನಟ ನಟಿಯರು, ಸಂಗೀತಗಾರರು ಹಾಗೂ ರಂಗಭೂಮಿ ನಿರ್ದೇಶಕರು ಬಹಳ ಸಂಖ್ಯೆಯಲ್ಲಿದ್ದಾರೆ. ರೆಹಮಾನವ್ವನಾದರೂ ತುಂಬ ಬುದ್ಧಿವಂತೆ, ಶ್ರದ್ಧಾವಂತೆ, ಬಿಡದ ಹಠವಾದಿ, ಸಂಘಟನಾ ಶಕ್ತಿಯುಳ್ಳ ಕ್ರಿಯಾಶೀಲ ಕಲಾವಿದೆ. ದನಕಾಯುವ ಮೊದಲು ಶಾಲೆಗೆ ಹೋಗಿ ಅಕ್ಷರ ಜ್ಞಾನಪಡೆದಿದ್ದಳು. ಜೀವನದ ಪುಣ್ಯ ವಿಶೇಷವೆನ್ನುವಂತೆ ಆಕೆಯಲ್ಲಿ ಹುದುಗಿದ ಅಭಿನಯ, ನಟನಾ ಕೌಶಲ್ಯ ಹುಬ್ಬಳ್ಳಿಯ ಜಮುನಾ ಬಾಯಿಯ ನಿರ್ಗಮನದಿಂದ ಕಿತ್ತೂರು ಚೆನ್ನಮ್ಮನ ಪಾತ್ರದಲ್ಲಿ ವ್ಯಕ್ತವಾಯಿತು. ಜೀವನದಲ್ಲಿ ತಿರುವುಗಳು ಬರುತ್ತವೆ. ದೈವದ ಬಾಗಿಲು ತೆರೆಯುತ್ತದೆ. ಆ ಸಂದರ್ಭದಲ್ಲಿ ಕೆಲವರು ಎಣ್ಣೆ ಬಂದಾಗ ಕಣ್ಣು ಮುಚ್ಚಿದರು ಎನ್ನುವಂತೆ ಅವಕಾಶ ಕಳೆದುಕೊಂಡುಬಿಡುತ್ತಾರೆ. ಹಾಗೆ ಮಾಡದೆ, ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡಳು. ಅಜ್ಜಿ ಹಸನಮ್ಮನಿಗೆ ತುಂಬ ಸಂತೋಷವಾಯಿತು. ಮೊಮ್ಮಗಳೊಂದಿಗೆ ತಳಕಲ್ಲದ ತನ್ನ ಸಮಾಜದವರೊಂದಿಗೆ ವಾಸಿಸಹತ್ತಿದಳು. ಆಕೆಗೆ ಅಭಿನಯದಲ್ಲಿ ಬಹಳಷ್ಟು ತರಬೇತಿಯನ್ನು ಒಡೆಯರಾದ ವೆಂಕರೆಡ್ಡಪ್ಪನವರು ನೀಡಿದರು. ಅವರು ಇನ್ನಿತರ ಪಾತ್ರಗಳಿಗೆ ನೀಡುತ್ತಿದ್ದ ತರಬೇತಿಯನ್ನು ಗಮನಿಸುತ್ತಿದ್ದಳು. ತಾನದನ್ನು ಕಲಿತುಕೊಳ್ಳುತ್ತಿದ್ದಳು. ಆಕೆಯ ನೆನಪಿನ ಶಕ್ತಿ ಅಗಾಧವಾಗಿತ್ತು, ಒಂದು ನಾಟಕದ ತಾಲೀಮು ನಡೆದರೆ, ಆ ನಾಟಕದ ಎಲ್ಲ ಪಾತ್ರಗಳ ಸಂಭಾಷಣೆಗಳು ಆಕೆಗೆ ಮುಖೋದ್ಗತವಾಗಿಬಿಡುತ್ತಿದ್ದವು. ಪಕ್ಕದಲ್ಲಿ ನಿಂತಿದ್ದು ತಾನು ಹೇಳಿಕೊಡುತ್ತಿದ್ದಳು. ಇದರಿಂದ ಸಹನಟರ ಪ್ರೀತಿ, ವಿಶ್ವಾಸ, ಗೌರವಕ್ಕೆ ಪಾತ್ರಳಾಗುತ್ತಿದ್ದಳು. ಮಧುರ ಕಂಠವಿದ್ದುದರಿಂದ ಸಂಗೀತ ನಿರ್ದೇಶಕರು ಹೇಳಿಕೊಟ್ಟ ರಾಗಗಳನ್ನೂ ಗಮನವಿಟ್ಟು ಕಲಿತುಕೊಂಡು ಸಂಗೀತ ವಾದ್ಯಗಳೊಂದಿಗೆ ಹಾಡುತ್ತಿದ್ದಳು. ರಂಗ ಸಂಗೀತದ ಪಾಠವಾದದ್ದು ಆ ಕಾಲದ ಸುಪ್ರಸಿದ್ಧ ಸಂಗೀತಗಾರರಾಗಿದ್ದ

ಸಂಗನಬಸಪ್ಪ ಮಟ್ಟಿಯವರಿಂದ. ಅವರು, ತಮ್ಮ ಊರಿನ ಬೆಳೆಯುವ ರಂಗಕಲಾವಿದೆಯನ್ನು, ತಮ್ಮ ಕಂಪನಿಗೆ ತೆಗೆದುಕೊಂಡು ರಂಗ ಸಂಗೀತವಷ್ಟೇ ಅಲ್ಲ ಶಾಸ್ತ್ರೀಯ ಸಂಗೀತವನ್ನೂ ಕಲಿಸಿಕೊಟ್ಟರು.

## ಏಣ್ಗಿ ಬಾಳಪ್ಪನವರೊಂದಿಗೆ



ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ ಮಧ್ಯ ವಯಸ್ಸಿನಲ್ಲಿ

ಧಾರವಾಡದಲ್ಲಿರುವ ಸೋದರ ಸಾಹಿತಿ ಮಲ್ಲಿಕಾರ್ಜುನ ಹಿರೇಮಠರ ಮನೆಯಲ್ಲಿ ಉಪಾಹಾರ ಸ್ವೀಕರಿಸಿ, ಉಲ್ಲಾಸದಿಂದ ಹೊರಟೆ. ಅಂದು ೨೦೧೧ರ ಕಿತ್ತೂರು ಉತ್ಸವ ಅಕ್ಟೋಬರ್ ೨೩, ಬೆಂಗಳೂರು–ಪುಣೆ ಹೆದ್ದಾರಿಯಲ್ಲಿ ಮಂತ್ರಿಮಹೋದಯರ ಅಧಿಕಾರಿಗಳ, ರಾಜಕಾರಣಿಗಳ ಕಾರಿನ ಓಡಾಟವಿತ್ತು ವಾಹನಗಳ ದಟ್ಟಣೆಯಲ್ಲಿಯೇ ಧೋ ಧೋ ಸುರಿಯುವ ಮಳೆಯಲ್ಲಿಯೇ ಚೆನ್ನಮ್ಮನ ಕಿತ್ತೂರಿನಿಂದ ಮಲ್ಲಮ್ಮನ ಬೆಳವಡಿಗೆ ಬಸ್ಸಿನಲ್ಲಿ ಬಂದಿಳಿದೆ. ಮಳೆ ಬಿಟ್ಟಿರಲಿಲ್ಲ, ಕುಟ್ಟುತ್ತಲೇ ಇತ್ತು. ಅಲ್ಲಿಂದ ರಂಗಭೂಮಿಯ ಭೀಷ್ಮ ಬಾಳಪ್ಪನವರ ಊರು ಏಣ್ಗಿಗೆ ಹೋಗಬೇಕು. ಹಿರಿಯ ರಂಗ ಕರ್ಮಿ ವಸಂತ ಕುಲಕರ್ಣಿಯವರು ಬಾಳಪ್ಪನವರ ಮಗ ಅರವಿಂದರಿಗೆ ಮಾತಾಡಿ, ಬಾಳಪ್ಪನವರು ಅಂದು ಊರಲ್ಲಿರುವುದನ್ನು ಖಚಿತಪಡಿಸಿಕೊಂಡಿದ್ದರು. ನಾನೇನೋ ಧೋ ಧೋ ಸುರಿಯುವ ಮಳೆಯಲ್ಲಿ ಬೆಚ್ಚಗಿದ್ದೇನೆ, ೭೧ರ ಪಾಟೀಲರು ಅಂದರೆ ನಾನು, ಬೇಕಾದ ಮಾಹಿತಿಗಾಗಿ ದೂರವಾಣಿಯಲ್ಲಿ ಸಂಪರ್ಕಿಸಲಿ ಎಂದು ಬಾಳಪ್ಪನವರು ಹೇಳಿದ್ದರೂ, ಆ ಹಿರಿಯ ಜೀವವನ್ನು ಕಂಡು, ರೆಹಮಾನವ್ವನವರ ಬಗ್ಗೆ ತಿಳಿದುಕೊಳ್ಳಬೇಕೆಂದು ಏಣ್ಗಿಗೆ ಸುರಿಯುವ ಮಳೆಯಲ್ಲಿ ಬಂದೆ. ನಾನು ಹೋದಾಗ ಅವರು ಮಲಗಿಬಿಟ್ಟಿದ್ದರು. ಅವರು ಕಿರು ವಿಶ್ರಾಂತಿ ಮುಗಿಸುವುದರಲ್ಲಿ ಮುಖ ತೊಳೆದು ಊಟಮಾಡಿರೆಂದು ಮಗ ಅರವಿಂದರು ಆಗ್ರಹಪಡಿಸಿದ್ದರಿಂದ ಊಟ ಮಾಡಿದೆ; ಅವರ ಶ್ರೀಮತಿಯವರ ಆದರೋಪಚಾರದಲ್ಲಿ

ರೆಹಮಾನವ್ವ ಕಲ್ಮನಿ ಮೊಗಲಾಯದ ಹೆಣ್ಮಗಳು, ಅದು ಹೇಗೆ ಹಂದಿಗನೂರು ಸಿದ್ಧರಾಮಪ್ಪನವರ ಕಂಪನಿಯಲ್ಲಿ ಅವರೊಂದಿಗೆ ಪಾತ್ರ ನಿರ್ವಹಿಸಿದಳು? ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿಯಲ್ಲಿ ತುಕಾರಾಮ ಬುವಾರ ನೇತೃತ್ವವಿರುವಾಗ ಬಸವರಾಜ ಹೊಸಮನಿಯವರೊಂದಿಗೆ ನಾಯಕಿಯಾಗಿ ಅಭಿನಯಿಸಿದಳು? ಅದರ ಹಾಗೇ ನಿಮ್ಮ ಕಲಾ ವೈಭವ ನಾಟ್ಯ ಸಂಘದಲ್ಲಿ ನಿಮ್ಮೊಂದಿಗೆ ಕಂಪನಿ ನಟಿಯಾಗಿದ್ದರು? ಇವೆಲ್ಲ ಅಚ್ಚರಿ ತರಿಸುವ ಸಂಗತಿಗಳಲ್ಲವೆ? ಎಂದು ಅಚ್ಚರಿ ತುಂಬಿದ, ಸಮಸ್ಯೆಗಳ ಕಣ್ಣಿನಿಂದ ನಾನು ಪ್ರಶ್ನಿಸಿದಾಗ ಮೌನವಾಗಿ ಆಲಿಸಿದರು; ೯೬ ತುಂಬಿದ (ಜನನ ೧೯೧೪) ವಯೋವೃದ್ಧರು. ವಿಶ್ರಾಂತಿ–ತೆಗೆದುಕೊಂಡು ಎದ್ದಿದ್ದರಿಂದ ಈ ಮುಪ್ಪಿನಲ್ಲಿಯೂ ಉಲ್ಲಸಿತರಾಗಿದ್ದರು. ''ನಿಮಗ ಸಂಗನಬಸಪ್ಪ ಕುಕನೂರು ಎಂಬ ನಟರು ಗೋತ್ತೇನು? ಅವರ್ನ ನೋಡೀರಿ?'' ಎಂದು ಕೇಳಿದರು. ಈ ಟೀವಿಯಲ್ಲಿ ಪ್ರಸಾರವಾಗುವ 'ಮಹಾನವಮಿ' ಧಾರಾವಾಹಿಯಲ್ಲಿ ಥೇಟ್ ಇವರ ಮಗ ಏಣ್ಗಿ ನಟರಾಜರು ವಾಡೇದ ದೇಸಾಯಿಯಾಗಿ ಸುಗುಣೆಯನ್ನು ಪ್ರಶ್ನಿಸುವ ಧಾಟಿಯಲ್ಲಿ ಕೇಳಿಸಿದಂತಾಯಿತು.''ಸಂಗನಬಸಪ್ಪ ವಾಮನರಾಯರ ವಿಶ್ವ ಗುಣಾದರ್ಶ ಸಂಗೀತ–ನಾಟಕ ಮಂಡಳಿಯಲ್ಲಿದ್ದರು. ಅವರ ಬಗ್ಗೆ ಕೇಳೀನಿ; ಓದೀನಿ. ಆದ್ರ ಅವರನ್ನು ನಾನು ನೋಡಿಲ್ಲ. ಅವರು ಕುಕನೂರಲ್ಲಿ ೧೯೩೮ ರಲ್ಲಿ ಭರತ ಕಲಾ ನಾಟ್ಯ ಸಂಘವನ್ನು ಕಟ್ಟಿದ್ದರು;'' ಎಂದೆ. ''ಭಲೇ ಭೇಷ್! ಸಂಗನಬಸಪ್ಪ ಕುಕನೂರು ವಾಮನರಾಯರ ಶಿಷ್ಯರು, ಅವರ ಬಲಗೈಯ್ಯಾಗಿದ್ದರು. ರಂಗ ಸಂಗೀತದ, ಶಾಸ್ತ್ರೀಯ ಹಾಡುಗಾರರಾಗಿದ್ದರು. ದೊಡ್ಡ ಕಲಾವಿದರೂ ಆಗಿದ್ದರು. ಮೊದಮೊದಲು ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದರು. ನಂತರ ಪುರುಷ ಪಾತ್ರಗಳನ್ನು ಅಷ್ಟೇ ಸಮರ್ಥವಾಗಿ ಮಾಡಿದರು. ವಾಮನರಾಯರ ಕಂಪನಿಯಲ್ಲಿ ಗಂಗೂಬಾಯಿ ಗುಳೇದಗುಡ್ಡ ಪ್ರಮುಖ ಪಾತ್ರವಹಿಸುತ್ತಿದ್ದರು. ಏಕಾಏಕಿ ಕೈಕೊಟ್ಟು ಹೋಗಿದ್ದರಿಂದ ಕಂಪನಿ, ನಾಟಕ ನಿಲ್ಲಿಸುವ ಪರಿಸ್ಥಿತಿಯುಂಟಾಗಿತ್ತು, ಆಗ ಕುಕನೂರಿನಲ್ಲಿದ್ದ ಸಂಗನಬಸಪ್ಪನವರನ್ನು ಕರೆಯಿಸಿಕೊಂಡು, ಗಂಗೂಬಾಯಿ ಗುಳೇದಗುಡ್ಡರು ಮಾಡುತ್ತಿದ್ದ ಪಾತ್ರಗಳನ್ನು ಮಾಡಿಸಿದರು. ಆಕೆಯ ಕೊರತೆಯನ್ನು ತುಂಬಿದ ಧೀಮಂತ ಗಾಯಕ ಹಾಗೂ ಅಭಿನಯಪಟು ಸಂಗನಬಸಪ್ಪ ಕುಕನೂರರು. ವಾಮನರಾಯರು ಇವರನ್ನು ನಂಬಿದ್ದರು. ಒಮ್ಮೆ ವಾಮನರಾಯರು ತಮಗೆ ವಯಸ್ಸಾಯಿತು. ಪಾತ್ರ ಪೋಷಣೆ ಸರಿಯಾಗಿ ಮಾಡುತ್ತೇನೋ ಇಲ್ಲವೋ, ಹಿಂದಿನಂತೆ ರಂಗಗೀತೆಗಳನ್ನು

ಹಾಡುತ್ತೇನೋ, ಇಲ್ಲವೋ ಎಂಬ ಶಂಕೆಯುಂಟಾಗಿ, ನಾಯಕ ಪಾತ್ರಗಳನ್ನು ವಹಿಸಲು ಹಿಂದೇಟು ಹಾಕಿದರು. ಆಗ ಸಂಗನಬಸಪ್ಪ "ನೀವು ಈಗಲೂ ಆರೋಗ್ಯದಿಂದಿದ್ದೀರಿ. ನಿಮಗೇನು ಮಹಾ ವಯಸ್ಸು ೫೧! ನಾಯಕ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದೀರಿ. ನಿಮ್ಮ ಕಂಠ ಮಾಧುರ್ಯದಲ್ಲಾಗಲಿ, ಸಂಗೀತದಲ್ಲಾಗಲೀ ಯಾವ ಕೊರತೆ ಕಾಣುತ್ತಿಲ್ಲ"ವೆಂದು ಅವರನ್ನು ಹುರಿದುಂಬಿಸಿ, ಧೈರ್ಯನೀಡುತ್ತ ಅವರ ಕಂಪನಿಯ ಬೆನ್ನೆಲುಬಾಗಿದ್ದರು. ಆ ಕಾಲದ ಹಿಂದೂಸ್ತಾನೀ ಗಾಯಕ ನಟರಾಗಿದ್ದ ಬಸವರಾಜ ಮನಸೂರು, ಮಲ್ಲಿಕಾರ್ಜುನ ಮನಸೂರು, ನೀಲಕಂಠಬುವಾ, ಲಿಂಗರಾಜ ಯರಗುಪ್ಪಿ ಹಾಗೂ ಹಮ್ಮಿಗಿ ನೀಲಕಂಠಪ್ಪನವರ ಸರಿಸಮಾನರಾಗಿದ್ದಂಥವರು, ಸಂಗನ ಬಸಪ್ಪ. ಆದ್ದರಿಂದ ರೆಹಮಾನಬಿ ತಳಕಲ್ಲ ವೆಂಕರೆಡ್ಡೆಪ್ಪನವರ ಕಂಪನಿ ಬಿಟ್ಟು ಬಂದು ಇವರ ಭರತ ಕಲಾ ನಾಟ್ಯ ಸಂಘ ೧೯೫೩ರಲ್ಲಿ ಆರಂಭಗೊಂಡಾಗ ಸೇರಿಕೊಂಡರು. ಆವರ ಪ್ರಥಮ ಪ್ರಯೋಗ 'ಭಕ್ತಪ್ರಹ್ಲಾದ', ಅದರಲ್ಲಿ ಸಂಗನ ಬಸಪ್ಪನವರೊಂದಿಗೆ ಹಿರಣ್ಯಕಶ್ಯಪನ ಪತ್ನಿ ಖಯಾದು ಪಾತ್ರವಹಿಸಿದರು. ಆ ಕಂಪನಿ ನಡೆದದ್ದೇ ಒಂದೆರಡು ವರ್ಷ. ಈ ಅವಧಿಯಲ್ಲಿ ಅವರು ಪ್ರಯೋಗಿಸಿದ ಭಕ್ತ ಪ್ರಹ್ಲಾದ, ಲಂಕಾದಹನ, ಸಂಪೂರ್ಣ ರಾಮಾಯಣ, ದ್ರೌಪದಿ ಸಂಚು, ಭಕ್ತ ಮಾರ್ಕಂಡೇಯ ಮುಂತಾದವು ಸಂಗೀತ ಪ್ರಧಾನ ನಾಟಕಗಳಾಗಿದ್ದವು. ಆ ನಾಟಕಗಳ ಅಭಿನಯದೊಂದಿಗೆ ರಂಗಗೀತೆಗಳ ಅನುಭವ ಪಡೆದಳು. ರಂಗ ಗೀತೆಗಳನ್ನು ಅರಗಿಸಿಕೊಂಡಳು. ರೆಹಮಾನವ್ವ ಆಕರ್ಷಕ ರೂಪು ಪಡೆದಿದ್ದರು. ಅವರ ರೂಪಿಗೆ ತಕ್ಕ ಅಭಿನಯವಿತ್ತು. ಅಭಿನಯಕ್ಕೆ ತಕ್ಕ ಕಂಠಮಾಧುರ್ಯವಿತ್ತು. ಅವರು ತಳಕಲ್ಲ, ಕುಕನೂರು, ಯಲಬುರ್ಗಾಗಳಲ್ಲಿ ನಾಟಕಗಳನ್ನು ಪ್ರಯೋಗಿಸಿ ಸೈ ಎನಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಸಂಗನಬಸಪ್ಪನವರ ಸಂಗೀತ ಮಾರ್ಗದರ್ಶನ ಇವರಿಗೆ ದೊರೆಯಿತು. ರಾಜಾಸಾಬ ಕಲ್ಲೂರರಂಥ ಹಾರ್ಮೋನಿಯಂ ವಾದಕರಿದ್ದರು. ಖಾನಪ್ಪಗೌಡರಂಥ ತಬಲಾ ಖ್ಯಾತಿಯ ವಿದ್ವಾಂಸರಿದ್ದರು. ಇವರಿಗೆ ಮಾರ್ಗದರ್ಶನ ನೀಡಬಲ್ಲ ಕರೀಂಸಾಬ ಕಲ್ಲೂರು, ಮರಿತಿಮ್ಮಪ್ಪ ಪತ್ತಾರ, ಕಾಳಪ್ಪ ಪತ್ತಾರರಂಥ ತಬಲಾ ವಾದಕರು ಯಲಬುರ್ಗಾ ತಾಲೂಕಿನಲ್ಲಿದ್ದರು. ರೆಹಮಾನವ್ವ ಸಂಗೀತ ವಿದ್ಯೆಯನ್ನು, ರಂಗಭೂಮಿಗೆ ಬೇಕಾಗಿದ್ದ ರಂಗಗೀತೆಗಳ ವೈವಿಧ್ಯಮಯ ರಾಗಗಳು, ಚಾಲುಗಳು ಮುಂತಾದವುಗಳನ್ನು ಕಲಿತುಕೊಂಡಳು. ಹಾಗೆನ್ನುವದಕ್ಕಿಂತ ಅದರ ಸಾಧನೆಯನ್ನು ತುಂಬ ಶ್ರಮಪಟ್ಟು ಮಾಡಿದಳು. ಗರುಡರ ಕಂಪನಿಯಲ್ಲಿ ಸ್ತ್ರೀ

ಪಾತ್ರಗಳನ್ನು ಮಾಡುತ್ತಿದ್ದ ಹಮ್ಮಿಗಿ ನೀಲಕಂಠಪ್ಪ ಇತ್ತಕಡೆಗೆ ಬಂದಾಗಲೆಲ್ಲಾ ಇವರನ್ನು ತಿದ್ದುತ್ತಿದ್ದರು. ತಮ್ಮ ಭಾಗದ ಪ್ರತಿಭಾವಂತ ನಟಿಯೆಂದು ಗುರ್ತಿಸಿದ್ದರು. ಇವರು ರಂಗ ಗೀತೆಗಳನ್ನು ಬಲ್ಲ ಸಂಗೀತಗಾರರಾಗಿದ್ದರು.

ಸಂಗೀತ ಆ ಕಾಲದಲ್ಲಿ ರಂಗ ಭೂಮಿಯನ್ನು ಆಳುತ್ತಿದ್ದಾಗ ಗರುಡರು ಅದರ ಹುಚ್ಚು ಕಡಿಮೆ ಮಾಡುವ, ಅಭಿನಯ ಹಾಗೂ ಸಂಭಾಷಣೆ (ಸಾಹಿತ್ಯಕ್ಕೆ)ಗೆ ಮಹತ್ವ ನೀಡುವ ಒಲವು ಪಡೆದುಕೊಂಡಿದ್ದರು. ಆದರೆ ಅವರು ಸಂಗೀತವನ್ನು ಗೌಣವಾಗಿ ಕಂಡವರಲ್ಲ. ಇವರ ಕಂಪನಿಯಲ್ಲಿ ಹಾರ್ಮೋನಿಯಂ ಮಾಸ್ತರರಾಗಿದ್ದ ಮತ್ತು ಸಂಗೀತ ನಿರ್ದೇಶಕರಾಗಿದ್ದ ಕಿನ್ನಾಳ ಶಿವರುದ್ರಪ್ಪನವರು ಇಟಗಿಯವರು. ಅವರು ಕೂಡ ರೆಹಮಾನವ್ವನಿಗೆ ರಂಗಗೀತೆಗಳನ್ನು ತಿಳುವಳಿಕೆ ಮಾಡಿಕೊಟ್ಟವರಲ್ಲಿ ಪ್ರಮುಖರಾಗಿದ್ದಾರೆ. ಏಣಗಿ ಬಾಳಪ್ಪನವರು ಮುಂದುವರಿಸಿ ಮಾತನಾಡುತ್ತ ''ರೆಹಮಾನವ್ವ ಆ ಕಾಲದ ಪ್ರಮುಖ ರಂಗಗೀತೆಗಳನ್ನು ಹಾಡುವ ಕಲಾವಿದೆಯಾಗಿದ್ದಳು, ಅಂತೆಯೇ ನಾನು ಉತ್ತರ ಕರ್ನಾಟಕದ ರಂಗ ಸಂಗೀತ ವೈಭವದಲ್ಲಿ ಮನಮಿಡಿದ ಗಾಯಕ ನಟಿ ರೆಹಮಾನವ್ವ ಕಲ್ಮನಿ ಕುಕನೂರು ಅಂತಾ ಲೇಖನ ಬರೆದಿದ್ದೇನೆ. ನನಗೆ ರೆಹಮಾನವ್ವನಂಥ ನಟಿಗೆ ನ್ಯಾಯವೊದಗಿಸಬೇಕಾಗಿತ್ತು. ಧುತ್ತರಗಿಯವರು ತಾಯಿ ಕರುಳು ನಾಟಕ ಹಸ್ತ ಪ್ರತಿ ಹಿಡಿದುಕೊಂಡು ಬಂದಾಗ ನಮ್ಮ ಕಂಪನ್ಯಾಗಾಗಲೀ ಇತರ ಕಂಪನ್ಯಾಗಾಗಲಿ ತಾಯಿ ಕರುಳಿನ ಗೌರವ್ವನ ಪಾತ್ರ ಮಾಡಾವ್ರು ಇಲ್ಲವೆಂದಿದ್ದೆ. ಹಾಂಗಾದ್ರ ಈ ನಾಟಕದ ಗತಿಯೇನು ಎಂದಾಗ ನೆನಪಿಗೆ ಬಂದಿದ್ದು ರೆಹಮಾನವ್ವ ಕುಕನೂರು ! ಅವರ್ನ ಹುಡ್ಕೊಂಡು ಹೋಗು ಎಂದು ಹೇಳಿ ಕಳಿಸಿದ್ದೆ. ಧುತ್ತರಗಿಯವರು ತಾಯಿ ಕರುಳು ನಾಟಕದಿಂದ ವ್ಯಾಲೆ ಎದ್ದರು. ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದರು ಅಂಬೂದು ನಿಮಗ ತಿಳಿದೈತೆ'' ಎಂದರು.

ರೆಹಮಾನವ್ವ ಕಲ್ಮನಿ ಹೇಮರೆಡ್ಡಿ ಮಲ್ಲಮ್ಮ ಭಕ್ತಿರಸ ಪ್ರಧಾನ ನಾಟಕದಲ್ಲಿ ಸೌಮ್ಯ ಪಾತ್ರ ನಿರ್ವಹಿಸಿದ್ದಾರೆ. ಕೋಲ ಶಾಂತಪ್ಪನವರ ಬಿ. ಎ. ನಾಟಕ ಅದನ್ನು ಇತ್ತೀಚಿಗೆ ಚಿಂದೋಡಿ ವೀರಪ್ಪ–ಚಿಂದೋಡಿ ಲೀಲಾ ಹಳ್ಳಿ ಹುಡುಗಿ ಅಂತಾ ಆಡುತ್ತಾರೆ. ಆಗಲೇ ರೆಹಮಾನವ್ವ ಆ ಸಾಮಾಜಿಕ ನಾಟಕದಲ್ಲಿ ಅದ್ಭುತ ಅಭಿನಯ ನೀಡಿದ್ದರೆಂಬುದು ಸ್ಮರಣಾರ್ಹ ಸಂಗತಿ! ಇದೇ ಹಳ್ಳಿ ಹುಡುಗಿ ನಾಟಕದ ಚಿಂದೋಡಿ ಲೀಲಾರ ಅಭಿನಯಕ್ಕೆ ರೆಹಮಾನವ್ವನ ಅಭಿನಯ ಆದರ್ಶವಾಗಿತ್ತೆಂಬುದು ಗಮನಾರ್ಹ.

ಹಿರಿಯರಾದ ಬಾಳಪ್ಪನವರನ್ನು ರೆಹಮಾನವ್ವ ಮುಂದೆ ಯಾವ ಯಾವ ಕಂಪನಿಗಳಲ್ಲಿ ಅಭಿನಯಿಸಿದರು? ಎಂದೆ, ಅದಕ್ಕವರು ''ರೆಹಮಾನಮ್ಮನಿಗೆ ತಾನು ಕಲಿಯಬೇಕು, ಕಲಿತದ್ದನ್ನು ಅಭಿನಯಿಸಬೇಕು, ತಾನು ಯಾರಿಗಿಂತ ಅಭಿನಯದಲ್ಲಿ, ರಂಗ ಸಂಗೀತದಲ್ಲಿ ಕಡಿಮೆಯಾಗಬಾರದು ಎಂಬ ಮಹಾತ್ವಾಕಾಂಕ್ಷೆ ಹೊಂದಿದ್ದಳು. ನಮ್ಮ ಕಾಲದಲ್ಲಿ ಗೊಕಾಕ ಶಾರದಾ ಸಂಗೀತ ನಾಟಕ ಮಂಡಳಿ ಅಭಿನಯ ಮತ್ತು ಸಂಗೀತಕ್ಕಾಗಿ ಹೆಸರುವಾಸಿಯಾಗಿತ್ತು, ಅಲ್ಲದೆ ರಂಗ ನಟ ನಟಿಯರಿಗೆ ತರಬೇತಿ ಪಡೆಯುವ ಕಲಾ ಶಾಲೆಯಾಗಿತ್ತು. ರಂಗ ಕಲಾವಿದರನ್ನು ತಯಾರಿಸುವ ಕಾರ್ಖಾನೆಯೆನ್ನುತ್ತಿದ್ದರು. ಆಗ ಆ ಕಂಪನಿ ಸಂಸ್ಥಾಪಕರಾದ ತುಕಾರಾಮ ಬುವಾ ಹೊಸಮನಿಯವರು ಸಂಗೀತಗಾರರಾಗಿದ್ದರು. ಅಭಿನಯ ಬಲ್ಲವರಾಗಿದ್ದರು. ರಂಗ ನಿರ್ದೇಶಕರಾಗಿದ್ದರು. ಅವರ ಮಕ್ಕಳಾದ ಭಗವಂತಪ್ಪ ಹೊಸಮನಿ ಹಾರ್ಮೋನಿಯಂ ವಾದಕರಾಗಿ, ಬಸವರಾಜ ಹೊಸಮನಿಯವರು ನೃತ್ಯಗಾರರಾಗಿ, ಅಭಿನಯಕಾರರಾಗಿ ತುಂಬ ಹೆಸರು ಪಡೆದವರು. ಬಹುತೇಕವಾಗಿ ಅವರ ಕಂಪನಿಯಲ್ಲಿ ಅಭಿನಯದ ತಿಳುವಳಿಕೆ ಪಡೆದು ಅನೇಕರು ಹೊರಬಂದವರಾಗಿದ್ದರು. ಅಂತೆಯೇ ರೆಹಮಾನವ್ವನೂ ಶಾರದಾ. ಸಂಗೀತ ನಾಟಕ ಮಂಡಳಿ ಸೇರಿದಳು. ಅಲ್ಲಿ ಪ್ರವೇಶ ಪಡೆದಳು. ಹಲವಾರು ಪ್ರಮುಖ ನಾಟಕಗಳಲ್ಲಿ ಪ್ರಧಾನ ಭೂಮಿಕೆಯಲ್ಲಿ ನಟಿಸಿದಳು. ಅಲ್ಲಿ ಆಕೆಗೆ ಕಲಿಯುವುದು ಬಹಳವಿತ್ತು. ಆಗಲೇ ಆಕೆಗೆ ಬಾಬಣ್ಣ ಹಾಗೂ ಲಲಿತಾ ಎಂಬ ಇಬ್ಬರು ಮಕ್ಕಳು ಆಗಿದ್ದರು. ಅವರನ್ನು ಬೆನ್ನಿಗೆ ಕಟ್ಟಿಕೊಂಡು ಬಸಿರು ಬಾಣಂತನಗಳನ್ನು ಅನುಭವಿಸುತ್ತ ಕಂಪನಿಯಿಂದ ಕಂಪನಿಗೆ ಸಾಗಿಹೋದಳು. ಅಲ್ಲಿ ವೃತ್ತಿ ಪ್ರೀತಿಯನ್ನು ಕಂಡಳು. ದ್ವೇಷವನ್ನು ಸಹಿಸಿಕೊಂಡಳು. ಗೋಕಾಕ ಶಾರದಾ ಸಂಗೀತ ಮಂಡಳಿಯಲ್ಲಿ ಬಹಳ ದಿವಸ ಇರಲು ಆಗಲಿಲ್ಲ. ಯಾವಾಗಲೂ ಪ್ರಧಾನ ಪಾತ್ರಗಳನ್ನು ಮಾತ್ರ ಮಾಡುತ್ತಿದ್ದ ಇವರು, ಸಣ್ಣ ಪುಟ್ಟ ಪಾತ್ರಗಳನ್ನು ಕಂಪನಿ ನಾಟಕಗಳಲ್ಲಿ ಮಾಡುತ್ತಿರಲಿಲ್ಲ. ಬಸವರಾಜ ಹೊಸಮನಿಯವರ ಇಬ್ಬರು ತಾರಾಪತ್ನಿಯವರಿರುವಾಗ ಇವರಿಗೆ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಲು ಅವಕಾಶ ದೊರಕಲಿಲ್ಲ, ಇದರಿಂದಾಗಿ ಅಲ್ಲಿ ಕಲಿತುಕೊಳ್ಳಬೇಕಾದದ್ದನ್ನು ಕಲಿತುಕೊಂಡು, ಆ ಕಂಪನಿಯಿಂದ ಹೊರನಡೆದಳು.

ರೆಹಮಾನವ್ವ ಅವರು ಏಣ್ಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘದಲ್ಲಿ ಖಾಯಂ ನಟಿಯಾಗಿ ಕೆಲವು ದಿವಸವಿದ್ದರು. ಆಗಿನ ನೆನಪುಗಳನ್ನು ಅವರು ಮಾಡಿಕೊಂಡರು. ''ನಾನಾಗ ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದೆ.

ಹೇಮರೆಡ್ಡಿ ಮಲ್ಲಮ್ಮ ಕಿತ್ತೂರು ಚೆನ್ನಮ್ಮ ಸತ್ಯ ಹರಿಶ್ಚಂದ್ರ ನಾಟಕಗಳ ಮುಖ್ಯ ಸ್ತ್ರೀ ಪಾತ್ರಗಳನ್ನು ನಿರ್ವಹಿಸುತ್ತಿದ್ದೆ. ಇವರು ಕಂಪನಿಯಲ್ಲಿದ್ದಾಗ ಬೇರೆ ಪುರುಷ ಪಾತ್ರಗಳನ್ನು ನಾನು ಮಾಡುತ್ತಿದ್ದೆ. ಕಿತ್ತೂರು ಚೆನ್ನಮ್ಮ, ತಾರಾಮತಿ, ಹೇಮರೆಡ್ಡಿ ಮಲ್ಲಮ್ಮನಾಗಿ ರೆಹಮಾನವ್ವ ಸಮರ್ಥವಾಗಿ ಅಭಿನಯಿಸುತ್ತಿದ್ದಳು. ಇದರಿಂದಾಗಿ ನಾನು ಅನಿವಾರ್ಯವಾಗಿ ಅವರಿಗೆ ನಾಯಕಿ ಪಾತ್ರಗಳನ್ನು ಬಿಟ್ಟು ಕೊಡುತ್ತಿದ್ದೆ. ಇರದಿದ್ದರೆ ಆಕೆ ಒಪ್ಪುತ್ತಿದ್ದಿಲ್ಲ. ಹೋಗಿ ಬಿಡುತ್ತಿದ್ದಳು.'' ರೆಹಮಾನವ್ವ ಏಣ್ಗಿ ಬಾಳಪ್ಪನವರ ಕಂಪನಿಯಿಂದ ನಿರ್ಗಮಿಸಿದ ಮೇಲೆ ಹಂದಿಗನೂರು ಸಿದ್ಧರಾಮಪ್ಪನವರ ವಿಶ್ವ ಕಲಾರಂಜನ ನಾಟ್ಯ ಸಂಘಕ್ಕೆ ಹೋದಳು.

## ಹಂದಿಗನೂರು ಸಿದ್ಧರಾಮಪ್ಪನವರ ಕಂಪನಿಯಲ್ಲಿ

ಹಂದಿಗನೂರು ಸಿದ್ಧರಾಮಪ್ಪನವರ ಅಭಿನಯವನ್ನು ಮೆಚ್ಚಿಕೊಂಡಿದ್ದ ವಿಶ್ವಕವಿ ರವೀಂದ್ರನಾಥ ಠಾಕೂರರು ಶಾಂತಿನಿಕೇತನಕ್ಕೆ ಹೋಗಿದ್ದ ಕನ್ನಡ ಸಾಹಿತಿ ಅ.ನ. ಕೃ. ಅವರನ್ನು ''ಹಂದಿಗನೂರು ಸಿದ್ಧರಾಮಪ್ಪನವರು ಹೇಗಿದ್ದಾರೆ?'' ಎಂದು ಕೇಳಿದ್ದರಂತೆ, ಅಂಥ ಪ್ರಭಾವಶಾಲಿ ನಟರು ಸಿದ್ಧರಾಮಪ್ಪನವರು. ಕಂದಗಲ್ಲ ಹನುಮಂತರಾಯರ ಪರಮಶಿಷ್ಯ ವಸಂತ ಕುಲಕರ್ಣಿಯವರು



ಆಗಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸುತ್ತಿರುವ ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ.

ಅಭಿಪ್ರಾಯಪಡುವಂತೆ ರಾಯರು, ಕೆಲವು ನಟರ ಅಭಿನಯವನ್ನು ಕಂಡು ಅವರಿಗಾಗಿ ಕೆಲವು ಪಾತ್ರಗಳನ್ನು ಸೃಷ್ಟಿಸಿದರು; ತಮ್ಮ ನಾಟಕಗಳಲ್ಲಿ, ಭೀಮ! ಅದೃಶ್ಯೆಪ್ಪ ಮಾನವಿ ಬಾಣಸಿಗ ಭೀಮದಲ್ಲಿ, ಅರ್ಜುನ ! ಡಿ. ದುರ್ಗಾದಾಸ; ಕುರುಕ್ಷೇತ್ರ ನಾಟಕದಲ್ಲಿ, ಅಶ್ವತ್ಥಾಮ ! ಯಲಿವಾಳ ಸಿದ್ದಯ್ಯ ರಕ್ತ ರಾತ್ರಿಯಲ್ಲಿ ಅದರಂತೆ ಶ್ರೀಕೃಷ್ಣ ! ಹಂದಿಗನೂರು ಸಿದ್ಧರಾಮಪ್ಪ; ಅಕ್ಷಯಾಂಬರದಲ್ಲಿ, ಸಿದ್ದರಾಮಪ್ಪನವರು ಅಕ್ಷಯಾಂಬರದಲ್ಲಿ ಕೃಷ್ಣ, ಸತ್ಯ ಹರಿಶ್ಚಂದ್ರದಲ್ಲಿ ಹರಿಶ್ಚಂದ್ರ ದ್ರೌಪದಿ ಸ್ವಯಂವರದಲ್ಲಿ ಕರ್ಣ ಹಾಗೂ ಯಾರ ತಪ್ಪು? ನಾಟಕದಲ್ಲಿ ಮರು ಮದುವೆ ಮಾಡಿಕೊಂಡ ದುಃಖತಪ್ತ ತಂದೆ, ಇಂಥ ಪಾತ್ರಗಳಲ್ಲಿ ಹೆಸರುವಾಸಿದವರು. ಅವರು ಕೊನೆಯಲ್ಲಿ ಚಂದ್ರಹಾಸ ಚಲನಚಿತ್ರದಲ್ಲಿ (೧೯೪೯) ದುಷ್ಟ ಬುದ್ಧಿಯ ಪಾತ್ರವನ್ನೂ ವಹಿಸಿ ಅಮರರಾದರು. ಇಂಥ ಮಹಾನ್ ಕಲಾವಿದನ ನಾಯಕಿಯಾಗಿ ರೆಹಮಾನವ್ವ ಯಾವ ಕೀಳರಿಮೆ ಇಲ್ಲದೆ, ನಿರ್ಭಯವಾಗಿ, ಅಭಿನಯಿಸಿದ್ದಾರೆ. ರೆಹಮಾನವ್ವನದು ಕಲಿಯುವ ಸ್ವಭಾವ. ನಾಟಕದ ತಾಲೀಮು ನಡೆದಾಗ ಹೇಳಿದ್ದನ್ನು ವಿನಯದಿಂದ ಸ್ವೀಕರಿಸುತ್ತಿದ್ದಳು. ಅದಕ್ಕೆ ತನ್ನ ಮೇಲ್ಬುದ್ಧಿ ಹಾಗೂ ಪ್ರತಿಭಾವಂತಿಕೆಯನ್ನು ಬೆರೆಸುತ್ತಿದ್ದಳು. ಅಂತೆಯೇ ಅಂಥ ಮೇರು ನಟನೆದರು ಅಭಿನಯಿಸಿ ಮೆಚ್ಚುಗೆ ಪಡೆದಿದ್ದಾಳೆ.

''ದ್ರೌಪದಿ ಸ್ವಯಂವರ ನಾಟಕದಲ್ಲಿ ಸಿದ್ಧರಾಮಪ್ಪನವರು ದೈವ ದುರಂತ ಕರ್ಣನಾಗಿ ಅಮೋಘ ಅಭಿನಯ ನೀಡುತ್ತಿದ್ದರು. ಸ್ವಯಂವರದ ದೃಶ್ಯ ರಾಜಕುಮಾರಿ ದ್ರೌಪದಿಯಾಗಿ ರೆಹಮಾನವ್ವ. ಕರ್ಣ, ರಾಜಕುಮಾರರ ಆಸನದಿಂದ ಎದ್ದು ಓಲಗದಲ್ಲಿ ಬಿಲ್ಲು ಇದ್ದೆಡೆಗೆ ರಾಜಗಾಂಭೀರ್ಯದಲ್ಲಿ ಬಂದು, ಬಿಲ್ಲು ಕೈಗೆತ್ತಿಕೊಂಡು, ಮೇಲ್ಮುಖವಾಗಿ ಮೀನಿನ ಕಣ್ಣಿಗೆ ಗುರಿಯಿಟ್ಟು ಮತ್ಸ್ಯ ಭೇಧಿಗಾಗಿ ಎಣ್ಣೆಯ ನೆಳಲಲ್ಲಿ ಕಣ್ಣಿಟ್ಟು ಗುರಿ ಹೊಡೆಯಬೇಕು. ಅಷ್ಟರಲ್ಲಿ ದ್ರೌಪದಿ ಕರ್ಣನನ್ನುದ್ದೇಶಿ ''ಹೀನ ಕುಲದ ಕರ್ಣನನ್ನು ನಾನು ವರಿಸಲಾರೆ'' ಎಂದು ಸಿಡಿಲಿನಂತೆ ಆರ್ಭಟಿಸುತ್ತಾಳೆ. ಇದನ್ನು ಕೇಳಿದ ಕರ್ಣ ಜರ್ರನೇ ಜರಿದುಬಿಡುತ್ತಾನೆ. ಝುರ್ಝುರಿತನಾಗುತ್ತಾನೆ. ದೈವವನ್ನು ಹಳಿಯುತ್ತಾನೆ. ನಿಧಾನವಾಗಿ ನಿಶ್ಯಕ್ತನಾಗಿ ಅವಮಾನದಿಂದ, ಮೆಲ್ಲಡಿಯಿಡುತ್ತ ಆಸನದತ್ತ ಬರುತ್ತಾನೆ. ಇಷ್ಟನ್ನು ನಾಲ್ಕೈದು ನಿಮಿಷದವರೆಗೆ ಸಿದ್ಧರಾಮಪ್ಪ ಅಭಿನಯಿಸುತ್ತಿದ್ದರಂತೆ. ಈ ದೃಶ್ಯದಲ್ಲಿ ಸಿದ್ಧರಾಮಪ್ಪನವರು ಹೇಗೆ ಪ್ರೇಕ್ಷಕರ ಗಮನ ಸೆಳೆಯುತ್ತಿದ್ದರೋ ಹಾಗೇ ರೆಹಮಾನವ್ವ ಪ್ರೇಕ್ಷಕರ ಅಭಿಮಾನಕ್ಕೆ ಪಾತ್ರಳಾಗುತ್ತಿದ್ದುದನ್ನು ಅನೇಕ ಹಿರಿಯರು ಹೇಳುತ್ತಾರೆ. ಭಾಗ್ಯನಗರದಲ್ಲಿದ್ದ ಶತಾಯುಷಿಗಳಾದ ಜ್ಞಾನದೇವಪ್ಪ


ಬೆಟಗೇರಿ ಅವರಿಗಿಂತ ಕಿರಿಯರಾದ ಪಂಪಣ್ಣಾ ಶೆಟ್ಟರವರು ಈ ಅಭಿಯನವನ್ನು ಮೆಚ್ಚಿಕೊಂಡು ರಂಗಾಸಕ್ತರಿಗೆ ಆಗಾಗ ಹೇಳುತ್ತಿದ್ದರು. ಪಂಪಣ್ಣನವರು ಈಗಲೂ ಆ ದೃಶ್ಯದ ವರ್ಣನೆ ಮಾಡುತ್ತಲೇ ಇರುತ್ತಾರೆ. 'ಸತ್ಯ ಹರಿಶ್ಚಂದ್ರ'ದಲ್ಲಿ, ಉತ್ತರ ಭೂಪದಲ್ಲಿ, ಅಕ್ಷಯಾಂಬರದಲ್ಲಿ, ಸಂಪೂರ್ಣ ರಾಮಾಯಣದಲ್ಲಿ, ಹೇಮರೆಡ್ಡಿ ಮಲ್ಲಮ್ಮದಲ್ಲಿ, ಯಾರ ತಪ್ಪು? ಸಾಮಾಜಿಕ ನಾಟಕದಲ್ಲಿ ಸಿದ್ಧರಾಮಪ್ಪನವರ ಅಭಿನಯ ಚಾತುರ್ಯಕ್ಕೆ ಸರಿಸಮನಾಗಿ ರೆಹಮಾನವ್ವ ಅಭಿನಯಿಸುತ್ತಿದ್ದುದಾಗಿ ಆಗಿನ ಪ್ರೇಕ್ಷಕರು ಮೆಚ್ಚಿ ಮಾತಾಡುತ್ತಿರುತ್ತಾರೆ.

ಒಮ್ಮೆ ಏಣ್ಗಿ ಬಾಳಪ್ಪನವರ ಕಲಾ ವೈಭವ ನಾಟ್ಯಸಂಘದಲ್ಲಿ ಸ್ತ್ರೀ ಪಾತ್ರಧಾರಿಗಳ ಕೊರತೆಯುಂಟಾಯಿತಂತೆ. ಹಂದಿಗನೂರು ಸಿದ್ಧರಾಮಪ್ಪ ನವರಿಗೆ ಪತ್ರ ಬರೆದರಂತೆ. ನಿಮ್ಮ ಕಂಪನಿಯಿಂದ ಬಂದ ರೆಹಮಾನವ್ವ ಇದ್ದಾಳೆ ಒಂದು ಮಾತು ಕೇಳತ್ತೇನೆ. ಒಪ್ಪಿದರೆ ಕಳಿಸುವೆ ಎಂದು ಉತ್ತರಿಸಿದ್ದರು. ಬಾಳಪ್ಪನವರ ಕಂಪನಿ ಬಿಟ್ಟೀನಿ, ಅವರ ಕಂಪನಿಗೆ ನಾಲ್ಕಾರು ನಾಟಕಗಳ ಮಟ್ಟಿಗೆ ಯಾಕೆ ಹೋಗಬೇಕು? ಎಂದುಕೊಳ್ಳಲಿಲ್ಲ. ಮಕ್ಕಳೊಂದಿಗೆ ಬಂದಳು. ಹಿಂದಿನ ಯಾವ ಸಿಹಿ–ಕಹಿ ಪ್ರಸಂಗಗಳನ್ನು ನೆನಪಿಸಿಕೊಳ್ಳದೆ ನಮ್ಮ ಕಂಪನಿಯಲ್ಲಿ ನನ್ನೊಂದಿಗೆ ಪಾತ್ರ ವಹಿಸಿದಳು. ಹರಿಶ್ಚಂದ್ರ ನಾಟಕದಲ್ಲಿ ನಾನು ಪಾತ್ರ ವಹಿಸುತ್ತಿದ್ದ ತಾರಾಮತಿ ಪಾತ್ರ ವಹಿಸಿದಳು. ರೆಹಮಾನವ್ವ ರಂಗಭೂಮಿಗೆ ತನ್ನನ್ನು ಅರ್ಪಿಸಿಕೊಂಡಿದ್ದಳು. ಆಕೆಗೆ ಅಭಿನಯ ಜೀವದ ಉಸಿರಾಗಿತ್ತು, ತಾನು ಬೇರೆಯವರ ಕಂಪನಿಯಲ್ಲಿರಲಿ, ತನ್ನ ಕಂಪನಿಯಲ್ಲಿರಲಿ, ನಾಟಕ ಕಂಪನಿ ಬಂದ್ ಮಾಡಿದ ಮೇಲೆ ಬೇರೆ ಬೇರೆ ಗ್ರಾಮೀಣ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಲಿ, ಆಕೆಗೆ ಅಭಿನಯ ಮುಖ್ಯವಾಗಿತ್ತು. ಅನಂತರದ್ದು ಸಂಭಾವನೆ, ಹಣ ಮುಂತಾದವು. ಅಂತಲೇ ಆಕೆ ಸಾಯುವವರೆಗೆ ರಂಗಭೂಮಿಯಲ್ಲಿ ಕ್ರಿಯಾಶೀಲಳಾಗಿದ್ದಳು. ತನ್ನ ಮೊಮ್ಮಕ್ಕಳ ಅಭಿನಯದೊಂದಿಗೆ ತಾನೂ ಅಭಿಯಯಿಸುತ್ತಿದ್ದಳು.

## ನಾಟಕ ಕಲೆ-ಅಭಿನಯ

ಸಂಗೀತ ಆಗಿನ ನಾಟಕ ಕಂಪನಿಗಳ ಜೀವಾಳವಾಗಿತ್ತು, ಅಲ್ಲಿ ಅಭಿನಯಕ್ಕೆ ಎರಡನೆಯ ಸ್ಥಾನ. ಆಗಿನ ಪ್ರಸಿದ್ಧ ಸಂಗೀತಗಾರರಾದ ಬಾದೇಶಾಹ ಬೇವೂರು ಮಲ್ಲಸಜ್ಜನಾಗಿ ಅಭಿನಯಿಸುತ್ತಿದ್ದರು. ಒನ್ಸ್‌ಮೋರ್ ಎಂದಾಗ, 'ಭಸ್ಮ ಫಣಿ ತ್ರಿಶೂಲಧರ.... ಗೌರೀ ಶಂಭೋ ಕುಸುಮ ಶರನಾಶ, ವಾಮದೇವ

ಭವಭಯಹರ' ಎಂದು ಹುರುಪಿನಿಂದ ಹಾಡಿ ಬಿಟ್ಟರು. ಎರಡನೆಯ ಬಾರಿ ಹಾಡಿದಾಗ ಮಧ್ಯದಲ್ಲಿ ಛಂದಗಾರಿಕೆಗಾಗಿ ಮಾಲಕಂಸರಾಗದಲ್ಲಿ ಭೈರವಿ ಮಿಶ್ರಮಾಡಿ ಹಾಡುವಾಗ ಮುಂದೆ ಅದರಲ್ಲಿಯೇ ಕೊಂಚ ಲಲಿತ್‌ವನ್ನು ಮಿಶ್ರಗೊಳಿಸಿದರು. ಜನ ಇನ್ನಷ್ಟು ಖುಷಿಪಟ್ಟರು. ಹಾಡು ಮುಗಿಸಿ ಸೈಡ್ ವಿಂಗಿಗೆ ಬಂದಾಗ ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳು ''ಸಂಗೀತ ಗೆದ್ದಿತು ನಾಟಕ ಸತ್ತಿತು'' ಎಂದು ಉದ್ಗಾರ ತೆಗೆದಿದ್ದರು. ಆದ್ದರಿಂದ ರೆಹಮಾನವ್ವ ರಂಗ ಸಂಗೀತ ಚೆನ್ನಾಗಿ ಅಭ್ಯಾಸ ಮಾಡಿಕೊಂಡಿದ್ದರೂ ಅಭಿನಯಕ್ಕೆ, ಪಾತ್ರ ಪೋಷಣೆಗೆ ಮಹತ್ವ ನೀಡುತ್ತಿದ್ದಳು. ತಳಕಲ್ಲ ವೆಂಕರೆಡ್ಡಿಯವರಿಗೆ ರಂಗ ಸಜ್ಜಿಕೆಯನ್ನು ಶ್ರೀಮಂತಗೊಳಿಸಲು ಆರ್ಥಿಕ ಬಂಡವಾಳವಿರಲಿಲ್ಲ, ಆದ್ದರಿಂದ ಅವರು ಪ್ರಥಮವಾಗಿ ಅಭಿನಯಕ್ಕೆ ಮಹತ್ವ ನೀಡುತ್ತಿದ್ದರು. ಅಭಿಯನಕ್ಕೆ ಅನುಕೂಲವಾಗುವ ವೇಷ ಭೂಷಣ (ಕಾಸ್ಟೂಮ್ಸ್) ಮೇಕಪ್ಪುಗಳಿಗೆ, ಸಂಭಾಷಣೆಗಳನ್ನು ಹೇಳುವುದಕ್ಕೆ ಆದ್ಯತೆ ನೀಡುತ್ತಿದ್ದರು. ಆರಂಭದಿಂದಲೇ ರೆಹಮಾನವ್ವನವರಿಗೆ ರಂಗಭೂಮಿ ತರಬೇತಿ ದೊರಕಿದ್ದು ತಳಕಲ್ಲ ವೆಂಕರೆಡ್ಡಿಯವರಿಂದ. ಇದರಿಂದಾಗಿ ಇವರು ಶ್ರೀಮಂತ ರಂಗಪರಿಕರಗಳು ಹಾಗೂ ರಂಗ ಸಜ್ಜಿಕೆಗೆ ಹಣ ವೆಚ್ಚಮಾಡದೆ, ಸುಲಭವಾಗಿ ಸಾಧ್ಯವಾಗುವ ಅಭಿನಯಕ್ಕೆ ಒತ್ತು ಕೊಡುತ್ತಿದ್ದರು.



ಕುಕನೂರಿನ ಶ್ರೀ ಗವಿಸಿದ್ಧೇಶ್ವರ ಹೈಸ್ಕೂಲಿನ ಬೆಳ್ಳಿಹಬ್ಬದಲ್ಲಿ ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿಯವರಿಗೆ ಆಗಿನ ಕೊಪ್ಪಳ ಶಾಸಕ ಎಂ.ಬಿ.ದಿವಟರರಿಂದ ಸನ್ಮಾನ

ವೇಷ ಭೂಷಣ, ಮೇಕಪ್ಪುಗಳಿಗೆ ಆದ್ಯತೆ ನೀಡುತ್ತಿದ್ದರು. ಅಂತೆಯೇ ಅವರು ಯಾವ ಭಯ, ಅಳುಕು, ಹಿಂಜರಿತವಿಲ್ಲದೆ ಅಭಿನಯಿಸುತ್ತಿದ್ದರು. ಅವರಿಗೆ ಹೆದರಿಕೆಯೆಂಬುದು ಇರಲಿಲ್ಲ, ನಾಟಕದ ಪ್ರ್ಯಾಕ್ಟೀಸು ನಡೆದಿರಲಿ, ನಾಟಕ ನಡೆದಿರಲಿ, ತನ್ನ ಪಾತ್ರದ ಶಕ್ತಿಯನ್ನು ಪ್ರದರ್ಶಿಸುತ್ತಿದ್ದಳು. ಒಮ್ಮೆ ತಳಕಲ್ಲ ವೆಂಕರೆಡ್ಡಿ ಕಂಪನಿ ಹೇಮರೆಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನಗೊಳ್ಳುತ್ತಿತ್ತು. ನಾಗಮ್ಮನ ಪಾತ್ರಧಾರಿ ಹನುಮಂತಪ್ಪ ದೇವರಮನಿ ಹೂವು ಹೂವಿನ ಪತ್ತಲ ಉಟ್ಟುಕೊಂಡು ನಿಂತಿದ್ದ. ವೆಂಕರೆಡ್ಡಿ ಗ್ರೀನ್ ರೂಮಿಗೆ ಬಂದರು, ನೋಡಿದರು. ''ಏನಲೆ ರಡ್ಡೇರ ಹೆಣ್ಣು ಮಕ್ಕಳು ಹೂವಿನ ಪತ್ಲನ ಮಲ್ಲಮನ ಕಾಲದಲ್ಲಿ ಉಡುತ್ತಿದ್ದರೇನು?'' ಎಂದವರೇ ಚಪ್ಲಿ ಕಾಲಲ್ಲಿ ಆತನನ್ನು ಒದ್ದರಂತೆ. ವೇಷ ಭೂಷಣಕ್ಕೆ ವೆಂಕರೆಡ್ಡಿ ಮಹತ್ವ ನೀಡುತ್ತಿದ್ದುದನ್ನು, ಇಂಥ ಪ್ರಸಂಗಗಳಿಂದ ರೆಹಮಾನವ್ವ ಕಣ್ಣಾರೆ ಕಂಡುಕೊಂಡಿದ್ದಳು.

ಅಭಿನಯವೆಂಬುದು ನವನವೀನವಾದದ್ದು. ಅದು ಅಭಿವ್ಯಕ್ತಿಗೊಳ್ಳುವುದು ನಟನ ಮೂಲಕ. ಸೃಜನ ಶೀಲನಾದ ನಟ ಅದನ್ನು ಸಹಜವಾಗಿ ಹೊರಗೆಡಹುತ್ತಾನೆಂದಾಗ ಬಾಳಪ್ಪನವರು; ಒಳ್ಳೆಯ ನೆನಪು ಮಾಡಿದಿರಿ. ಅಭಿನಯಕ್ಕೆ ಇತಿ ಮಿತಿ ಇಲ್ಲ. ಹಿಂದೆ ದೊಡ್ಡ ನಟಿ ನಟಿಯರು ಒಮ್ಮೆ ಮಾಡಿದಂತೆ ಮಾಡುತ್ತಿರಲಿಲ್ಲ, ಅದಕ್ಕಾಗಿ ಆ ದೃಶ್ಯಗಳನ್ನು ನೋಡಲು ಇವತ್ತು ಆ ನಟಿ ನಟಿ ಹೇಗೆ ಮಾಡುತ್ತಾಳೆ ನೋಡಬೇಕೆಂದು ಮತ್ತೆ ಮತ್ತೆ ನಾಟಕ ನೋಡಲು ಹೋಗುತ್ತಿದ್ದರು. ಗರುಡರ ಕಂಪನಿ ಬೆಂಗಳೂರಿನಲ್ಲಿ ಶ್ರೀರಾಮ ಪಾದುಕಾ ಪಟ್ಟಾಭಿಷೇಕ ನಾಟಕ ಪ್ರದರ್ಶನ ನಿತ್ಯ ನಡೆಸಿತ್ತು, ಆ ಕಾಲದಲ್ಲಿ ಬೆಂಗಳೂರಿನ ಗಣ್ಯ ನಾಗರಿಕರು, ಗಮಕಿಗಳು ಅಲ್ಲದೆ ಶೈವಾಗಮಗಳಲ್ಲಿ ಘನ ಪಾಂಡಿತ್ಯ ಪಡೆದಿದ್ದ ಟಿ. ಎನ್. ಮಲ್ಲಪ್ಪನವರು ಈ ನಾಟಕವನ್ನು ನೋಡಲು ನಿತ್ಯ ಹೋಗುತ್ತಿದ್ದರು. ಬಿಡುವಿನ ಅಂತರದೃಶ್ಯದ ಸಮಯದಲ್ಲಿ ನೇಪಥ್ಯದಲ್ಲಿಯೇ ತಮ್ಮೊಡನಿರುತ್ತಿದ್ದ ಮಲ್ಲಪ್ಪನವರನ್ನು ಪ್ರತಿದಿನವೂ ಗರುಡರು ರಾಮ ವಿಯೋಗದ ದೃಶ್ಯದ ಮುನ್ನ ''ಈಗ ಹೋಗಿ, ಪ್ರೇಕ್ಷಕ ವರ್ಗದಲ್ಲಿ ಕುಳಿತುಕೊಳ್ಳಿ, ನಿಮ್ಮನ್ನು ಈ ದಿನವೂ ಅಳಿಸುತ್ತೇನೆ ನೋಡಿ'' ಎಂದು ಹೇಳಿ ಕಳಿಸುತ್ತಿದ್ದರಂತೆ. ''ನೆನ್ನೆ ನೋಡಿದ ದೃಶ್ಯ ತಾನೇ! ಇಂದು ಏನು ಮಾಡಿದರೂ ಅಳುವುದಿಲ್ಲ'' ಎಂದು ಹೇಳಿ ಮಲ್ಲಪ್ಪನವರು ಹಟ ತೊಟ್ಟು, ಮನಸ್ಸನ್ನು ಕಲ್ಲು ಮಾಡಿಕೊಂಡು ತುಂಬಿದ ಪ್ರೇಕ್ಷಕ ವರ್ಗದಲ್ಲಿ ವಾದ್ಯಗಾರರ ಪಕ್ಕದಲ್ಲಿ ಕುಳ್ಳಿರುತ್ತಿದ್ದರಂತೆ. ಆದರೆ ವಿಧಿಯ ಕೈಗೊಂಬೆಯಾಗಿ, ತನ್ನವಳ ಮೂರ್ಖ ಹಟಕ್ಕೆ

ಬಲಿಯಾಗಿ ವೈಮನಸ್ಸನ್ನೆಲ್ಲ ಪುತ್ರ ವ್ಯಾಮೋಹ ಆವರಿಸಿ, ವಿರಹದ ಅಗ್ನಿ ಜ್ವಾಲೆಯಲ್ಲಿ ಬೇಯುತ್ತ ಚಡಪಡಿಸಿದ ಮುದಿ ದಶರಥನ ಆ ಪಾತ್ರವನ್ನು ದಿನದಿನವೂ ಹತ್ತು ಹೊಸ ಬಗೆಗಳಲ್ಲಿ ಚಿತ್ರಿಸಿದ ರೀತಿ–ಅವರಲ್ಲಿ ದುಃಖ ಉಮ್ಮಳಿಸುವಂತೆ ಮಾಡಿ ಕಣ್ಣೀರ ಕಾಣಿಕೆ ಪಡೆದುಕೊಳ್ಳುತ್ತಿದ್ದರಂತೆ. ದಿನವೂ ಗರುಡರೊಂದಿಗೆ ಟಿ.ಎನ್. ಮಲ್ಲಪ್ಪನವರ ಹಟ; ದಿನವೂ ಅವರೆದರು ಸೋಲು. (ಕರ್ನಾಟಕ ರಂಗಭೂಮಿ ಡಾ. ಎಚ್. ಕೆ. ರಂಗನಾಥ ಪು ೨೨೬) ಬಾಳಪ್ಪನವರೊಡನೆ ಚರ್ಚೆ ಮತ್ತೆ ಅಭಿನಯದ ಪ್ರಾಮುಖ್ಯತೆಯಕಡೆಗೆ ತಿರುವಿತು. ''ಕನ್ನಡ ವೃತ್ತಿ ರಂಗವನ್ನು ವರದಾಚಾರ್ಯರು ಹತ್ತು ರೀತಿಯಲ್ಲಿ ಪರಿಷ್ಕರಿಸಿದರೆನ್ನಬೇಕು. ಮೊದಲನೆಯದೆಂದರೆ ಅಭಿನಯಕ್ಕೆ ಅವರಿತ್ತ ಮಾನ್ಯತೆ. ತಮ್ಮ ಮಾರ್ಗದರ್ಶನದಿಂದ ಅಭಿನಯ ಕಲೆಯ ವೈಭವವನ್ನು ಮೆರೆದು, ಸಮಕಾಲೀನ ಕಲಾವಿದರಿಗೆ ಸ್ಫೂರ್ತಿಯನ್ನಿತ್ತವರು ''....ಈ ಋಷಿ ಕನ್ಯೆ ನನಗೆ ಮೋಸ ಮಾಡುತ್ತಿರುವಳೆ'' ಎಂದು ದುಷ್ಯಂತ ತೊಳಲಾಡುತ್ತಾನೆ. ಈ ದೃಶ್ಯ ಅಭಿನಯಿಸುವಾಗ ವರದಾಚಾರ್ಯರು ಅಸತ್ಯ, ದುರಾಚಾರಗಳಿಗೆ ಹೇಸುವ ಆರ್ಯನೊಬ್ಬನ ಮನಸ್ಸಿನ ಒಳತೋಟೆಯನ್ನು ಅನ್ಯಾದೃಶ್ಯವಾಗಿ ಚಿತ್ರಿಸುತ್ತಿದ್ದರು. ಶಕುಂತಲೆಯ ದುರಂತ ಸ್ಥಿತಿಗೆ ಮರುಗುವ ಪ್ರೇಕ್ಷಕನೂ, ದುಷ್ಯಂತನ ಕಳವಳ ಕಂಡು, 'ಅಯ್ಯೋ' ಎಂದು ಅನುಕಂಪ ವ್ಯಕ್ತ ಮಾಡುತ್ತಿದ್ದ. '......ತಾನು ಅಪರಾಧಿ. ನಿರಪರಾಧಿಯೊಬ್ಬಳ ಸಮಸ್ತಸುಖ ಶಾಂತಿಯನ್ನು ಭಗ್ನಗೊಳಿಸಿದ್ದೇನೆ. ಪಶ್ಚಾತ್ತಾಪದಗ್ಧನಾದ ದೊರೆ ಕ್ಷಣಮಾತ್ರದಲ್ಲಿ ಪುಟವಿಟ್ಟ ಚಿನ್ನದಂತಾಗುತ್ತಾನೆ.... ಈ ದೃಶ್ಯದಲ್ಲಿ ದುಷ್ಯಂತನ ಅಹಮ್ಮಿಕೆಯನ್ನು ತೋರುವಾಗ, ವರದಾಚಾರ್ಯರು ಅಭಿನಯ ಪೂರ್ಣಸಿದ್ಧಿಯನ್ನು ಪಡೆಯುತ್ತಿತ್ತು, (ಅ.ನ.ಕೃ. ನಾಟಕಶಿರೋಮಣಿ ಎ.ವಿ. ವರದಾಚಾರ್ಯರು ಉಲ್ಲೇಖಿತ ಅದೇ ಪು ೨೨೩).

ಕಾಸ್ಟ್ಯೂಮ್ಸ್ (ವೇಷಭೂಷಣ) ಮತ್ತು ಮೇಕಪ್‌ಗಳ ಬಗ್ಗೆ ಚರ್ಚೆ ಬಂದಾಗ ತಳಕಲ್ಲ ವೆಂಕರೆಡ್ಡಿ ಕಂಪನಿಯವರ ಹೇಮರೆಡ್ಡಿ ಮಲ್ಲಮ್ಮ ಹಾಕಿಕೊಟ್ಟ ಮಾದರಿಯೇ ಇಂದೂ ಇದೆ. ಮಲ್ಲಮ್ಮನನ್ನು ಗಂಡನ ಮನೆಗೆ ಬೀಳ್ಕೊಡುವಾಗ ಮಲ್ಲಮ್ಮ ಜರತಾರಿ ಪೀತಾಂಬರ, ಮೂಗಿನಲ್ಲಿ ಮುತ್ತೈದೆ ನತ್ತು ಇಟ್ಟಿರುತ್ತಾಳೆ. ಬೀಸುತ್ತ ಹಾಡುವುದು, ವೇಮಣ್ಣ ಭರಮರೆಡ್ಡಿ, ತಂದೆ ಹೇಮರೆಡ್ಡಿ, ಮಲ್ಲಮ್ಮ ನಾಗಮ್ಮ ಅತ್ತೆ ಪದ್ಮಮ್ಮ ಇವರ ವೇಷಭೂಷಣ ಅವರದೇ ಹಾಕಿ ಕೊಟ್ಟ ಮಾದರಿಯಲ್ಲಿಯೇ ಅತ್ತೆ ನೆಗೆಣ್ಣಿಯರು ಗಂಡ ಹುಚ್ಚ ಭರಮರೆಡ್ಡಿಗೆ ತಲೆ ಕೆಡಿಸಿ, ಆತನಿಂದಲೇ ಕಾಡಿಗಟ್ಟಿಸಿ ಕಾಡಿನಲ್ಲಿದ್ದು ದನ ಕಾಯಲು ಕಳಿಸುತ್ತಾರೆ. ಆ ದೃಶ್ಯದಲ್ಲಿ

ಮಲ್ಲಮ್ಮ ಹಳೆಯ ಹರುಕು ಸೀರೆಗಳನ್ನುಟ್ಟಿರುತ್ತಾಳೆ. ಭರಮರೆಡ್ಡಿಯದಂತೂ ಅರೆ ಹುಚ್ಚನ ವೇಷ ಭೂಷಣ. ಗುಬ್ಬಿ ವೀರಣ್ಣನವರು ತಳಕಲ್ಲ ವೆಂಕರೆಡ್ಡಿಯವರು. ಈ ಪಾತ್ರ ವಹಿಸಿ ಹೆಸರಾಗಿದ್ದಾರೆ. ಕಾಮೆಡಿಯನ್ನರಾಗಿದ್ದಾರೆ. ಹರೆಯದಲ್ಲಿ ವೇಮಣ್ಣನ ಶೃಂಗಾರದ ವೇಷ ಭೂಷಣ, ಅತ್ತಿಗೆ ಮಲ್ಲಮ್ಮನಿಂದ ವೈರಾಗ್ಯ ತಾಳಿ ಅವಧೂತ ಹುಚ್ಚನಾಗಿ ವೇಮನವಾಗುವ ವೇಷ ಭೂಷಣಗಳು ಅಂದಿನವೇ ಆಗಿವೆ. ಸಿದ್ಧ ಮಾದರಿಗಳಾಗಿವೆ. ಆಧುನಿಕರು ಇವನ್ನು ಬದಲಿಸಲಾಗಿಲ್ಲ.

ಈ ಎಲ್ಲದರ ಕಲ್ಪನೆ ರೆಹಮಾನವ್ವ ಕಲ್ಮನಿಯವರಿಗೆ ಚೆನ್ನಾಗಿ ಇತ್ತು. ಅವರ ಕಂಪನಿ ಬಡ ಕಂಪನಿ ಆಗಿತ್ತು. ಶ್ರೀಮಂತ ಪರಿಕರಿಗಳು, ರಂಗ ಸಜ್ಜಿಕೆ ಇರಲಿಲ್ಲ. ಹಿತಮಿತವಾದ ಮೇಕಪ್ಪು, ವೇಷ ಭೂಷಣ, ಪಾತ್ರಗಳ ಅಂತಸ್ತು ಅಧಿಕಾರ, ಸನ್ನಿವೇಶ, ಸಂದರ್ಭಕ್ಕೆ ತಕ್ಕಂತೆ ಮಾತುಗಳ (ಸಂಭಾಷಣೆ) ಏರಿಳಿತ, ಹಾಸ್ಯ ಪಾತ್ರಗಳು ಬಳಸುವ ಗ್ರಾಮ್ಯ, ಆಡು ನುಡಿಗಳು, ಇನ್ನುಳಿದ ಪಾತ್ರಗಳಾಡುವ ಸಂಭಾಷಣೆ, ಸ್ಪಷ್ಟ ಉಚ್ಚಾರಣೆಯಿಂದಿರುತ್ತಿದ್ದವು. ಆಕೆಯನ್ನು ಅಲ್ಪ ಸಂಖ್ಯಾತ ಮುಸ್ಲಿಂ ಮಹಿಳೆಯೆಂದು ಯಾರನ್ನಬೇಕು? ಉರ್ದು ಪ್ರದೇಶದಿಂದ ಬಂದ ರೆಹಮಾನವ್ವ ಉರ್ದು ಮಾತನಾಡುತ್ತಿದ್ದಳು. ಚೆನ್ನಾಗಿಯೇ ಮಾತನಾಡುತ್ತಿದ್ದಳು. ಆದರೆ ಆಕೆಯ ಕನ್ನಡದಲ್ಲಿ ಉರ್ದುವಿನ ಛಾಯೆ, ಮುಸ್ಲಿಮರ ಟೋನ್ (Tone) ಇರುತ್ತಿರಲಿಲ್ಲ. ಇದೇ ಇವರ ಭಾಷಾ ಶುದ್ಧತೆಯ ನೈಪುಣ್ಯವಾಗಿತ್ತು.

ರೆಹಮಾನವ್ವ ಆರಂಭದಲ್ಲಿ ಅಭಿನಯಿಸಿದ್ದು ಕಿತ್ತೂರು ಚೆನ್ನಮ್ಮ ನಾಟಕದಲ್ಲಿ. ಅದು ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು ಬರೆದ ನಾಟಕ. ಅವರದು ಬಹಳ ಅಲಂಕಾರಿಕ ಶೈಲಿ; ಆ ವೇಶದ ಶೈಲಿ. ಕಿತ್ತೂರು ಚೆನ್ನಮ್ಮ , ಗುರುಸಿದ್ಧಪ್ಪ ರಾಯಣ್ಣ, ರಾಣಿ ರುದ್ರಮ್ಮ ಇವರ ವೀರಾವೇಶದ ಮಾತುಗಳನ್ನು ಕೇಳುವುದೇ ಕರ್ಣಾನಂದ. ರೆಹಮಾನಮ್ಮನು ಹೇಳುವ ಚೆನ್ನಮ್ಮನ ಮಾತುಗಳು ಮೈಕ್, ಲೌಡ್ ಸ್ಪೀಕರ್ ಗಳಿಲ್ಲದ ಆ ಕಾಲದಲ್ಲಿ ಪ್ರೇಕ್ಷಕರ ಎದೆಗುಂಡಿಗೆಗೆ ಸಿಡಿಲಿನಂತೆ ಬಡಿಯುತ್ತಿದ್ದವು. ಆಕೆ ಕತ್ತಿ ವರಸೆ ಮಾಡುತ್ತ ಯುದ್ಧದ ದೃಶ್ಯದಲ್ಲಿ ಕಾಣಿಸಿಕೊಂಡರೆ ನಿದ್ದೆಗಣ್ಣಿನಲ್ಲಿದ್ದ ಪ್ರೇಕ್ಷಕ ಎಚ್ಚರಗೊಳ್ಳುತ್ತಿದ್ದನು. ಹೆಣ್ಣು ಮಕ್ಕಳು ಅಚ್ಚರಿಗೊಳ್ಳುತ್ತಿದ್ದರು. ಎಲ್ಲ ವರ್ಗದ ಪ್ರೇಕ್ಷಕರ ಮೇಲೂ ನಾಟಕ ಪರಿಣಾಮ ಬೀರುತ್ತಿತ್ತು. ರಂಗಸಜ್ಜಿಕೆ ಶ್ರೀಮಂತಗೊಳಿಸಲು ಅವರಲ್ಲಿ ಹಣದ ಬಂಡವಾಳವಿರಲಿಲ್ಲ. ತಾವು ತೊಡುವ ಬಟ್ಟೆ ಬರೆ, ಧರಿಸುವ ವಸ್ತ್ರ, ಒಡವೆ, ಮುದುಕ ಹಿಡಿದ ಬೆತ್ತ, ಮೇಕಪ್ಪುಗಳಿಂದಲೇ ನಾಟಕ ಪ್ರದರ್ಶನ ಕಳೆಗಟ್ಟಬೇಕು. ಪ್ರೇಕ್ಷಕರನ್ನು ಆಕರ್ಷಿಸಬೇಕು. ಯರಾಶಿ ಭರಮಪ್ಪನವರ ಶ್ರೀ

ವಾಣಿ ವಿಲಾಸ ಸಂಗೀತ ನಾಟಕ ಮಂಡಳಿಯವರಂತೆ ಆ ಕಾಲಕ್ಕೆ ಲಕ್ಷಾಂತರ ರೂಪಾಯಿ ಹಣ ಸುರಿದು ಆರಂಭಿಸಿದ ನಾಟಕ ಕಂಪನಿಯಾಗಿರಲಿಲ್ಲ. ಉತ್ತರ ಕರ್ನಾಟಕದಲ್ಲಿ ಶಿರಹಟ್ಟಿ ವೆಂಕೋಬರಾಯರು, ಯರಾಶಿ ಭರಮಪ್ಪನವರು, ಸುಳ್ಳದ ದೇಸಾಯರು ಮುಂತಾದವರು ಮಾತ್ರ ಹಳೇ ಮೈಸೂರಿನತ್ತ ಗುಬ್ಬಿ ವೀರಣ್ಣನವರು ಮುಂತಾದವರು ರಂಗಸಜ್ಜಿಕೆಗೆ ಹಣ ಸುರುವಿ ಪ್ರೇಕ್ಷಕರಿಗೆ ರಂಜನೆಯನ್ನುಂಟುಮಾಡುತ್ತಿದ್ದರು. ಲಂಕಾದಹನದಲ್ಲಿ ಹನುಮಂತ ಸಮುದ್ರ ಲಂಘನ ಮಾಡುವುದು, ರಾವಣನೆದರು ತನ್ನ ಬಾಲವನ್ನು ಸಿಂಹಾಸನದಂತೆ ಸುತ್ತಿಕೊಂಡು ಮೇಲೆ ಆಸೀನನಾಗುವುದು, ಯುದ್ಧದ ದೃಶ್ಯಗಳಲ್ಲಿ ರಥಗಳನ್ನು, ಜೀವಂತ ಆನೆ ಕುದುರೆಗಳನ್ನು ತರುವುದು ಇವೆಲ್ಲ ನಡೆದಿರುತ್ತಿದ್ದವು.

ನಮ್ಮ ಹಿರಿಯ ನಾಟಕ ಕಂಪನಿಗಳ ಮಾಲೀಕರು ತುಂಬ ಜಾಣರಿದ್ದರು. ನಾಟಕ ಕಂಪನಿ ಸಾಮಾನು ಸರಾಂಜಾಮು ಸಾಗಿಸಲು ಅನುಕೂಲವಾಗುವಂತೆ ನೋಡಿಕೊಳ್ಳುತ್ತಿದ್ದರು. ಶಿರಹಟ್ಟಿ ವೆಂಕೋಬರಾಯರ ಸರಂಜಾಮು ಸಾಗಿಸಲು ೩೯–೪೦ ಎತ್ತಿನ ಬಂಡಿಗಳು ಬೇಕಾಗುತ್ತಿದ್ದವೆಂದು ಗರುಡ ಸದಾಶಿವರಾಯರು ಬರೆಯುತ್ತಾರೆ. ಈಗಿನಂತೆ ಲಾರಿಗಳಿರಲಿಲ್ಲ. ಒಳ್ಳೆಯ ರಸ್ತೆಗಳಿರಲಿಲ್ಲ. ನಾಟಕ ಕಂಪನಿ, ಸರ್ಕಸ್ ಕಂಪನಿಯಾಗಬಾರದು. ಆನೆ, ಕುದುರೆ, ಮಂಗಗಳನ್ನು ಸಾಕಿಕೊಂಡು ಎಂದು ಕೂಡ ಗರುಡರು ಹೇಳಿದ್ದಾರೆ. ರೆಹಮಾನವ್ವನವರು ಕೂಡ ತಮ್ಮ ನಾಟಕಗಳು ನಡೆಯುವಷ್ಟು ೩–೪ ಪರದೆಗಳು, ಮುಂದಿನ ಡ್ರಾಪ್‌ಗಳಿದ್ದರೆ ಸಾಕು. ಇವರು ಆರಂಭದಲ್ಲಿ ಪ್ರಯೋಗಿಸುತ್ತಿದ್ದ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳ ಮೇಕಪ್ಪಿಗೆ ವೇಷ ಭೂಷಣಗಳ ಅಗತ್ಯವಿತ್ತು. ಪುರುಷರೇ ಸ್ತ್ರೀ ಪಾತ್ರಗಳನ್ನು ಮಾಡಬೇಕಾಗಿದ್ದರಿಂದ ಸ್ತ್ರೀ ಪಾತ್ರಗಳಿಗೆ ಟೋಪನ್ನು, ವಿಗ್ ಬಳಸಿಕೊಳ್ಳುತ್ತಿದ್ದರು.

## ನಾಟಕಕಾರ ಧುತ್ತರಗಿಯವರಿಗೆ ಆತ್ಮ ವಿಶ್ವಾಸ ಮೂಡಿಸಿದ ರೆಹಮಾನವ್ವ

೧೯೭೦ಳನೆಯ ಇಸ್ವಿಯಿರಬೇಕು. ಕೊಪ್ಪಳ ಜಾತ್ರೆಗೆ ಖ್ಯಾತ ನಾಟಕಕಾರ ಪಿ.ಬಿ. ಧುತ್ತರಗಿಯವರು ತಮ್ಮ ಪತ್ನಿ ಸರೋಜಮ್ಮನವರೊಂದಿಗೆ ನಾಟಕ ಕಂಪನಿ ತಂದಿದ್ದರು. ಕಿತ್ತೂರು ಚೆನ್ನಮ್ಮ ನಾಟಕ ತುಂಬಿದ ಪ್ರೇಕ್ಷಕರಿಂದ ಜಯಭೇರಿ ಬಾರಿಸುತ್ತಿತ್ತು. ಸರೋಜಮ್ಮ ಕಿತ್ತೂರು ಚೆನ್ನಮ್ಮನಾಗಿ, ಸಿನೆಮಾ ರಂಗದಲ್ಲಿ ಆಗ ಪ್ರಸಿದ್ಧರಾಗಿದ್ದ ಸುದರ್ಶನ ರಾಯಣ್ಣನಾಗಿ, ಪತ್ನಿ ಶೈಲಶ್ರೀ ರಾಣಿಯಾಗಿ, ಅಭಿನಯಿಸುತ್ತಿದ್ದರು. ನಾಟಕ ಮುಕ್ತಾಯಗೊಳ್ಳುವಮುನ್ನ ಅವರ ಸಿನಿಮಾ

ಹಾಡುಗಳಿಗೆ ಜನ ಮುಗಿ ಬೀಳುತ್ತಿದ್ದರು. ನಾವೆಲ್ಲ ಗೆಳೆಯರು ನಾಲ್ಕಾರು ಸಲ ಕಿತ್ತೂರು ಚೆನ್ನಮ್ಮ ನಾಟಕ ನೋಡಿದ ಮೇಲೆ, ಸಮಾನ ಮನಸ್ಕರು ಸೇರುತ್ತಿದ್ದ ಕರ್ನಾಟಕ ಸಂಘದ ಒಂದು ರವಿವಾರದ ಸಭೆಗೆ ನಾಟಕಕಾರ ಧುತ್ತರಗಿಯವರನ್ನು ಆಹ್ವಾನಿಸಿದೆವು. ಕಾರ್ಯದರ್ಶಿಯಾಗಿದ್ದ ಕವಿ ಗವಿಸಿದ್ಧ ಎನ್. ಬಳ್ಳಾರಿಯವರು ಕವಿಗಳನ್ನು ಕರೆದುಕೊಂಡು ಬಂದರು. ಸಂಜೆ ೫ ಗಂಟೆಯಾಗಿದ್ದರೂ, ಫೆಬ್ರುವರಿ ಮೊದಲವಾರದ ಕೊಪ್ಪಳದ ಸುಡುವ ಸೂರ್ಯನ ಪ್ರಖರ ಕಿರಣಗಳಿಗೆ ರಾತ್ರಿಯೆಲ್ಲ ನಿದ್ದೆಗೆಟ್ಟಿದ್ದರಿಂದ ಚಿಂವ್‌ಗಣ್ಣು ಮಾಡಿಕೊಂಡು ಬಂದರು. ಅದಾಗಲೇ ತಾಯಿ ಕರುಳು, ಸಹೋದರಿ, ಸಂಪತ್ತಿಗೆ ಸವಾಲ್, ಮಲ ಮಗಳು, ಚಿಕ್ಕ ಸೊಸೆ, ಅತ್ತೆಗೆ ತಕ್ಕ ಸೊಸೆ, ಮುಂತಾದ ಮೂವತ್ತು ನಾಟಕಗಳನ್ನು ಬರೆದು, ಪ್ರಯೋಗಿಸಿ ಪ್ರಸಿದ್ಧರಾಗಿದ್ದರು. ಅವರು ಮಾತಿಗೆ ತೊಡಗಿ, ತಾವು ನಾಟಕಕಾರರಾಗಿ ಬೆಳೆದು ಬಂದ ಬಗೆಯನ್ನು ರಸವತ್ತಾಗಿ ಸರಳನುಡಿಗಳಲ್ಲಿ ಹೇಳುತ್ತ ದೇವಿ ಬನಶಂಕರಿಯ ಕೃಪೆ, ಸಿದ್ಧನಕೊಳ್ಳದ ಅಜ್ಜನ ಆಶೀರ್ವಾದ, ಸರೋಜಮ್ಮ ಧುತ್ತರಗಿಯವರ ಅಭಿನಯ ಹಾಗೂ ಕಠಿಣ ಪರಿಶ್ರಮ, ಹಿತೈಷಿಗಳ ಬೆಂಬಲ ಹಾಗೂ ಪ್ರೇಕ್ಷಕರ ಪ್ರೋತ್ಸಾಹವನ್ನು ನೆನೆಯುತ್ತ "ನಾನು ಇಷ್ಟೊಂದು ಪ್ರಸಿದ್ಧಿಗೆ ಬರಲು, ನಾನೊಬ್ಬ ನಾಟಕಕಾರನೆಂದು ನನ್ನಲ್ಲಿ ನನಗೆ ಆತ್ಮ ವಿಶ್ವಾಸ ಮೂಡಲು, ನಿಮ್ಮ ಮೊಗಲಾಯಿ ಭಾಗವೇ ಕಾರಣವಾಗಿದೆ" ಎಂದರು. ನಮಗೆಲ್ಲ ತುಂಬ ಕುತೂಹಲ ಉಂಟಾಯಿತು. ಆ ವಿಷಯವನ್ನು ಮರೆಮಾಚದೆ, ಬಿಚ್ಚು ಮನಸಿನಿಂದ ಸವಿಸ್ತಾರವಾಗಿ ಹೇಳುವ ಮುನ್ನ, ಸಭೆಯಿಂದ ಹೊರಗೆ ಎದ್ದು ಹೋಗುತ್ತ 'ಇದೊಂದು ನನಗೆ ಕೆಟ್ಟ ಚಟ' ವೆಂದು ಹೇಳಿ, ಒಂದು ಸಿಗರೇಟ ಸೇದಿ ಒಳಗೆ ಬಂದು ಕುಳಿತು ಮಾತು ಮುಂದುವರಿಸಿದರು.

ನಾನೀಗ (೧೯೭೪) ಮೂವತ್ತಕ್ಕೂ ಮೀರಿ ನಾಟಕಗಳನ್ನು ಬರೆದಿದ್ದು ಹಲವಾರು ಪ್ರಖ್ಯಾತ ಕಂಪನಿಗಳು ಪ್ರಯೋಗಿಸುತ್ತಿವೆ; ಕವಿ ಕಾಣಿಕೆಯನ್ನು ಕೊಡುತ್ತಿವೆ. ಎಲ್ಲ ಕಡೆಗೆ ಒಳ್ಳೆಯ ನಾಟಕಕಾರನೆಂದು ಹೆಸರಿದೆ. ನಾನು ನಾಟಕಕಾರನೆಂದು ಆತ್ಮ ವಿಶ್ವಾಸ ಮೂಡಿಸಿದ್ದು ನನ್ನ ಹನ್ನೊಂದನೆಯ ನಾಟಕ 'ತಾಯಿ ಕರುಳು'. ಈ ನಾಟಕವನ್ನು ತಮ್ಮ ಕಂಪನಿಗೆ ತೆಗೆದುಕೊಂಡು, ಮೊದಲ ಬಾರಿಗೆ ನೂರಾರು ಪ್ರಯೋಗಗಳ ಮೂಲಕ ಜಯಭೇರಿ ಬಾರಿಸಿದ ತಾಯಿ: ಕುಕನೂರು ರೆಹಮಾನವ್ವ ಕಲ್ಮನಿ. ತನ್ನ ಲಲಿತ ಕಲಾ ನಾಟ್ಯ ಸಂಘದ ಮೂಲಕ ಒಬ್ಬ ಸಾಮಾನ್ಯ ನಾಟಕಕಾರನಾಗಿದ್ದ ನನ್ನನ್ನು ಪ್ರಚಾರಕ್ಕೆ ತಂದರು. ಎತ್ತರಕ್ಕೆ ಹಾಗೇ ಗೌರವಕ್ಕೆ ತಂದರು. ಜಿ.ಜಿ. ಹೆಗಡೆಯವರು, ಕಂದಗಲ್ಲ

ಹನುಮಂತರಾಯರು, ನಲವಡಿ ಶ್ರೀಕಂಠ ಶಾಸ್ತ್ರಿಗಳು ಹಾಗೂ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳಂಥ ಹಿರಿಯ ನಾಟಕಕಾರರು ನನಗೆ ಮಾರ್ಗದರ್ಶನ ನೀಡಿದರು. ನನ್ನ ನಾಟಕಗಳನ್ನು ಓದಿ, ತೀಡಿದ್ದ ತೀಡಬ್ಯಾಡ ಹೊಸ ಬಗೆಯ ನಾಟಕ ಬರೀಬೇಕು ಎಂದು ಕಂದಗಲ್ಲ ರಾಯರು ಖಾರವಾಗಿಯೇ ಹೇಳಿದ್ದರು. ಇದರಿಂದ ಬಹಳ ಶ್ರಮಪಟ್ಟು ನಾಟಕ ಬರೆದೆ. ಕಥೆ, ಕಾದಂಬರಿ ಬಹಳಷ್ಟು ಓದಿದ್ದೆ. ಹಲವು ಸಿನೆಮಾ ಕೂಡ ನೋಡಿದ್ದೆ. ಆ ಎಲ್ಲ ಕಥಾವಸ್ತುಗಳನ್ನು ದೂರಸರಿಸಿ, ವಾಸ್ತವ ಬದುಕಿನ ದಟ್ಟ ಚಿತ್ರಣ ನೀಡುವ ತಾಯಿ ಕರುಳು ನಾಟಕ ಬರೆದೆ. ಬದುಕಿನ ಸುತ್ತಣ ಪರಿಸರದಲ್ಲಿ ಕಂಡ ಕರುಳು ಕರಗಿಸುವ ತ್ಯಾಗಮಯಿ ತಾಯಿಯ ಕಥೆಯನ್ನು ಕರುಣಾರಸ ಪ್ರಧಾನ ನಾಟಕವಾಗಿ ಮಾಡಿದೆ. ಇದೊಂದು ಕೌಟುಂಬಿಕ ನಾಟಕ. ತಾಯಿ, ತಂದೆ, ಅಣ್ಣ, ತಮ್ಮ, ತಾಯಿಯ ತ್ಯಾಗ, ಸೋದರನ ವಾತ್ಸಲ್ಯ, ಅಣ್ಣನ ವೈಫಲ್ಯ, ಅತ್ತಿಗೆಯ ಮೇಲಾಟ–ಕುಟಿಲತನ ಮುಂತಾದ ಮನಕರಗಿಸುವ ದೃಶ್ಯಾವಳಿಗಳಿದ್ದವು. ಈವರೆಗೆ ನನ್ನ ನಾಟಕಗಳು ಕೆಲವು ಕಂಪನಿಗಳ ಮೂಲಕ ಪ್ರದರ್ಶನಗೊಂಡಿದ್ದವು. ಆವರೆಗೆ ನನ್ನ ೧೦ ನಾಟಕಗಳನ್ನು ಬರೆದಿದ್ದರೂ, ಅಷ್ಟಿಷ್ಟು ಹೆಸರು ಬಂದಿದ್ದರೂ ಆ ನಾಟಕಗಳು ತೃಪ್ತಿ ನೀಡಿರಲಿಲ್ಲ. ನನ್ನಲ್ಲಿ ಆತ್ಮ ವಿಶ್ವಾಸ ಮೂಡಿಸಿರಲಿಲ್ಲ. ನನ್ನ ಎದುರಿಗೆ ಹಿರಿಯ ನಾಟಕಕಾರರಿದ್ದರು. ಜಿ.ಬಿ. ಹೆಗಡೆ, ಕಂದಗಲ್ಲ ರಾಯರು, ನಲವಡಿ ಶ್ರೀ ಕಂಠಶಾಸ್ತ್ರಿಗಳು, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು. ಈ ಹಿರಿಯ ನಾಟಕಕಾರರು ನನ್ನ ಹಿಂದಿನ ನಾಟಕಗಳನ್ನು ನೋಡಿದ್ದರು. ಎಚ್ಚರಿಸಿದ್ದರು. ಕಂದಗಲ್ಲ ಹನುಮಂತರಾಯರು ಹಿಂದಿನ ಕೆಲವು ನಾಟಕಗಳನ್ನು ಓದಿ, 'ಹೊಸ ಕಲ್ಪನೆಯ ಜನರ ಮನಸು ಮುಟ್ಟುವ ನಾಟಕ ಬರೆ' ಎಂದಿದ್ದರು. ಪ್ರೇಕ್ಷಕರನ್ನು ತಲ್ಲಣಗೊಳಿಸುವ ಹೊಸ ಬಗೆಯ ನಾಟಕ ಬರೆದಿದ್ದೆ, ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆ. ಈ ನಾಟಕ ಪ್ರಯೋಗಿಸಲು ಸ್ತ್ರೀ ಪಾತ್ರಗಳನ್ನು ಮಾಡುತ್ತಿದ್ದ ಏಣ್ಗಿ ಬಾಳಪ್ಪನವರನ್ನಾಗಲಿ, ಗೋಕಾಕ ಕಂಪನಿ ಬಸವರಾಜ ಹೊಸಮನಿಯವರನ್ನಾಗಲಿ ಕೇಳಬೇಕೆಂದು ಕೊಂಡಿದ್ದೆ. ಅದು ೧೯೫೫ ರ ಕಾಲ. ಆಗ ಸ್ತ್ರೀ ಪಾತ್ರಗಳನ್ನು ಹೆಸರಾಂತ ಪುರುಷ ಕಲಾವಿದರೇ ಮಾಡುತ್ತಿದ್ದರು. ಹಮ್ಮಿಗೆ ನೀಲಕಂಠಪ್ಪನವರು ರಂಗಭೂಮಿ ರಾಣಿ ಖ್ಯಾತಿಯವರು. ಗರುಡರ ಕಂಪನಿಯಲ್ಲಿದ್ದು ಗರುಡರ ಜೊತೆಗೇ ನಾಯಕಿಯಾಗಿ, ಪ್ರತಿ ನಾಯಕಿಯಾಗಿ ಪಾತ್ರವಹಿಸಿದವರಿದ್ದರು. ಗಾನ ಗಂಧರ್ವರೆಂದು ಹೆಸರು ಪಡೆದ ಮುರಗೋಡ ಗಂಗಾಧರಪ್ಪನವರು, ಮದನಭಾವಿ ಸಿದ್ದಿಂಗಪ್ಪನವರು, ಸಂಗನಬಸಪ್ಪ ಮಟ್ಟಿ ಕುಕನೂರು, ಲಿಂಗರಾಜ ಬುವಾ ಎರುಗುಪ್ಪಿ, ಲಕ್ಷ್ಮಣಾವಾವ್

ಅಸುಂಡಿ, ಲಾಡಸಾಹೇಬರು, ಫಕ್ರುಸಾಬ ದೊಡವಾಡ, ಬಸವರಾಜ ಹೊಸಮನಿ, ಏಣ್ಗಿ ಬಾಳಪ್ಪ, ಮಂಕಣಿ ಮಾನಪ್ಪ, ಗರುಡ ಶ್ರೀಪಾದರಾಯ, ಡಂಬಳ ಶಾಂತಪ್ಪ, ಡಂಬಳ ಸಂಕಣ್ಣ, ಮುಂತಾದವರು ಸ್ತ್ರೀ ಪಾತ್ರಕ್ಕಾಗಿ ಸುಪ್ರಸಿದ್ಧರು. ನನ್ನ ತಾಯಿ ಕರುಳು ನಾಟಕದ ಗೌರಮ್ಮನ ಪಾತ್ರ ಏಣ್ಗಿ ಬಾಳಪ್ಪನವರಾಗಲಿ, ಬಸವರಾಜ ಹೊಸಮನಿಯವರಾಗಲಿ ನಿರ್ವಹಿಸಬಲ್ಲರೆಂದು ಎಣಿಕೆ ಹಾಕುತ್ತಿದ್ದೆ. ನನಗೆ ಹೆಚ್ಚು ಆತ್ಮೀಯರಾದ ಏಣ್ಗಿ ಬಾಳಪ್ಪನವರ ಕಲಾ ವೈಭವ ನಾಟಕ ಸಂಘದ ಬಿಡಾರ (ಕ್ಯಾಂಪ್) ಮಹಾರಾಷ್ಟ್ರದ ಈಚಲಕರಂಜಿ ಯಲ್ಲಿತ್ತು. ಒಮ್ಮೆ ತಾಯಿ ಕರುಳು ನಾಟಕದ ಹಸ್ತ ಪ್ರತಿ ಹಿಡಿದುಕೊಂಡು ಅವರಿದ್ದಲ್ಲಿಗೆ ಹೋದೆ. ಬಹಳ ಪ್ರೀತಿಯಿಂದ ಬರಮಾಡಿಕೊಂಡರು. ನಾಟಕ ಕೈಯಲ್ಲಿ ತೆಗೆದುಕೊಂಡು ನೋಡಿದರು. ನನ್ನಿಂದ ಓದಿಸಿದರು. ಬಹಳ ಮೆಚ್ಚಿಕೊಂಡರು. 'ಬಾಳ ಚಂದ ನಾಟ್ಕ ಬರೆದೀರಿ. ಆದ್ರ ಈ ತಾಯಿ ಪಾತ್ರ ಮಾಡುವಂಥ ನಟಿಯರು ನನ್ನ ಕಂಪ್ನ್ಯಾಗ ಯಾರೂ ಇಲ್ಲ, ಅಷ್ಟ ಅಲ್ಲ ಇತರ ಯಾರ ಕಂಪ್ನ್ಯಾಗೂ ಅಂಥ ನಟಿಯರು ಈಗಿಲ್ಲ, ನಾನ ಈ ಪಾತ್ರ ಮಾಡಬೇಕಂದ್ರ ಕೂದಲು ತೆಗೆಸಿ, ಸ್ತ್ರೀ ಪಾತ್ರ ಮಾಡೂದ ಬಿಟ್ಟೇನಿ. ಇನ್ನೂ ಗೋಕಾಕ ಕಂಪ್ನಿ ಬಸವಣ್ಣೆಪ್ಪ ಮಾಡಬಹುದಿತ್ತು, ಆತ್ನೂ ಬಿಟ್ಟಾನ. ಕವಲಿ ಚೆನ್ನಬಸಪ್ಪ, ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ಕೂಡ ಕೂದಲ ತೆಗೆಯಿಸಿ ಸ್ತ್ರೀ ಪಾರ್ಟ ಮಾಡಾದ ಬಿಟ್ಟಾರ. ಈಗೀಗ ಸ್ತ್ರೀ ಪಾತ್ರ ವಹಿಸಲು ಹೆಣ್ಮಕ್ಕಳು ಹೆಚ್ಚು ಹೆಚ್ಚು ದೊರಕುವುದರಿಂದ ಹೆಣ್ಪಾರ್ಟ ಮಾಡೋದ ಬಿಟ್ಟೇವಿ. ಆದ್ರ ಈ ತಾಯಿ ಕರುಳಿನ ನಾಟಕದ ಸ್ತ್ರೀ ಪಾತ್ರ ಮಾಡುವಂಥಾ ಗಟ್ಟಿ ಹೆಣ್ಮಕ್ಕಳು (ನಟಿಯರು) ಈಗ ಯಾರೂ ಇಲ್ಲ, ಅದಕ ನಮ್ಮ ಕಂಪನಿಗೆ ಈ ನಾಟಕ ತಗೋಳೋದಿಲ್ಲವೆಂದು ತಿಳಿಸಿ ಬಿಟ್ಟರು. ಗೌರಮ್ಮನ ಪಾತ್ರ ಮಾಡವರ ಇಲ್ಲ ಅಂದ್ರ ಈ ನಾಟಕದ ಗತಿ? ಎಂದು ನಾನು ಕೇಳಿದೆ. 'ಅಂಥ ಗಟ್ಟಿ ಹೆಣ್ಮಕ್ಕಳ್ನ ಈಗ ಹುಡ್ಕಬೇಕು; ಅವರ್ನ ಒಪ್ಪಿಸಬೇಕು, ಅಂದ್ರ ಈ ನಾಟಕ, ರಂಗಭೂಮಿಗೆ ಬರೋದ ಸಾಧ್ಯ' ಎಂದು ಕೆಲಹೊತ್ತು ಚಿಂತಾಮಗ್ನರಾಗಿ ಕುಳಿತು 'ಮೊಗಲಾಯದಾಗ ಒಬ್ಬಾಕಿ ರೆಹಮಾನವ್ವ ಕುಕನೂರ ಅಂತಾ ಆದಾಳ. ಆಕಿ ಗೌರಮ್ಮನ ಪಾತ್ರಕ್ಕೆ ಜೀವ ತುಂಬ್ತಾಳ.' ಅಂತಾ ತಿಳಿಸಿದರು. ರೆಹಮಾನವ್ವ ಯಾರೋ ಏನೋ, ಕುಕನೂರು ಎಲ್ಲೈತೋ? ಆಕಿ ನಾಟಕ ಕಂಪ್ನಿ ಕ್ಯಾಂಪ್ ಎಲ್ಲೈತೋ ಅಂತಾ ಅರ್ಧ ನಿರಾಸೆ, ಅರ್ಧ ಭರವಸೆಯಿಂದ ಹುಬ್ಬಳ್ಳಿಗೆ ಬಂದೆ. ಅಲ್ಲಿ ಹಿರಿಯ ನಾಟಕಕಾರರಾದ ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ಇದ್ರು. ಅವರ್ನ ಭೆಟ್ಟಿಯಾಗಿ ಏಣ್ಗಿ

ಬಾಳಪ್ಪನವರು ಹೇಳಿದ್ದನ್ನು ಒಪ್ಪಿಸ್ದೆ. ಅವರು 'ರೆಹಮಾನವ್ವ ಕಲ್ಮನಿ ಯಲಬುರ್ಗಾ ತಾಲೂಕು ಕುಕನೂರಿನವರು. ಲಲಿತ ಕಲಾ ನಾಟ್ಯ ಸಂಘದ ಮಾಲೀಕಳು. ಗಂಗಾವತಿಯಲ್ಲಿ ಕ್ಯಾಂಪ್ ಇದೆ. ಅಲ್ಲಿಗೆ ಹೋಗಿ ಭೆಟ್ಟಿ ಆಗ್ರಿ. ನಿಮ್ಮ ದೈವ ಪರೀಕ್ಷಿಸಿಕೊಳ್ರಿ. ಒಪ್ಪಬಹುದೆಂದು ಆಶೀರ್ವದಿಸಿ ಕಳಿಸಿದರು. ಗದಗದಿಂದ ಬೆಳಿಗ್ಗೆ ಏಳ ಗಂಟೆಗೆ ಹೊರಡುವ ಗುಂತಕಲ್ಲ ಲೋಕಲ್ ಟ್ರೇನಿಗೆ ಬಂದು ಗಿಣಿಗೇರಿಗೆ ಇಳಿದು, ಅಲ್ಲಿಂದ ಗಂಗಾವತಿಗೆ ಬಂದೆ. ಆವರೆಗೂ ನಾನು ಕೊಪ್ಪಳ–ಗಂಗಾವತಿ ನೋಡಿರಲಿಲ್ಲ. ೧೯೫೬ರಲ್ಲಿ ಕರ್ನಾಟಕ ಏಕೀಕರಣವೇನೋ ಆಗಿತ್ತು, ಆದರೂ ನಾವು ಮುಂಬೈ ಕರ್ನಾಟಕದವರು, ಅಂಗ್ರೇಜಿಯವರು ಅಂತಾ ಹೆಮ್ಮೆ, ಇತ್ಲಾಗಿನವರು ಮೊಗಲಾಯದವರು, ಉರ್ದುದವರು ಅಂತ ಇವರ ಬಗ್ಗೆ ಕೀಳರಿಮೆ ಇತ್ತು, ನಾನು ಗಂಗಾವತಿ ಮುಟ್ಟಿ ಥೇಟರಿಗೆ ಹೋದಾಗ ನಾಟಕದ ಪ್ರ್ಯಾಕ್ಟೀಸು ಮುಗಿದಿತ್ತು. ಜೋಗ್ಯಾರ್ಥಂಗ ತಲೆ ಗೂದಲು ಹರವಿಕೊಂಡು, ಹಳ್ಳಿ ಹೆಣ್ಮಕ್ಕಳು ಉಡುವ ಒಂದು ಸಾದಾ ಸೀರಿ ಉಟ್ಕೊಂಡು, ಮುಖದ ಮೇಲೆ ರಾಜ ಕಳೆಯುಳ್ಳ ಹೆಣ್ಮಗಳನ್ನು ಅವರೇ ರೆಹಮಾನವ್ವ ಅಂತಾ ತೋರಿಸಿದರು. ಆಗ ಕಂಪ್ನಿಯವರನ್ನು ಕರೆದುಕೊಂಡು, ಚುರುಮುರಿ (ಮಂಡಾಳು) ರಾಶಿ ಸುರಿವಿಕೊಂಡು ಅದರ ಮೇಲೆ ಸೇವು–ಡಾಣಿ ಹಾಕಿಕೊಂಡು ಉಳ್ಳಾಗಡ್ಡಿಯೊಂದಿಗೆ, ಫಳಾರ ಮಾಡುತ್ತ ಕುಳಿತುಕೊಂಡಿದ್ದಳು. ನಾನು ಹೋಗಿ ಪಿ.ಬಿ. ಧುತ್ತರಗಿ ಅಂತಾ ನಾಟಕಕಾರ, ಬಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಸೂಳಿಭಾವಿಯವನು. ಏಣ್ಗಿ ಬಾಳಪ್ಪನವರು ನಿಮ್ಮನ್ನ ಭೆಟ್ಟಿಯಾಗಲಿಕ್ಕೆ ತಿಳಿಸಿದರು, ಬಂದೀನಿ ಅಂದೆ. ಬರ್ರಿ ಬರ್ರಿ ಎಪ್ಪಾ ಫಳಾರ ಮಾಡಬರ್ರಿ ಅಂತ ಹಿಂಜರೆಯುತ್ತಿದ್ದ ನನ್ನನ್ನು ಬಲವಂತದಿಂದ ತಮ್ಮ ಮಗ್ಗುಲಲ್ಲಿ ಕೂಡ್ರಿಸಿಕೊಂಡು ಫಳಾರ ಮಾಡಿಸಿ, ಚಹಾ ಕುಡಿಸಿದರು.

ಆಮೇಲೆ ಒಂದು ಕಡೆಗೆ ಕುಳಿತುಕೊಂಡು, ನಾನು ಹೊಸ ನಾಟಕ ಬರೆದದ್ದನ್ನು ಏಣ್ಗಿ ಬಾಳಪ್ಪನವರು, ಎಚ್.ಟಿ. ಮಹಾಂತೇಶ ಶಾಸ್ತ್ರಿಗಳು ಹೇಳಿದ್ದ ಪಾಠ ಒಪ್ಪಿಸಿದೆ. ಶ್ರೀ ಲಲಿತ ಕಲಾ ನಾಟ್ಯ ಸಂಘ ಒಂದು ಸಣ್ಣ ಕಂಪನಿ. ಹಿರಿಯ ಮಗ ಬಾಬಣ್ಣ, ಲಲಿತಮ್ಮ, ಉಮೇಶ ಮಕ್ಕಳು ಪಾತ್ರ ವಹಿಸುತ್ತಿದ್ದರು. ಮಗಳು ಮಂಜುಳಾ, ಆಕೆಗಿಂತ ಕಿರಿಯವ ಮುನ್ನಾ ಇನ್ನೂ ಚಿಕ್ಕವರಾಗಿದ್ದರು. ಎಲ್ಲರೂ ಪಾತ್ರ ಮಾಡುತ್ತಿದ್ದರು. ಸಾದಾಸೀದ ಕಂಡರೂ ಕಲಾದಲ್ಲಿ ಪ್ರಬುದ್ಧತೆ ತೋರಿಸುತ್ತಿದ್ದರು. ಅಂಥ ಹೆಸರು ಮಾಡಿದ ಪಾತ್ರಧಾರಿಗಳಿರಲಿಲ್ಲ, ಜೋಗೇರಂಥ ಹೆಣ್ಮಗಳು ರೆಹಮಾನವ್ವ, ಗೌರಮ್ಮನ ಪಾತ್ರ ನಿರ್ವಹಿಸಬಲ್ಲಳೆ? ಎಂಬ ಭಯ ಆತಂಕ

ಒಂದೆಡೆಯಿದ್ದರೆ, ಈ ನಾಟಕವನ್ನು ತನ್ನ ಕಂಪನಿಗೆ ತೆಗೆದುಕೊಳ್ಳಲು ಒಪ್ಪುತ್ತಾಳೆಯೇ? ಎಂಬ ಸಂಶಯ ಇನ್ನೊಂದೆಡೆಗೆ ಕಾಡುತ್ತಿತ್ತು, ತಾನೊಬ್ಬ ಹಿರಿಯ ನಟಿ, ಕಂಪನಿ ಮಾಲೀಕಳು ಎಂಬ ಯಾವ ಅಹಂಕಾರ, ಬಿಗುಮಾನ ತೋರಿಸದೆ, 'ಬಾ ಯಪ್ಪಾ, ನಾಟಕಾ ಓದು' ಎಂದಳು. ನಾಟಕದ ಕಥೆ ಕೇಳಿ, ಸಂಭಾಷಣೆಗಳನ್ನು ಓದಿಸಿ, ಮಂತ್ರಮುಗ್ಧಳಾದಳು. 'ನಾಟಕ ಬಹಳ ಚಲೋ ಬರೆದೀರಿ. ನಾನು ಗೌರಮ್ಮನ ಪಾತ್ರ ಮಾಡ್ತೀನಿ. ನೀವು ಇಲ್ಲಿದ್ದು ಪ್ರ್ಯಾಕ್ಟೀಸು ಮಾಡಿಸಿರಿ. ಮುಂದಿನ ಕ್ಯಾಂಪಿಗೆ ನಾಟಕ ಪ್ರಯೋಗ ಮಾಡೋಣ, ಏನು ಕೊಡಬೇಕು? ಅಂದಾಗ ಹಣಕ್ಕಿಂತ ನಾಟಕ ಯಶಸ್ಸು ಕಾಣಬೇಕೆಂತಿದ್ದ ನಾನು, ನಿಮಗ ತಿಳಿದಟು ಕೊಡ್ರಿ ಎಂದೆ.

ಗಂಗಾವತಿ ಹತ್ತಿರದ ಸಿದ್ಧಾಪುರ ಕ್ಯಾಂಪಿನಲ್ಲಿ 'ತಾಯಿ ಕರುಳು' ನಾಟಕ ಪ್ರಥಮ ಪ್ರಯೋಗ ಕಂಡಿತು. ರೆಹಮಾನವ್ವ ತಾಯಿ ಗೌರವ್ವನ ಪಾತ್ರ, ಗಯ್ಯಾಳಿ ಸೊಸೆ ಸರಸ್ವತಿಯಾಗಿ ಹಿರಿಯ ಮಗ ಬಾಬಣ್ಣಾ ಕಲ್ಮನಿ, ದಾಕ್ಷಾಯಿಣಿಯಾಗಿ ಮಗಳು ಲಲಿತಮ್ಮ ಕಲ್ಮನಿ, ಮಹಾಂತೇಶನಾಗಿ ಉಮೇಶ ಕಲ್ಮನಿ, ಶಿವಮೂರ್ತಿಯಾಗಿ ಲಕ್ಷ್ಮಣ ತಾವರಗೇರಿ, ಕಲ್ಯಾಣ ಶೆಟ್ಟಿಯಾಗಿ ನಾಗಸಮುದ್ರ ಹನುಮಂತಪ್ಪ, ಶಿವನಾಗಿ ಮುನ್ನಾ ಕಲ್ಮನಿ ಪಾತ್ರ ನಿರ್ವಹಿಸಿದರು. ನಾನು, ನಾಟಕ ನಿರ್ದೇಶನ ಮಾಡುವುದರ ಜೊತೆಗೆ ಮಹೇಶನ ಪಾತ್ರವನ್ನು ನಿರ್ವಹಿಸಿದೆ. ರೆಹಮಾನವ್ವ ಪಾತ್ರದ ಅಂತರಂಗವನ್ನರಿತು, ಅದ್ಭುತ ಅಭಿನಯ ನೀಡಿದಳು. ಕವಿಯ ಕಲ್ಪನೆಗೂ ಮೀರಿದ ಅಭಿವ್ಯಕ್ತಿಯನ್ನು ತೋರಿದಳು. ಆಕೆಯ ಭಾವ ಪೂರ್ಣ ಅಭಿನಯ, ಸೊಗಸಾದ ಸಂಭಾಷಣೆಯ ಶೈಲಿ, ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡವು. ಕರುಣರಸ ಭರಿತ ಮನೋಜ್ಞಕಥೆ, ಮೇರೆ ಮೀರಿದ ಅಭಿನಯ ನೋಡುಗರ ಹೃದಯವನ್ನು ಮೀಟಿ, ಕಣ್ಣೀರ ಕೋಡಿ ಹರಿಸಿತು. ನೂರಕ್ಕೂ ಹೆಚ್ಚು ಪ್ರಯೋಗ ಕಂಡು ಈವರೆಗೆ ಸಂಘ ಪ್ರಯೋಗಿಸಿದ ನಾಟಕಗಳಲ್ಲೇ ಶ್ರೇಷ್ಠ ನಾಟಕವೆಂದು ಗುರುತಿಸಿಕೊಂಡಿತು. ಹೋದಲ್ಲೆಲ್ಲ ತುಂಬಿದ ಪ್ರೇಕ್ಷಕರಿಂದ ಪ್ರದರ್ಶನಗಳಾದವು. ತಾಯಿ ಕರುಳು ಅಪಾರ ಜನಪ್ರಿಯತೆ ಪಡೆಯಿತು. ಕಂಪನಿಗೆ ಕೈತುಂಬ ದುಡ್ಡು ಗಳಿಸಿಕೊಟ್ಟಿತು. ಈವರೆಗೂ ಹತ್ತು ನಾಟಕಗಳನ್ನು ಬರೆದಿದ್ದರೂ ನಾನೊಬ್ಬ ನಾಟಕಕಾರನೇ? ಎಂಬ ಅಳುಕು ಇತ್ತು, ಎಲ್ಲಿಯೂ ನಾನು ನಾಟಕಕಾರ ಎಂದು ಹೇಳಿಕೊಳ್ಳುವ ಧೈರ್ಯ ಮಾಡುತ್ತಿರಲಿಲ್ಲ, ಆತ್ಮ ಸ್ಥೈರ್ಯವೂ, ನನ್ನಲ್ಲಿರಲಿಲ್ಲ, ಮೊಗಲಾಯದ ಅಲ್ಪ ಸಂಖ್ಯಾತ ಸಮಾಜದ ಮಹಿಳೆಯೊಬ್ಬಳು, ಎಲ್ಲಿಯೋ ದೂರದ ಒಬ್ಬ

ನಾಟಕಕಾರನನ್ನು ಹತ್ತಿರಕ್ಕೆ ಕರೆದುಕೊಂಡು ಧೈರ್ಯದಿಂದ ನಾಟಕ ಪ್ರಯೋಗ ಮಾಡಿದಳು. ತಾನೂ ತನ್ನ ಅಭಿನಯದ ಪ್ರಬುದ್ಧತೆಯನ್ನು ತೋರ್ಪಡಿಸಿದಳು. ನಾನು ನಾಟಕಕಾರನಾಗಿ ಪ್ರ್ಯಾಕ್ಟೀಸು, ದೃಶ್ಯದ ಮಹತ್ವ, ಪಾತ್ರ ಅರಿವು ಮಾಡಿಕೊಡುತ್ತಿದ್ದೆ. ರೆಹಮಾನವ್ವ ಹಾವಭಾವ ಅಭಿನಯ ಕಲಿಸಿಕೊಡುತ್ತಿದ್ದಳು. ಸಂಗೀತ ನಿರ್ವಹಣೆಯೂ ಆಕೆಯದೇ ಆಗಿತ್ತು ಹತ್ತುಸಲ ತಿದ್ದುತ್ತಿದ್ದಳು. ಆಕೆಯ ಸಂಭಾಷಣೆಯ ಸ್ಪಷ್ಟತೆ, ಶುದ್ಧ ಉಚ್ಚಾರಣೆ ಮೆಚ್ಚಿ ದಂಗಾದೆ. ನನ್ನಲ್ಲಿ ಆತ್ಮ ವಿಶ್ವಾಸ ಮೂಡಿಸಿ, ನಾನು ಮುಂದೆ ದೊಡ್ಡ ನಾಟಕಕಾರನಾಗಲಿಕ್ಕೆ, ಪ್ರಸಿದ್ಧಿ ಪಡೆಯಲಿಕ್ಕೆ ಕಾರಣೀಭೂತಳಾದಳು. ಚಿಕ್ಕ ಸೊಸೆ ಹಾಗೂ ಸಂಪತ್ತಿಗೆ ಸವಾಲ್ ನಾಟಕಗಳು ಸಿನೆಮಾಗಳಾದದ್ದು ನಿಮಗೆಲ್ಲ ಗೊತ್ತಿದೆ ಎಂದು ಭಾವಪೂರ್ಣವಾಗಿ ಹೇಳುತ್ತಲೇ ಹೋದರು. ನಮ್ಮ ಭಾಗದ ಕವಿಗಳು, ಲೇಖಕರು, ಕಲಾವಿದರು, ಇತಿಹಾಸ, ಕಲೆ, ಸಂಸ್ಕೃತಿ ಬಗ್ಗೆ ಹೆಚ್ಚಿನ ಅರಿವನ್ನು ಅಭಿಮಾನವನ್ನು ಮೂಡಿಸುವ ಉದ್ದೇಶ ಕರ್ನಾಟಕ ಸಂಘ ಹೊಂದಿತ್ತು. ನಮ್ಮ ಉದ್ದೇಶಕ್ಕೆ ಪೂರಕವಾಗಿ ನಾಟಕಕಾರ ಧುತ್ತರಗಿಯವರು ಮಾತನ್ನಾಡಿದ್ದರು. ರೆಹಮಾನವ್ವ ಕಲ್ಮನಿ ಕುಕನೂರಿನವರೆಂದು, ದೊಡ್ಡ ಅಭಿನೇತ್ರಿಯೆಂದು ಕೇಳಿದ್ದೆವು. ಅಂದಿನ ಚರ್ಚೆಯಲ್ಲಿ ಪಾಲ್ಗೊಂಡ ನಮಗೆಲ್ಲ, ನಮ್ಮ ಭಾಗದ ರಂಗಭೂಮಿ ಬಗ್ಗೆ ಆಸಕ್ತಿ ಮೂಡಿದಂತಾಗಿತ್ತು. ಪಿ.ಬಿ. ಧುತ್ತರಗಿಯವರಂಥ ಮಹಾನ್ ನಾಟಕಕಾರನನ್ನಾಗಿ ಬೆಳೆಸಿದ, ಪ್ರೋತ್ಸಾಹಿಸಿದ ರೆಹಮಾನವ್ವ ಕಲ್ಮನಿ, ಬಹು ದೊಡ್ಡ ಕಲಾವಿದೆಯೆನಿಸಿತು. ಶಿರಹಟ್ಟಿ ವೆಂಕೋಬರಾಯರು ಕೊಪ್ಪಳದವರು. ಗರುಡ ಸದಾಶಿವರಾಯರು ಕೊಪ್ಪಳ ತಾಲೂಕಿನ ಕವಲೂರಿನವರು. ಸಂಗನಬಸಪ್ಪ ಮಟ್ಟಿ ಕುಕನೂರಿನವರು, ವೆಂಕರೆಡ್ಡಿಯವರು ತಳಕಲ್ಲಿನವರು ಎಂದು ನಮ್ಮ ಅಧ್ಯಯನ, ಆಸಕ್ತಿ ಸಂಪರ್ಕಗಳಿಂದ ತಿಳಿದುಕೊಂಡೆವು.

ಇದು ೧೯೭೪ರ ಸಂಗತಿ–ಇದಾಗಿ ೨೦೧೧ರ ವರೆಗೆ ೩೭ ವರ್ಷಗಳು ಗತಿಸಿ ಹೋಗಿವೆ. ರೆಹಮಾನವ್ವ ಇಲ್ಲ, ಧುತ್ತರಗಿಯವರಿಲ್ಲ. ಧುತ್ತರಗಿಯವರು ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದರು. ಇಂಥವರು ತಾವು ಹೋದಲ್ಲೆಲ್ಲ, ಸಭೆ ಸಮಾರಂಭಗಳಲ್ಲಿ, ಸನ್ಮಾನ ಸಮಾರಂಭಗಳಲ್ಲಿ ತಪ್ಪದೇ ರೆಹಮಾನವ್ವ ನೀಡಿದ ಪ್ರೋತ್ಸಾಹ ಮೂಡಿಸಿದ ಆತ್ಮ ವಿಶ್ವಾಸವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದರು.

ತಾಯಿ ಕರುಳಿನ ನಾಟಕ ಪ್ರದರ್ಶನದಿಂದ ರೆಹಮಾನವ್ವನ ನಾಟಕ ಕಂಪನಿ ಆರ್ಥಿಕ ಸ್ಥಿತಿ–ಸುಧಾರಿಸಿತು. ಜೊತೆಗೆ ಪಿ.ಬಿ. ಧುತ್ತರಗಿಯವರಿಗೆ ತಾಯಿ ಕರುಳು

ನಾಟಕದ ಯಶಸ್ಸಿನಿಂದ ಸ್ಫೂರ್ತಿ ಪಡೆದು 'ಸಹೋದರಿ' ಹೊಸ ನಾಟಕ ಬರೆದರು. ಅದನ್ನು ಬೇರೆ ಕಂಪನಿಗಳು ತಮಗೆ ನೀಡಲು ದುಂಬಾಲುಬಿದ್ದಿದ್ದರೂ, ಹಣದ ಆಮಿಷ ಒಡ್ಡಿದ್ದರೂ ರೆಹಮಾನವ್ವನ ಕಂಪನಿಗೆ ಕೊಟ್ಟರು. ಅದು ದೇವದುರ್ಗ ತಾಲೂಕಿನ ಮಸರಕಲ್ಲದಲ್ಲಿ ೧೯೬೦ರಲ್ಲಿ ಹೊಸದಾಗಿ ಪ್ರಯೋಗಗೊಂಡಿತು. ಮಸರಕಲ್ಲು ಶಿವಶರಣರಾದ ಅಜಗಣ್ಣ ಮುಕ್ತಾಯಕ್ಕ ಅಣ್ಣ ತಂಗಿಯರಿದ್ದ ಊರು. ಅಂಥಲ್ಲಿ ಸಹೋದರಿ ಪ್ರಯೋಗಗೊಂಡದ್ದು ಮತ್ತಷ್ಟು ಪ್ರಚಾರಕ್ಕೆ ಬರಲು ಕಾರಣವಾಯಿತು. ಆ ಕಾಲದಲ್ಲಿ ಧುತ್ತರಗಿಯವರು ಈ ಕಂಪನಿ ನಟರಾಗಿದ್ದುಕೊಂಡು ತಮ್ಮ ನಾಟಕಗಳನ್ನು ನಿರ್ದೇಶಿಸುತ್ತಿದ್ದರು.

## ಹೇಮರೆಡ್ಡಿ ಮಲ್ಲಮ್ಮನಾಗಿ

ರೆಹಮಾನಬಿ ರೆಹಮಾನ್ ಜಾನ್‌ಳೆಂದು ಪ್ರಖ್ಯಾತ ನಟಿಯಾಗಿ ತಳಕಲ್ಲ ವೆಂಕರೆಡ್ಡಿಯವರ ಕಂಪನಿ ಬಿಟ್ಟು ಸಂಗಾತಿ ನಂದರಾಜ ಮೇವುಂಡಿಯೊಂದಿಗೆ ಹಳೆಯ ಮೈಸೂರಿನ ಶಾಂತಿನಿವಾಸ ನಾಟಕ ಮಂಡಳಿಗೆ ಹೋದಳು. ಅಲ್ಲಿಂದ ಸಂಗನಬಸಪ್ಪ ಕುಕನೂರು ಆರಂಭಿಸಿದ ಕುಕನೂರ ಭರತ ಕಲಾ ನಾಟ್ಯ ಸಂಘದ ಪ್ರಮುಖ ನಟಿಯಾದಳು. ಈ ಕಂಪನಿ ಪೌರಾಣಿಕ ನಾಟಕಗಳಾದ ಭಕ್ತಪ್ರಹ್ಲಾದ, ಸಂಪೂರ್ಣ ರಾಮಾಯಣ, ದ್ರೌಪದಿ ಸ್ವಯಂವರಗಳನ್ನು ಪ್ರದರ್ಶಿಸುತ್ತಿತ್ತು. ವಾಮನರಾಯರ ಶಿಷ್ಯರಾಗಿದ್ದ ಸಂಗನಬಸಪ್ಪನವರು ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಲಾಗಲಿಲ್ಲ, ಈ ಕಂಪನಿಯಲ್ಲಿ ರೆಹಮಾನ್‌ಜಾನ್ ರಂಗ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತಗಳೆರಡನ್ನು ಅಭ್ಯಾಸ ಮಾಡಿದಳು. ಮದುವೆ ಯಾಗಿದ್ದ ಚಿಕ್ಕೇನಕೊಪ್ಪದ ನಂದಪ್ಪ ಮೇವುಂಡಿಯವರೊಂದಿಗೆ, ನಲವಡಿ ಶ್ರೀಕಂಠಶಾಸ್ತ್ರಿಗಳ ಶಿವಯೋಗಿ ಸಿದ್ಧರಾಮನನ್ನು ಕಲಿತುಕೊಂಡು ಅಲ್ಲಿಯೇ ಪ್ರಯೋಗಿಸಿದರು. ಕಲಾಸಕ್ತ ಊರಿನ ಹಿರಿಯರ ಪ್ರೋತ್ಸಾಹ ಹಾಗೂ ಶ್ರೀಮಂತ ಮನೆತನದ ನಟರ ಉತ್ಸಾಹ, ನಂದಪ್ಪನ ಸಂಘಟನಾ ಬಲದಿಂದ ಸೊಲ್ಲಾಪುರದಲ್ಲಿ ಇದರ ಪ್ರಯೋಗಗಳಾದವು.

ಸಂಗನಬಸಪ್ಪ ಮಟ್ಟಿಯವರು ತಮ್ಮ ಭರತ ಕಲಾ ನಾಟ್ಯ ಸಂಘವನ್ನು ತಮ್ಮ ವೃದ್ಧಾಪ್ಯದಿಂದ ನಿಲ್ಲಿಸಿದ ಮೇಲೆ, ಹಂದಿಗನೂರು ಸಿದ್ಧರಾಮಪ್ಪನವರ ವಿಶ್ವ ಕಲಾರಂಜನ ನಾಟ್ಯ ಸಂಘಕ್ಕೆ ತಮ್ಮ ನಾಟಕದ ಸಾಮಾನುಗಳನ್ನು ಮಾರಿದರು. ಅಲ್ಲದೆ ಸಿದ್ಧರಾಮಪ್ಪನವರು, ಬಸವರಾಜ ಮನಸೂರ, ಹಕ್ಕಂಡಿ ವೀರಪ್ಪ, ಡಿ. ದುರ್ಗಾದಾಸ, ಪಂಚಾಕ್ಷರಿಸ್ವಾಮಿ ಮತ್ತಿಕಟ್ಟಿಯವರಂಥ ಪ್ರಸಿದ್ಧ ನಟರು,

ಸಂಗನಬಸಪ್ಪ ಕುಕನೂರ ಅಭಿಮಾನದಿಂದ ಬಂದು ಪಾತ್ರವಹಿಸುತ್ತಿದ್ದರು. ಇವರೊಂದಿಗೆ ನಾಯಕ ನಟಿಯಾಗಿ ಅಭಿನಯಿಸಿದ ರೆಹಮಾನ್ ಜಾನ್ ಅವರ ಕಂಪನಿಗಳಿಗೂ ಕಾಲಿಟ್ಟಳು. ಅಲ್ಲಿಯೂ ಪ್ರಸಿದ್ಧಿ ಪಡೆದಳು. ತುಂಬಿದ ಮೈಕಟ್ಟಿನ ಐದೂವರೆ ಅಡಿ ಎತ್ತರದ ಸ್ಪುರದ್ರೂಪಿಯಾದ ಇವರು ತಮ್ಮ ಮಧುರಕಂಠದಿಂದ ಹೊರಡಿಸುವ ಸುಶ್ರಾವ್ಯ ರಂಗ ಸಂಗೀತ ಪ್ರೇಕ್ಷಕರನ್ನು ಮನಮೋಹನಗೊಳಿಸುತ್ತಿತ್ತು ಕಂಪನಿ ಮಾಲೀಕರು ಇವರು ಪಾತ್ರ ನಿರ್ವಹಿಸುವುದನ್ನು ಮೆಚ್ಚಿಕೊಂಡಿದ್ದರು.

ಲಿಂಗರಾಜ ಬುವಾ ಯರಗುಪ್ಪಿಯವರು, ತಳಕಲ್ಲ ಕಂಪನಿ ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಮ್ಮನ ಪಾತ್ರ ನಿರ್ವಹಿಸಿ ಮಾದರಿಯಾಗಿದ್ದರು. ಅವರಿಂದ ಅಭಿನಯ ಹಾಗೂ ಮಲ್ಲಮ್ಮ ನಾಟಕದ ರಂಗ ಗೀತೆಗಳನ್ನು ಕಲಿತು ಇವರು ಮಲ್ಲಮ್ಮನಾಗಿ, ತವರು ಮನೆಯಿಂದ ಗಂಡನ ಮನೆಗೆ ಹೊರಟಾಗ, 'ಹೃದಯ ವ್ಯಥೆಯ ನಾ ತಾಳೆ। ಮಮ ಜನನಿ' ಎಂದು ಕಳಿಸಬಂದವರ ಕಾಲಿಗೆರಗಿ ದುಃಖಿಸುವ ದೃಶ್ಯ ಪ್ರೇಕ್ಷಕರ ಮನಮಿಡಿಯುತ್ತಿತ್ತು 'ಮಲ್ಲಿನಾಥ ಧ್ಯಾನ ಮಾಡೋ ನೀ ನಿರಂತರ, ಹಾಗೆಯೇ ಪದ್ಮಮ್ಮ ಅತ್ತೆ, ನೆಗೆಯಣ್ಣಿಯರಾದ ನಾಗಮ್ಮ ಮಹಾದೇವಿಯರು ಕೊಡುವ ಉಪದ್ರವಗಳಿಂದ ತುಸುವೂ ಬೇಸರಗೊಳ್ಳದೆ, ನಗುನಗುತ್ತಲೇ ಜೋಳ ಬೀಸುವ, ಕೇರುವ, ತೂರುವ ದೃಶ್ಯಾವಳಿಯಲ್ಲಿ 'ಮೋಕ್ಷ ಸದನಾ। ಮೋಹ ಹರಣಾ। ಗೈವೆ ಧ್ಯಾನಾ। ನಾ ಶೈಲ ನಿಧಾನಾ । ದೇವನೆ ಭಕ್ತಾಭಿಮಾನಾ। ನಿನ್ನದಯ್ಯ ಲೋಕತ್ರಾಣ। ನೀನೆ ಪ್ರಾಣ ನೀನೆ ಮಾನಾ। ಕಾವುದಯ್ಯ ಶೈಲ ನಿಧಾನಾ । ಮುಂತಾದ ಹಾಡುಗಳಲ್ಲದೆ, ಮಲ್ಲಮ್ಮನನ್ನು ಕಾಡಿ ಬೇಡಿದ ಅತ್ತೆ, ನೆಗಿಯಣ್ಣಿಯವರು ಶ್ರೀಶೈಲ ಮಲ್ಲಿಕಾರ್ಜುನನ ಅವಕೃಪೆಗೆ ಒಳಗಾಗಿ ರೋಗ ಪೀಡಿತರಾದ ಸಂದರ್ಭದಲ್ಲಿ ಅವರು ಗುಣಮುಖರಾಗಲೆಂದು ಆರ್ತನಾದದಿಂದ ಶ್ರೀಶೈಲಮಲ್ಲಿಕಾರ್ಜುನನನ್ನು 'ಕರುಣಿ ಕರುಣಿ ಗಿರಿರಾಜ ಮಲ್ಲಯ್ಯ। ತವ ಲೀಲೆಯ ತೋರಯ್ಯ। ಶ್ರೀಶೈಲವಾಸ ಹೇ ಪರಮೇಶ। ಚಿನ್ಮಯ ರೂಪ। ಕರುಣೆ ಕರುಣೆ ಗಿರಿರಾಜ ಮಲ್ಲಯ್ಯ। ಎಂದು ಬೇಡಿಕೊಳ್ಳುವಾಗ ಪ್ರೇಕ್ಷಕನೂ ಮಲ್ಲಮ್ಮನೊಂದಿಗೆ ತಾನೂ ಆ ದೇವನನ್ನು ಪ್ರಾರ್ಥಿಸುವ ವಾತಾವರಣವುಂಟಾಗುತ್ತಿತ್ತು. ಮಲ್ಲಮ್ಮ ಪ್ರಕೃತಿಯ ಮಡಿಲಲ್ಲಿ ಗೋವುಗಳನ್ನು ಕಾಯುತ್ತ 'ಸದಾ ಸೇವೆಗೈವೆ ವನದಿ। ನಾ ಗೋಮಾತೆಯ। ಸತತ ವಿಪಿನವಾಸಾ। ಮಲ್ಲಿನಾಥ ಸೇವೆ। ಸಂತೋಷವೀವುದು। ಆಹಾ ಗೋಮಾತೆಯ। ಹಾಡು ಹೃದ್ಯವಾಗಿತ್ತು. ಚಿಕ್ಕೋಡಿ ಶಿವಲಿಂಗಶಾಸ್ತ್ರಿಗಳ, ನಲವಡಿ ಶ್ರೀಕಂಠ ಶಾಸ್ತ್ರಿಗಳ ಹಾಗೂ ಕಂದಗಲ್ಲ ಹನುಮಂತರಾಯರ ನಾಟಕಗಳನ್ನು ಕಂಪನಿ

ನಾಟಕಗಳು ಪ್ರಯೋಗಿಸಹತ್ತಿದವು. ಕುರುಕ್ಷೇತ್ರ ನಾಟಕದ ನಾಯಕ ಭೀಮ, ನಾಯಕಿ ದ್ರೌಪದಿ, ಪಾಂಡವರನ್ನು ತನ್ನ ಪ್ರಾಣದಂತೆ ಕಾಯುವ ಕೃಷ್ಣ ಈ ಮೂರು ಪ್ರಮುಖ ಪಾತ್ರಗಳು. ಡಿ. ದುರ್ಗಾದಾಸ, ಹಂದಿಗನೂರು ಸಿದ್ಧರಾಮಪ್ಪ, ಎಚ್.ಟಿ. ಅರಸ ಮುಂತಾದವರೊಂದಿಗೆ ದ್ರೌಪದಿಯಾಗಿ ರೆಹಮಾನ್ ಜಾನ್ ಅಭಿನಯಿಸಿದಳು. ಕುರುಕ್ಷೇತ್ರ ನಾಟಕದ ಆರಂಭದಲ್ಲಿ ಮಾರುತಿಯಿಂದ ಭೀಮನ ಗರ್ವಭಂಗ, ಅಂತರಿಕ್ಷಕ್ಕೆ ಏರಿದ ಶ್ರೀಕೃಷ್ಣನ ಮೂರುತಿಯನ್ನು ದ್ರೌಪದಿ ಕೆಳಗೆ ತರಿಸಲು ಪ್ರಾರ್ಥಿಸುತ್ತಾಳೆ. ಈ ನಾಟಕದ ದ್ರೌಪದಿ ಪಾತ್ರದಲ್ಲಿ ರೆಹಮಾನ್ ಜಾನ್ ಭಕ್ತಿಯಿಂದ ಕೈಮುಗಿದುಕೊಂಡು:

ಬಾ ಶುಭ್ರ ಪ್ರತಿಮಾ । ಕೊಡುತಲಿ ಮೋದಾವರ ಅಹಿಶಯನನ

ಸುರರ ಶೃಂಗಾರ । ಸತಿಯ ಗುಣ ಭವಿ । ಬೆಳಗಲಿ ಭಾರತಿಮನ ಶ್ರೀ ಧಾಮ

ಎಂದು ಹಾಡು ಮುಗಿಸುವದರಲ್ಲಿ ಅಂತರಿಕ್ಷದಿಂದ ಕೃಷ್ಣನ ಪ್ರತಿಮೆ ಮತ್ತು ಗದೆ ಸ್ವಸ್ಥಾನಕ್ಕೆ ಬರುವವು. ಆರಂಭದ ದೃಶ್ಯದಲ್ಲಿ ಪರಿಣಾಮಕಾರಿಯಾದ ಅಭಿನಯದಿಂದ ಪ್ರಭಾವ ಬೀರುತ್ತಿದ್ದಳು. ಆ ಹಾಡಿನ ಗುಂಗಿನಲ್ಲಿ ಪ್ರೇಕ್ಷಕರಿಗೆ ಗಂಧರ್ವ ಲೋಕವೇ ಧರೆಗಿಳಿದಿದೆಯೆಂಬ ಭ್ರಮೆ ಉಂಟಾಗುತ್ತಿತ್ತು.

ಭೀಮ: ಬಾ ಪಾಂಚಾಲಿ ! ನಿನಗೆ ಪಂಚವಲ್ಲಭೆಯೆಂದು ಪರಿಹಾಸ್ಯ ಮಾಡಿದ ದುಶ್ಯಾಸನನ ವಕ್ಷಸ್ಥಳವನ್ನು ಒಡೆದು ಹಾಕುವ ಈ ಗದೆಯ ಕೌಶಲ್ಯವನ್ನು ಕಾಣ ಬಾ. ಕೌರವರು ಕೊಟ್ಟ ತಾಪದಿಂದುರಿದೆದ್ದ ಸಿಡಿಲಿನಂದದಿ ಗರ್ಜಿಸುತ್ತ ಕೌರವ ಸುಖ ಶರಧಿಯನ್ನು ಬತ್ತಿಸುತ್ತಿರುವ ನೀನಲ್ಲವೆ ಅಗ್ನಿಕುಮಾರಿ.

ದ್ರೌಪದಿ : ಗಾಳಿಯ ಸಹಾಯವಿಲ್ಲದೆ ಬೆಂಕಿಯೇನು ಮಾಡಬಲ್ಲದು? ಅಗ್ನಿಕುಮಾರಿ ತೇಜಸ್ಸಿಗೆ ರುದ್ರಾಂಶ ಸಂಭೂತನ ಸಹಾಯವೇ ಕಾರಣ. ಅಗ್ನಿ ಪರತಂತ್ರ, ಗಾಳಿ ಸ್ವತಂತ್ರ !

ಅರ್ಥಪೂರ್ಣ ಇಂಥ ಸಂಭಾಷಣೆಗಳನ್ನು ಸುಲಲಿತವಾಗಿ, ಸುಭಗವಾಗಿ ರೆಹಮಾನವ್ವ ಹೇಳುತ್ತಿದ್ದರು. ಶ.ಷ. ಸಕಾರಗಳನ್ನು, ಅ.ಹ ಕಾರಗಳನ್ನು ಈಗಿನ ನಟ ನಟಿಯರಿಗೆ ಹೇಳಲು ಬರುವುದಿಲ್ಲ. ಅಲ್ಪಪ್ರಾಣ–ಮಹಾಪ್ರಾಣಗಳ ಉಚ್ಚಾರಣೆಯಂತೂ ಇನ್ನೂ ಕಷ್ಟಕರವಾದದ್ದು. ಕಂದಗಲ್ಲ ರಾಯರ ಸಂಸ್ಕೃತ ಭೂಯಿಷ್ಟ, ಪದ ಪುಂಜಗಳ ಸಂಭಾಷಣೆ, ನಟ ನಟಿಯರಿಗೆ ಕಬ್ಬಿಣದ ಕಡಲೆ ! ಆದರೆ ಈ ನಾಟಕಗಳನ್ನು ಉತ್ತರ ಕರ್ನಾಟಕದಲ್ಲಿ ಅನಕ್ಷರಸ್ಥ ಹವ್ಯಾಸಿ ಕಲಾವಿದರು ನುರಿತ ಸುಶಿಕ್ಷಿತ ಕಲಾವಿದರಂತೆ ಸಂಭಾಷಣೆಗಳನ್ನು ಹೇಳಬಲ್ಲರು.

ಇಂದಿಗೂ ರೆಹಮಾನ್ ಜಾನ್, ಜುಬೇದಾ ಬಾಯಿ ಸವಣೂರು, ಕಾಶೀಬಾಯಿ ನಾಲ್ವಾತವಾಡ, ಭಾರತಿ ಶಿರಹಟ್ಟಿ, ಹಾಗೂ ಸುಭದ್ರಮ್ಮ ಮನಸೂರು, ಸರೋಜಮ್ಮ ಧುತ್ತರಗಿ ಪ್ರಸಿದ್ಧ ಅಭಿನೇತ್ರಿಯರಾಗಿದ್ದಾರೆ.

## ವಿಭಿನ್ನ ಪಾತ್ರಗಳಲ್ಲಿ

ರೆಹಮಾನವ್ವ ಕಲ್ಮನಿಯವರು ಕಿತ್ತೂರು ಚೆನ್ನಮ್ಮ, ಅಕ್ಷಯಾಂಬರ, ಸತ್ಯ ಹರಿಶ್ಚಂದ್ರ, ರಕ್ತರಾತ್ರಿ, ಕುರುಕ್ಷೇತ್ರ, ಚಿತ್ರಾಂಗದಾಗಳಲ್ಲದೆ, ರಾಣಿ ರುದ್ರಮ್ಮ ಎಚ್ಚೆಮ ನಾಯಕ, ಟಿಪ್ಪುಸುಲ್ತಾನ, ಝಾನ್ಸಿರಾಣಿ ಲಕ್ಷ್ಮೀಬಾಯಿ, ನರಗುಂದ ಬಂಡಾಯ, ಬೆಳವಡಿ ಮಲ್ಲಮ್ಮನಂಥ ಮಹಾನ್ ದೇಶ ಭಕ್ತರನ್ನು ಕುರಿತಾದ ನಾಟಕಗಳಲ್ಲಿ ಯಾರೂ ಹೆಸರಿಡದಂತೆ ಅಭಿನಯಿಸಿ, ತಮ್ಮ ಶಕ್ತಿ ಸಾಮರ್ಥ್ಯ ಗಳನ್ನು ಪ್ರದರ್ಶಿಸಿದ್ದಾರೆ. ಅಭಿನಯದಲ್ಲಿ ಹರ್ಷ–ದುಃಖಗಳನ್ನು ಮುಖದಲ್ಲಿ ಅಭಿವ್ಯಕ್ತಿಗೊಳಿಸುತ್ತಿದ್ದರು. ಸತ್ಯ ಹರಿಶ್ಚಂದ್ರದಲ್ಲಿ ತಾರಾಮತಿಯಾಗಿ, ಪತಿಯು ನೀಡಿದ ವಚನವನ್ನು ಉಳಿಸುವುದಕ್ಕಾಗಿ ಕಾಶೀ ಪಟ್ಟಣದಲ್ಲಿ ತನ್ನನ್ನು, ಮಗನನ್ನು ಮಾರಿ, ಶುಲ್ಕ ಕಟ್ಟಲು ಒಪ್ಪಿಕೊಳ್ಳುತ್ತಾಳೆ. ಮಗನು ಹುಳ್ಳಿಯನ್ನು ತರಲು ಹೋಗಿ ಹಾವು ಕಡಿದು ಅಸುನೀಗಿದಾಗ ಒಡೆಯ ಒಡತಿಯರ ಆಜ್ಞೆ ಪಡೆದು ಸತ್ತ ಮಗನಿದ್ದಲ್ಲಿಗೆ ಬರುತ್ತಾಳೆ. ಅಲ್ಲಿ ಪರಿತಪಿಸುತ್ತಾಳೆ. ಎಲೆಲೆ ಚಾಂಡಾಲಗಿತ್ತಿ ಕದ್ದು ಸುಡ ಬಂದೆಯಾ ಎಂದು, ಸುಡಲು ಬಂದ ಕಟ್ಟಿಗೆಯ ಮೇಲೆ ಮಲಗಿದ ಕೂಸನ್ನು ಕಾಲು ಹಿಡಿದು, ಹರಿಶ್ಚಂದ್ರ ಎಳೆದಾಗ ಸುಡುಗಾಡು ಹಗೆಯಾಯ್ತೆ? ಮಗನೆನ್ನುತ್ತಾಳೆ. ಈತ ನಿನ್ನ ಶಿಶುವಿನೋಪಾದಿ ಎಂದು ಬೇಡುವ ಪ್ರಸಂಗಗಳಲ್ಲಿ ಆ ಕಾಲದ ಬಸವರಾಜ ಹೊಸಮನಿ, ಚಿತ್ತರಗಿ ಗಂಗಾಧರಶಾಸ್ತ್ರಿ, ಏಣ್ಗಿ ಬಾಳಪ್ಪ, ನಾಲ್ವತವಾಡ ಕಾಶಿಬಾಯಿ, ಮುಂತಾದವರು ನಿರ್ವಹಿಸುತ್ತಿದ್ದ ತಾರಾಮತಿ–ಪಾತ್ರದಲ್ಲಿ ಅವರಿಗೆ ಸರಿಸಮನಾಗಿ, ಒಮ್ಮೊಮ್ಮೆ ಮೀರಿ ಅಭಿನಯಿಸಿದ್ದಾಳೆ. ಇಂಥ ದುಃಖದ ಪಾತ್ರಗಳಲ್ಲಿ ಶೋಕರಸವನ್ನೂ ವ್ಯಕ್ತಪಡಿಸುತ್ತಿದ್ದರು. ಅಕ್ಷಯಾಂಬರದ ದ್ರೌಪದಿಯಾಗಿ ತನ್ನನ್ನು ತುಂಬಿದ ಸಭೆಯಲ್ಲಿ ಅವಮಾನಿಸಿ ಸೀರೆ ಸೆಳೆಯುವಾಗಿನ ಸಂದರ್ಭದಲ್ಲಿ ತನ್ನ ದೈವ, ಪತಿಗಳ ಮೌನವನ್ನು ಧಿಃಕ್ಕರಿಸುವ ಸನ್ನಿವೇಶ , ಕೊನೆಗೆ ಕೃಷ್ಣ ಪರಮಾತ್ಮನ ಪ್ರಾರ್ಥನೆ ಮುಂತಾದ ಕರುಣಾರಸದ ಸನ್ನಿವೇಶಗಳಲ್ಲಿ ಮಿಂಚಿದ್ದಾಳೆ.

ಚಿತ್ರಾಂಗದಾ ನಾಟಕದಲ್ಲಿ ಉದ್ದಂಡ ಅಮಾತ್ಯ ಹಾಗೂ ಚಿತ್ರಾಂಗದೆ ವಾದಕ್ಕಿಳಿಯುತ್ತಾರೆ. ''ಬೆದರಿಕೆಗೆ ಬೆಚ್ಚಿ ಬೀಳುವ ಭೀರುವು ನಾನಲ್ಲ ! ನಿನಗೆ

ಮೃತಿಯನ್ನು ಬರ ಮಾಡುವ ಪ್ರಬಲಾ, ನನ್ನ ಜನ್ಮದಾತನ ಜತೆಯಲ್ಲಿ ನಿನ್ನನ್ನು ಪರಲೋಕ ಯಾತ್ರೆಗೆ ಕಳುಹಿಸಲು ನಿಂತಿರುವ ಕ್ಷಾತ್ರ ನಾರೀ!'' ಎಂದು ಫೂತ್ಕರಿಸುವ, ರೌದ್ರರಸ, ವೀರರಸ ಅಭಿನಯದಲಿ ಉಕ್ಕುತ್ತಿತ್ತು.

ತಾಯಿ ಕರುಳಿನ ಗೌರವ್ವ, ರೈಲು ನಿಲ್ದಾಣದಲ್ಲಿ ಹಸಿವಿನಿಂದ ಬಸವಳಿದು, ತುತ್ತು ಅನ್ನಕ್ಕಾಗಿ ಹಮಾಲಿ ಮಾಡುತ್ತ ಮಗನ ಭಾರವಾದ ಗಂಟನ್ನು ಎತ್ತಿಕೊಳ್ಳುವಾಗಿನ ಅಭಿನಯ ಒಂದಕ್ಕೆ ನಾವು ಕೊಟ್ಟ ರೊಕ್ಕ ಮುಟ್ಟಿ ಹೋಯಿತೆಂದು ಪ್ರೇಕ್ಷಕರು ಮೆಚ್ಚುಗೆ ತೋರಿಸುತ್ತಿದ್ದರು. ಗೌರವ್ವನಾಗಿ ನಟಿಸಿ ಮಾತೃ ಹೃದಯ ಮಕ್ಕಳಿಗಾಗಿ ಪರಿತಪಿಸುವ ರೀತಿ, ಸಹನ ಶೀಲೆಯಾದ ತಾಯಿ ಸೊಸೆ ಸರಸ್ವತಿಯ ಎಲ್ಲ ಹಿಂಸೆಗಳನ್ನು ತಾಳಿ ಕೊಳ್ಳುತ್ತಾಳೆ. ಮಗ, ಮಗಳು, ಗಂಡ, ಎಲ್ಲ ದೂರವಾದಾಗ ಮಗ ಮಹೇಶ ಹೆಂಡತಿಯ ಕೈಗೊಂಬೆಯಾದಾಗ, ರೆಹಮಾನವ್ವ ಕವಿ ಕಲ್ಪನೆಗೂ ಮೀರಿದ ಅಭಿನಯವನ್ನು ತೋರಿಸಿದಳು. ಆಕೆ ಗದ್ಗದಿತಳಾಗಿ, ನಡು ನಡುಗುತ್ತ, ಹೇಳುವ ಸಂಭಾಷಣೆಯ ಶೈಲಿ ಪ್ರೇಕ್ಷಕರ ಮನವನ್ನು ಸೂರೆಗೊಂಡವು. ಕರುಣರಸ ಭರಿತ ಸನ್ನಿವೇಶ ಎಲ್ಲರ ಹೃದಯ ಮೀಟಿ ಕಣ್ಣೀರ ಕೋಡಿ ಹರಿಸಿತು. ಸಿದ್ದಾಪುರದಲ್ಲಿ ಆರಂಭಗೊಂಡ ಪಿ.ಬಿ. ಧುತ್ತರಗಿಯವರ ನಾಟಕ ರೆಹಮಾನವ್ವನವರ ಗೌರವ್ವನ ಪಾತ್ರದಲ್ಲಿ ನೂರಕ್ಕೂ ಪ್ರಯೋಗಗಳನ್ನು ಕಂಡಿತು. ಜನರು ಎತ್ತಿನ ಬಂಡಿಯಲ್ಲಿ, ಟ್ರ್ಯಾಕ್ಟರಗಳಲ್ಲಿ ಬಂದು ನೋಡಿ ಕಣ್ಣೀರು ಸುರಿಸಿ, ಅತ್ತು ಹೋದರು. ಒಂದು ದಶಕದ ಕಾಲ ತಾಯಿ ಕರುಳು ನಾಟಕ ಬೀರಿದ ಪ್ರಭಾವ ಅಷ್ಟಿಷ್ಟಲ್ಲ, ಶ್ರೀ ಲಲಿತ ಕಲಾ ನಾಟ್ಯ ಸಂಘ ಕುಕನೂರು ಹಣದ ಹೊಳೆಹರಿಯಿಸಿತು. ಅಂಥ ಮನೋಜ್ಞ ಅಭಿನಯ ರೆಹಮಾನವ್ವನವರದಾಗಿತ್ತು.

ಕಂದಗಲ್ಲ ರಾಯರು ತಮ್ಮ ಸಾಲಕ್ಕಾಗಿ ಜೈಲು ಕಂಡು ಅಲ್ಲಿಯೇ ಬರೆಯಲು ಆರಂಭಿಸಿ ಮುಗಿಸಿದ ನಾಟಕ 'ಬಡತನ ಭೂತ'. ತಂದೆ ಕುಚೇಲಪಾದ ಮಗ ಇಂದಿರಾ ಚರಣ, ಮಗಳು ನೀಲಾ ಶ್ರೀಮಂತಿಕೆಯ ದರ್ಪ ತೋರುವ ಕುಶ ಬಡವರನ್ನು ಭೂತವನ್ನಾಗಿ ಕಾಡುವ ಹಣ ಮತ್ತು ಸಮಾಜ. ಈ ಸಾಮಾಜಿಕ ನಾಟಕದಲ್ಲಿ ರೆಹಮಾನವ್ವ ನೀಲಾ ಆಗಿ ಶೋಕರಸವನ್ನೇ ಹರಿಸುತ್ತಿದ್ದಳು. ಅವರು ಹಾಡುತ್ತಿದ್ದ ರಂಗಗೀತೆ ಹೀಗಿತ್ತು. ಪಹಾಡಿರಾಗ, ದಾದರಾ ತಾಳದಲ್ಲಿ ಈ ಹಾಡು ಹಾಡಿದರೆ ಪ್ರೇಕ್ಷಕರು, ಶಾಂತರಾಗಿ ಕುಳಿತು ಕೇಳುತ್ತಿದ್ದರು. ಕಣ್ಣೀರು ಸುರಿಸುತ್ತಿದ್ದರು. 'ಬಡತನ ತಾಪ। ತಾಳೆ ನಾ । ಸುರಶಾಪ । ಶ್ರೀಶೋಭಾ ।

ಕೊಡುತಾ ಜಗ। ತಾಪದೂಷಿತ ಬಡವರಾದ ಜನವಸುಧಾ ತಾಪವನಾ। ತೋರುವುದಾ। ಸುಮತಿ ಚಂದ್ರ ರಾಹುವಶಾ। ಕೊಡುತಾ ಜಗ। ಪಾಪದೂಷಣ। ಇವರ ಕಾಲಕ್ಕೆ ಕೆಟ್ಟದಾಗಿ ಅರಚುವ ಗೀತೆಗಳ ಹಾವಳಿ ಇರಲಿಲ್ಲ. ಪ್ರೇಕ್ಷಕರು ಪ್ರಸನ್ನಚಿತ್ತರಾಗಿ ಸಂಗೀತ ಆಲಿಸುತ್ತಿದ್ದರು. ಅಭಿನಯ ಸವಿಯುತ್ತಿದ್ದರು.

ಹೊಸಪೇಟೆಯ ರಂಗ ನಟ ಹಾಗೂ ಸ್ವತಃ ದತ್ತು ಪುತ್ರರಾಗಿ, ಕಹಿ ಅನುಭವಿಸಿದ ಸಿ. ಪದ್ಮನಾಭರಾಯರು, ತಮ್ಮ ಸ್ವಂತ ಅನುಭವವನ್ನು ನಾಟಕವಾಗಿರಿಸಿದ್ದಾರೆ. ಅವರು ಮೈಸೂರು ಸುಮತಿಯವರೊಂದಿಗೆ ಈ ನಾಟಕವನ್ನು ಪ್ರಚಾರಗೊಳಿಸಿದರು. ದತ್ತು ಪುತ್ರ ನಾಟಕದ ನಾಯಕ ಸುರೇಶನ ಪತ್ನಿ ಸುಮತಿಯಾಗಿ ರೆಹಮಾನವ್ವ, ಕೌಟುಂಬಿಕ ನೆಲೆಯಲ್ಲಿ ಅಭಿನಯಿಸುತ್ತಿದ್ದರು. ಶ್ರೀಮತಿ ಗೋಹರ ಜಾನ್ ಈ ನಾಟಕದ ಸುಮತಿ ಪಾತ್ರವಹಿಸಿರುವುದು ಈ ನಾಟಕದ ಮಹತ್ವವನ್ನು ಎಲ್ಲ ಕಾಲಕ್ಕೆ ಸಾರಿ ಹೇಳುತ್ತದೆ. ಗಣಪತಿಯಾಗಿ ಎನ್. ಶಾಂತಕುಮಾರ ಹಾಸ್ಯವನ್ನುಣಬಡಿಸಿದ್ದಾರೆ. ಗೋಹರ್‌ಜಾನ್ ಅಥವಾ ಮೈಸೂರು ಸುಮತಿಯವರ 'ಸುಮತಿ' ಪಾತ್ರವಷ್ಟೇ ಏಕೆ ಅವರನ್ನೂ ಮೀರಿಸಿ, ರೆಹಮಾನ್ ಜಾನ್ ಮಾಡಿದ್ದಾಳೆಂದು ಶ್ರೀಪಾದರಾವ್ ಗರುಡರು ಆಗಾಗ ಹೇಳುತ್ತಿದ್ದರು. ಏನೇ ಹೇಳಿರಿ ರೆಹಮಾನವ್ವನಂಥ ಅಭಿನೇತ್ರಿ ಮುಂದೆ ಹುಟ್ಟಲಾರಳು.

ಡಿ. ದುರ್ಗಾದಾಸರ ನಿರ್ಮಲಾ ನಾಟಕದ ನಿರ್ಮಲಾ ಆಗಿ ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿಯಲ್ಲಿ ರೆಹಮಾನವ್ವ ಅಭಿನಯಿಸುತ್ತಿದ್ದಳು. ಕುಳಿತ ಪ್ರೇಕ್ಷಕರು ಆಕೆ ಶಾಶ್ವತವಾಗಿ ಹುಚ್ಚಳಾಗಿಬಿಟ್ಟಳೆಂದು ಚಿಂತಿಸುತ್ತಿದ್ದರಂತೆ. ಅಷ್ಟೊಂದು ಸಹಜವಾಗಿ ಅಭಿನಯಿಸಿದ್ದಕ್ಕೆ ಪ್ರೇಕ್ಷಕರು ನೀಡುವ ಶಿಫಾರಸ್ಸಾಗಿದೆ. ಈ ಹುಚ್ಚಿ ಪಾತ್ರವನ್ನು ಮಕ್ಕಳಾದ ಲಲಿತಾ, ಮಂಜುಳಾ ಕೂಡ ಸಮರ್ಥವಾಗಿ ನಿಭಾಯಿಸುತ್ತಿದ್ದರು.

ಕಿಶೋರರನ ಬಲೆಗೆ ಬಿದ್ದ ಅಸ್ಪೃಶ್ಯ ಕನ್ಯೆಯಾಗಿ, ಕಂದಗಲ್ಲರಾಯರ ಮಾತಂಗ ಕನ್ಯಾದಲ್ಲಿ ರೆಹಮಾನವ್ವ ಮನೋಜ್ಞವಾಗಿ ಅಭಿನಯಿಸುತ್ತಿದ್ದುದಾಗಿ ಹೇಳುವವರು ಈಗಲೂ ಇದ್ದಾರೆ. ಕಂದಗಲ್ಲ ಹನುಮಂತರಾಯರು ಈಕೆಯ ಅಭಿನಯ ಮೆಚ್ಚಿಕೊಂಡಿದ್ದರು. ಪೌರಾಣಿಕ, ಐತಿಹಾಸಿಕ ಹಾಗೂ ಭಕ್ತಿರಸ ಪ್ರಧಾನ ನಾಟಕಗಳಲ್ಲಿ ಮಾತ್ರವಲ್ಲ, ಸಾಮಾಜಿಕ ನಾಟಕಗಳಲ್ಲಿಯೂ ಮನೋಜ್ಞ ಅಭಿನಯ ನೀಡುತ್ತಿದ್ದಳು.

## ಎಚ್. ಟಿ. ಅರಸರು ಮಾರು ಹೋದ ರೆಹಮಾನವ್ವ

ಕಂದಗಲ್ಲ ಹನುಮಂತರಾಯರ ಇನ್ನೊಂದು ಪ್ರಸಿದ್ಧ ನಾಟಕ ಚಿತ್ರಾಂಗದಾ ಗುಳೇದಗುಡ್ಡದ ನಾಟಕ ಕ್ಯಾಂಪಿನಲ್ಲಿ ರಾಯರಿದ್ದಾಗ, ಕವಲಿ ಚೆನ್ನಬಸಪ್ಪನವರು ಅದೇ ಆಗ ಉದಯೋನ್ಮುಖ ನಟರಾಗಿದ್ದ ಡಿ. ದುರ್ಗಾದಾಸರನ್ನು ಪರಿಚಯಿಸಿದರು. ಆಗಲೇ ಪೌರಾಣಿಕ ನಾಟಕಗಳಲ್ಲಿ ವಿಶೇಷವಾಗಿ ಹೇಮರೆಡ್ಡಿ ಮಲ್ಲಮ್ಮದ ವೇಮನನಾಗಿ ಪ್ರಸಿದ್ಧಿ ಪಡೆದಿದ್ದ ಇವರನ್ನು ಮನಸ್ಸಿನಲ್ಲಿಟ್ಟುಕೊಂಡು, ಚಿತ್ರಾಂಗದಾ ನಾಟಕ ಬರೆದರೆಂದು ಹೇಳುತ್ತಾರೆ. ಚಿತ್ರಾಂಗದಾ ಪಾತ್ರಕ್ಕೆ ಮೊದಲು ಜೀವ ತುಂಬಿದವರು ಕಾಶೀಬಾಯಿ ನಾಲ್ವತವಾಡರು. ಇವರು ಹಿರಿಯ ನಟಿ. ಅನಂತರ ರೆಹಮಾನ್‌ಜಾನ್, ಜುಬೇದಾಬಾಯಿ, ಭಾರತಿ ಶಿರಹಟ್ಟಿ ಮುಂತಾದವರು. ಕರ್ನಾಟಕದಾದ್ಯಂತ ಚಿತ್ರಾಂಗದೆಯಾಗಿ ಹೆಸರು ಮಾಡಿದವರು ರೆಹಮಾನವ್ವ ರೊಬ್ಬರೇ!. ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ, ಬಳ್ಳಾರಿ ಹಾಗೂ ಮೈಸೂರಿನ ಎಂ. ಸಿ. ಮಹಾದೇವಸ್ವಾಮಿಗಳವರ ನಾಟಕ ಕಂಪನಿಗಳ ಚಿತ್ರಾಂಗದಾದಲ್ಲಿ ಚಿತ್ರಾಂಗದೆಯಾಗಿ ಅಭಿನಯಿಸಿದ್ದಾರೆ. ಅವರು ಇಷ್ಟಪಟ್ಟ ಪಾತ್ರಗಳೆಂದರೆ ಹೇಮರೆಡ್ಡಿ ಮಲ್ಲಮ್ಮ ನಂತರದ ಪಾತ್ರವೇ ಚಿತ್ರಾಂಗದೆ ನಾಟಕ. ಕಂದಗಲ್ಲ ರಾಯರ ಚಿತ್ರಾಂಗದಾ, ಸಂಗೀತ ನಾಟಕ ! ಚಿತ್ರಾಂಗದಾ ಪಾತ್ರದಲ್ಲಿ ಕರ್ನಾಟಕದ ಉದ್ದಾಮ ನಟರೆದರು ನಾಯಕಿಯಾಗಿ ಅಭಿನಯಿಸಿದ್ದಾರೆ. ನಾಟಕದ ಆರಂಭವೇ ಹುಲಿ–ಬೇಟೆಯಿಂದ ! ಉದ್ದಂಡ ಅಮಾತ್ಯನ ಮಗ ಕೌಂಡಿನ್ಯ ನೊಂದಿಗೆ ನಾಗಕನ್ಯೆ ಉಲೂಪಿ ಮುಖಾಮುಖಿಯಾಗುವುದು ತಕ್ಷಕಿ, ಕೇತಕಿ ಸಖಿಯರೊಂದಿಗೆ, ಅದ್ಭುತವಾದ ನಾಟಕೀಯತೆ, ವೀರವನಿತೆಯಾಗಿದ್ದ ಚಿತ್ರಾಂಗದೆ, ಅರ್ಜುನನಿಗೆ ಒಲಿಯುತ್ತಾಳೆ. ಮಣಿಪುರದ ಕ್ರೀಡಾವನದಲ್ಲಿ ಚಿತ್ರಾಂಗದಾ ವಿಜಯಲತೆಯ ಪೂಜೆ ನೆರವೇರಿಸುತ್ತಾಳೆ. ಅವನ ಅಭ್ಯುದಯಕ್ಕಾಗಿ ಪೂಜೆ–ಬಬ್ರುವಾಹನನ ಜನನ. ತಂದೆ ಅರ್ಜುನನೊಡನೆ ಯುದ್ಧ, ಇಲ್ಲೆಲ್ಲ ಚಿಂತ್ರಾಗದಾ ಪ್ರಮುಖ ಪಾತ್ರ. ಆಕೆಯೇ ನಾಯಕಿ. ಚಿತ್ರಾಂಗದೆಯಾಗಿ ಡಿ. ದುರ್ಗಾದಾಸರೊಡನೆ ಪಾತ್ರ ವಹಿಸಿದ ರೆಹಮಾನವ್ವ ಕೀರ್ತಿ ಶಿಖರಕ್ಕೇರಿದಳು. ನಾಲ್ವತವಾಡ ಕಾಶೀಬಾಯಿಯ ನಂತರ ಆ ಪಾತ್ರಕ್ಕೆ ನ್ಯಾಯವೊದಗಿಸಿದರು. ಈ ಬಗ್ಗೆ ಎಚ್. ಟಿ. ಅರಸು ತಮ್ಮ ಅನುಭವಗಳನ್ನು ಹೀಗೆ ಹೇಳಿಕೊಳ್ಳುತ್ತಾರೆ. ''ನನ್ನನ್ನು ಎತ್ತರಕ್ಕೆ ತೆಗೆದುಕೊಂಡು ಹೋದವರು ಎಂ. ಸಿ. ಮಹಾದೇವಸ್ವಾಮಿಗಳವರು. ಅವರ ಕನ್ನಡ ಥಿಯಟರ್ಸ್ ನಾಟಕ ಮಂಡಳಿ ಹಳೆಯ ಮೈಸೂರಿನ ಕಡೆಗೆ ಪ್ರಸಿದ್ಧವಾದದ್ದು, ಅವರು ಪೌರಾಣಿಕ, ಐತಿಹಾಸಿಕ

ಹಾಗೂ ಸಾಮಾಜಿಕ ನಾಟಕಗಳನ್ನು ಪ್ರಯೋಗಿಸುತ್ತಿದ್ದರು. ಅವರು ಕಂದಗಲ್ಲ ಹನುಮಂತರಾಯರ ಚಿತ್ರಾಂಗದಾ ನಾಟಕ ಪ್ರದರ್ಶಿಸಿದರು. ಆ ನಾಟಕದಲ್ಲಿ ನಾನು ಅರ್ಜುನ, ನಾಯಕಿಯರಾಗಿ ರೆಹಮಾನವ್ವ, ಜುಬೇದಾಬಾಯಿ ಬರುತ್ತಿದ್ದರು. ಚಿತ್ರಾಂಗದಾ ನಾಟಕವಿದ್ದಾಗ ಮಾತ್ರ ಇವರನ್ನು ನನ್ನ ಸಲಹೆ ಮೇರೆಗೆ ಕರೆಯಿಸಿಕೊಳ್ಳುತ್ತಿದ್ದರು. ಇಬ್ಬರೂ ದೊಡ್ಡ ನಟಿಯರು. ರೆಹಮಾನವ್ವ ನಾನು ರಾಯಚೂರು ಜಿಲ್ಲೆಯವರು. ಅವರದು ಕುಕನೂರು ನನ್ನದು ಹನುಮಸಾಗರ. ನನ್ನನ್ನು ತಿಪ್ಪಣ್ಣಾ–ಸಪ್ಪಂಡಿ ಎಂದು ನನ್ನ ಪೂರ್ಣ ಹೆಸರಿನಿಂದ ಕರೆಯುತ್ತಿದ್ದಳು. ಇಬ್ಬರಲ್ಲಿ ತುಂಬ ಸಲುಗೆ ಇತ್ತು, ಊರಿಗೆ ಹೋದಾಗ ನಾನೇ ಹೇಳಿ ಬರುತ್ತಿದ್ದೆ, ಇಲ್ಲವೆ ಪತ್ರ ಹಾಕಿ ಕರೆಯಿಸಿಕೊಳ್ಳುತ್ತಿದ್ದೆ. ರೆಹಮಾನವ್ವನ ಹಲವಾರು ನಾಟಕಗಳನ್ನು ನೋಡಿದ್ದೇನೆ. ದುರ್ಗಾದಾಸರೊಡನೆ ಚಿತ್ರಾಂಗದಾ ಮಾಡಿದ್ದು ನೋಡಿದ್ದೇನೆ. ಆಕೆ ಪಾತ್ರವನ್ನು ಅರ್ಥ ಮಾಡಿಕೊಳ್ಳುತ್ತಿದ್ದಳು. ಸನ್ನಿವೇಶವನ್ನು ತಿಳಿದುಕೊಳ್ಳುತ್ತಿದ್ದಳು. ಅದಕ್ಕೆ ತಕ್ಕಂತೆ ಸಂಭಾಷಣೆ ಹೇಳುತ್ತಿದ್ದಳು, ಅಭಿನಯಿಸುತ್ತಿದ್ದಳು. ನಾಯಿಕೆಯ ಪಾತ್ರದಲ್ಲಿರುತ್ತಿದ್ದುದರಿಂದ ನೃತ್ಯ ಮಾಡುವ ಪ್ರಸಂಗವಿರುತ್ತಿರಲಿಲ್ಲ. ಆಕೆ ಪಾತ್ರದಲ್ಲಿ ತಲ್ಲೀನಳಾಗಿ ಅಭಿನಯಿಸುತ್ತಿದ್ದರೆ, ಅದರಲ್ಲಿಯೂ ನಾಯಕನ ಜೊತೆಗಿರುವಾಗಿನ ಸನ್ನಿವೇಶದಲ್ಲಿ ಪಾತ್ರಕ್ಕೆ ಜೀವ ತುಂಬುತ್ತಿದ್ದಳು. ಆಕೆ ಹೆಜ್ಜೆ ಇಟ್ಟರೆ, ಹಿಂದಕ್ಕೆ ಸರಿದರೆ ನೃತ್ಯ ಮಾಡುತ್ತಾಳೋ ಎನ್ನಿಸುತ್ತಿತ್ತು. ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿಯ ತುಕಾರಾಮ ಬುವಾ ಹಾಗೂ ನೃತ್ಯಗಾರ ಬಸವರಾಜ ಹೊಸಮನಿಯವರಿಂದ ಈಕೆ ನಾಟ್ಯ ಕಲಿತಿದ್ದರು. ನಾನು ಅರ್ಜುನನಾಗಿ ಅಭಿನಯಿಸುತ್ತಿರುವಾಗ ರೆಹಮಾನವ್ವ ಚಿತ್ರಾಂಗದೆ. ಹಾವ ಭಾವ, ಪ್ರೀತಿ, ಪ್ರೇಮ, ಭಾರತೀಯ ನಾರೀಮಣಿಯ ಲಜ್ಜೆ, ಪತಿಯ ಮೇಲಿನ ಪಾರಾಯಣತೆ, ಪೂಜ್ಯ ಭಾವನೆ, ಶೃಂಗಾರದ ಸನ್ನಿವೇಶ, ನಾಚಿ ಹಿಂದೆ ಸರಿಯುವುದು, ಸರಿದಂತೆ ಮಾಡುತ್ತಲೆ ಅಂಗ ಸಂಗಕ್ಕಾಗಿ ಬಯಸುವ ಬಾಲೆಯಂತೆ, ಆ ಕಾಲದಲ್ಲಿಯೇ ಎದೆಯ ಮೇಲೆ ಕೈಯಿಟ್ಟು ಶೃಂಗಾರರಸ ತೋರಿಸುವುದು. ಮುಖದ ಮೇಲೆ ಆ ಭಾವ ಪ್ರಕಟಿಸುವುದು ಇವೆಲ್ಲ ಅದ್ವಿತಿಯವಾಗಿದ್ದವು. ರೌದ್ರ ರಸದಲ್ಲಿಯೂ ಅದೇ ಪರಿಣಾಮ ! ಉದ್ದಂಡ ಅಮಾತ್ಯನನ್ನು ಕತ್ತಿಯಿಂದ ಇರಿಯುವ ಸಂದರ್ಭವನ್ನು ನೋಡಬೇಕು.! ಆ ಕಣ್ಣು ಅಗಲಿಸಿ, ಮುಖದ ಮೇಲಿನ ಕೋಪ ತೋರಿಸುವುದು, ಕೆಕ್ಕರಿಸಿ ನೋಡುವ ಕಣ್ಣು! ಆಕೆ ಮಹಾನ್ ನಟಿ, ಕಲಾವಿದೆ. ಈ ಸನ್ನಿವೇಶವನ್ನು ಜುಬೇದಾ ಬಾಯಿಯೂ ಮಾಡುತ್ತಿದ್ದಳು. ನಾನು ಆಕೆಯನ್ನು, ಇದನ್ನು ಎಲ್ಲಿ

ಕಲಿತೆ ? ಎಂದು ಕೇಳಿದೆ. ''ರೆಹಮಾನ್‌ಜಾನ್‌ರ ಅಭಿನಯ ನೋಡಿ ಕಲಿತೆ'' ಎಂದಳು. ನನಗೆ ತುಂಬ ಸಂತೋಷವಾಯಿತು. ನಮ್ಮ ನಿಜಾಂ ಪ್ರಾಂತದ ಮಹಿಳೆ ಮುಂಬೈ ಪ್ರಾಂತದಲ್ಲಿ, ಮೈಸೂರು ಪ್ರಾಂತದಲ್ಲಿ ಹೆಸರು ಮಾಡಿದಳಲ್ಲ! ಎಂಬ ಹೆಮ್ಮೆಯುಂಟಾಯಿತು. ಆಕೆಯ ಅಭಿನಯಕ್ಕೆ ಮಾರು ಹೋದೆ'' ಎಂದರು. ಚಿತ್ರಾಂಗದಾ ನಾಟಕದ ಮತ್ತೊಂದು ಪ್ರಸಂಗ, ಶೃಂಗಾರಸದ, ಲಜ್ಜಾ ಪ್ರಸಂಗದ ಅಭಿನಯದಿಂದ ಉತ್ತೇಜಿತನಾಗಿ, ಒಮ್ಮೆ ಕಡೂರು ಕ್ಯಾಂಪಿನಲ್ಲಿ ಇಬ್ಬರೂ ಕುಳಿತಾಗ ನನ್ನನ್ನು ಪ್ರೀತಿಸಲು ಆಹ್ವಾನಿಸಿದೆ. ಆಕೆ, ''ತಿಪ್ಪಣ್ಣ, ತಿಪ್ಪಣ್ಣ–ಸಪ್ಪಂಡಿ ಪ್ರೇಮವಿರುವುದೇ ಹಾಗೆ, ವ್ಯಾಮೋಹ ಯಾರನ್ನೂ ಬಿಡದು. ನಾನು ಚಿತ್ರಾಂಗದೆಯಾಗಿ, ನಿನ್ನನ್ನೂ ಅರ್ಜುನನ್ನಾಗಿ ಪ್ರೀತಿಸಿದೆ, ಕೈ ಮೈ ಮುಟ್ಟಿ ಆಲಂಗಿಸಿದೆ. ಅಭಿನಯಿಸಿದೆ. ಅದು ಅಭಿನಯ ತಪ್ಪಾಗಿ ಭಾವಿಸಿರುವಿ! ನಾವಿಬ್ಬರೂ ಪ್ರೀತಿ ಪ್ರೇಮ ವಿಶ್ವಾಸಗಳಿಂದಿರೋಣ. ದೈಹಿಕ ಸಂಬಂಧದಿಂದ ಗೌರವ ಕಳೆದುಕೊಳ್ಳುತ್ತೇವೆ.'' ಎಂದು ಪ್ರೀತಿ ಪ್ರೇಮಗಳ, ವೈಯಕ್ತಿಕ ಗೌರವಾದರಗಳನ್ನು ಕುರಿತು ಉದ್ಬೋಧಕ ಮಾತುಗಳನ್ನಾಡಿದಳು. ನನಗೆ ಆಕೆಯ ಮೇಲೆ ಗೌರವ ಇಮ್ಮಡಿಸಿತು. ನನ್ನ ಓರಿಗೆಯ, ನಮ್ಮ ಭಾಗದ ರೆಹಮಾನ್‌ಜಾನ್ ಆ ಎತ್ತರಕ್ಕೆ ಬೆಳೆದಿರುವುದನ್ನು ಕಂಡು ಹೆಮ್ಮೆಯೆನ್ನಿಸಿತು. ಮುಂದೆಯೂ ಅನೇಕ ಸಲ ಪಾತ್ರವಹಿಸಿದೆವು. ಹಿಂದಿನದಕ್ಕಿಂತಲೂ ತಲ್ಲೀನಳಾಗಿ ಅಭಿನಯಿಸಿದಳು. ಕುಣಿದಳು, ಕುಪ್ಪಳಿಸಿದಳು. ಅಂಥ ಕಲಾವಿದೆಯನ್ನು ಬೇರೆ ಎಲ್ಲೂ ಕಂಡಿಲ್ಲ'' ವೆಂದು ನಿಟ್ಟುಸಿರ್ಗರೆದರು. ತಮ್ಮ ಗೌರವಾರ್ಪಣೆ ಮಾಡಿದರು. ಹನುಮಸಾಗರದಲ್ಲಿದ್ದ, ಹುನಗುಂದ ತಾಲೂಕಿನ ಸೂಳಿಭಾವಿ ಯವರಾದ ಪಿ.ಬಿ. ಧುತ್ತರಗಿಯವರಿಗೆ ಗುಬ್ಬಿ ವೀರಣ್ಣ ಪ್ರಶಸ್ತಿ ಬಂದಿತ್ತು, ಅದೇ ಹನುಮಸಾಗರದ ತಿಪ್ಪಣ್ಣ ಅರಸ (ಎಚ್. ಟಿ. ಅರಸ) ಕೂಡ ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆರಡಿ ಎತ್ತರದ ಆಜಾನುಬಾಹು, ಕೆಂಪುವರ್ಣದ ತಿಪ್ಪಣ್ಣ ಸಪ್ಪಂಡಿಯವರು ಸ್ಫುರದ್ರೂಪಿ. ಹಳೆಯ ಮೈಸೂರು ಕಡೆಗೆ, ಬೆಂಗಳೂರಿನಲ್ಲಿ ಜರುಗುತ್ತಿದ್ದ ಪೌರಾಣಿಕ ನಾಟಕಗಳಲ್ಲಿ ನಾಯಕ, ಪ್ರತಿನಾಯಕ ಪಾತ್ರಗಳನ್ನು ನಿರ್ವಹಿಸುವುದರಲ್ಲಿ ಪ್ರವೀಣರು. ಪ್ರಚಂಡ ರಾವಣ, ಲಂಕಾದಹನ, ಸಂಪೂರ್ಣ ರಾಮಾಯಣಗಳಲ್ಲಿ ರಾವಣನಾಗಿ ಹೆಸರು ಪಡೆದಿದ್ದಾರೆ. ಐತಿಹಾಸಿಕ ನಾಟಕಗಳಲ್ಲಿಯೂ ಪಾತ್ರಮಾಡುವದರಲ್ಲಿ ಎತ್ತಿದ ಕೈ. ಬೆಂಗಳೂರಿನ ಸಮಾರಂಭಕ್ಕೆ ಬಂದಿದ್ದ ಆಗಿನ ಪ್ರಧಾನಿ ಪಂ. ಜವಹಾರಲಾಲ ನೆಹರು ಇವರ ಅಭಿನಯವನ್ನು ನೋಡಿ, ಮೆಚ್ಚಿ ಪ್ರೋತ್ಸಾಹಿಸಿರುವುದು ಇವರ

ಕಲಾಪ್ರತಿಭೆಯನ್ನು ಎತ್ತಿ ತೋರಿಸುತ್ತದೆ. ರೆಹಮಾಹನವ್ವರನ್ನು ರೆಹಮಾನ್ ಜಾನ್ ಆಗಿದ್ದಾಗ ಜೊತೆಯಾಗಿ ಅಭಿನಯಿಸಿದ ೯೩–೯೪ರ ಹರೆಯದ ರಂಗಭೂಮಿಯ ಹಾಗೂ ಚಲನ ಚಿತ್ರ ನಟರು. ಹಲವಾರು ಸಿನೆಮಾಗಳಲ್ಲಿ ಪಾತ್ರವಹಿಸಿದ್ದಾರೆ. ಅವರ ಮಾತು ಕೇಳಿ ದಂಗಾದೆ. ರೆಹಮಾನವ್ವ ರಂಗಸಂಗೀತ ಭರ್ಜರಿ ಸಂಭಾಷಣೆಯಗಳಿರುವ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳಿಗೆ ಮಾತ್ರ ಸೀಮಿತರಾಗಿರಲಿಲ್ಲ. ಮಾಂಡ್ರೆಯವರ ಸ್ತ್ರೀ ರತ್ನದ ಶೋಭಾ ಆಗಿ ಸಾಮಾಜಿಕ ನಾಟಕದಲ್ಲಿಯೂ ಅವರು ಅಭಿನಯಿಸಿ ಪ್ರಸಿದ್ಧರಾದರು. ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿಯ ದತ್ತು ಪುತ್ರದಲ್ಲಿ ಸುಮತಿ, ಇದೇ ಕಂಪನಿಯ ಪ್ರಮುಖ ಸಾಮಾಜಿಕ ನಾಟಕದ ಹುಚ್ಚಿ ನಿರ್ಮಲಾ ಆಗಿ ಹೆಸರು ಪಡೆದರು.

ಬೆಳವಣಿಕಿ ಶ್ರೀ ವೀರಭದ್ರೇಶ್ವರ ನಾಟಕ ಕಂಪನಿಯ ಪ್ರಮುಖ ನಾಟಕವಾಗಿ ಪ್ರಯೋಗಿಸುತ್ತಿದ್ದ ಜ್ಯುಬಿಲಿ ಕವಿ ಎಚ್. ಎನ್. ಹೂಗಾರರು ಬರೆದು ನಿರ್ದೇಶಿಸುತ್ತಿದ್ದ 'ಹುಚ್ಚರ ರಾಜ್ಯ' ನಾಟಕದಲ್ಲಿ ರೆಹಮಾನವ್ವ ಶ್ರೀಮಂತ, ಗರ್ವಿಷ್ಟ, ಕೋಪಿಷ್ಟ ಮಹಿಳೆಯಾಗಿ ಅದ್ಭುತವಾಗಿ ಅಭಿನಯಿಸುತ್ತಿದ್ದರು. ಈ ನಾಟಕಕ್ಕೆ ಆಗ ತುಂಬ ಬೇಡಿಕೆಯಿತ್ತು. ಸಾತ್ವಿಕ ಪಾತ್ರಗಳಲ್ಲಿ ಕಂಡಿದ್ದ ಪ್ರೇಕ್ಷಕ ಇವರ ಅಭಿನಯದ ಇನ್ನೊಂದು ಮುಖ ಕಾಣುತ್ತಿದ್ದ. ೧೯೫೯ರಲ್ಲಿ ಸಿದ್ದಾಪುರದ ಕ್ಯಾಂಪ್ (ಗಂಗಾವತಿ ತಾಲೂಕು) ನಲ್ಲಿ 'ತಾಯಿ ಕರುಳು' ನಾಟಕ ನೂರಕ್ಕೂ ಮೀರಿ ಯಶಸ್ವಿ ಪ್ರಯೋಗಗಳನ್ನು ಕಾಣುತ್ತಿರುವಾಗಲೇ ಪಿ. ಬಿ. ಧುತ್ತರಗಿಯವರಿಗೆ, ತಾವೊಬ್ಬ ಭರವಸೆದಾಯಕ ನಾಟಕಕಾರರೆಂಬ ಆತ್ಮ ವಿಶ್ವಾಸವುಂಟಾಯಿತು. ಆಗಿನ ವೃತ್ತಿರಂಗ ಭೂಮಿ ನಾಟಕ ಕಂಪನಿಗಳು ಇವರನ್ನು ಸಂಪರ್ಕಿಸಿ ಹೊಸ ನಾಟಕಗಳನ್ನು ತಮಗೆ ನೀಡಲು ದುಂಬಾಲು ಬಿದ್ದವು. ಆದರೂ ಬೇರೆಯವರಿಗೆ 'ಸಹೋದರಿ' ಹೊಸ ನಾಟಕ ನೀಡದೆ, ರೆಹಮಾನವ್ವ ನವರಿಗೆ ಪ್ರತಿ ಕಾಣಿಕೆಯಾಗಿ 'ಸಹೋದರಿ' ನಾಟಕ ಬರೆದು ನೀಡಿದರು. ರೆಹಮಾನವ್ವ ತಮ್ಮ ಪ್ರಧಾನ ಪಾತ್ರದಲ್ಲಿ ದೇವದುರ್ಗ ತಾಲೂಕಿನ ಅಜಗಣ್ಣ–ಮುಕ್ತಾಯಕ್ಕ ಎಂಬ ಅಣ್ಣ ತಂಗಿ ಶಿವಶರಣರ ಊರಾದ ಮೊಸರ ಕಲ್ಲಿನಲ್ಲಿ ಅಭಿನಯಿಸಿದರು. 'ಸಹೋದರಿ' ನಾಟಕ ಕೂಡ ಅಲ್ಲಿ ಅಜಗಣ್ಣ ಶರಣರ ಸಹೋದರಿ ಮುಕ್ತಾಯಕ್ಕನಂತೆ ಗೌರವಕ್ಕೆ ಪಾತ್ರವಾಗಿ ಜಯಭೇರಿ ಬಾರಿಸಿತು. ಈ ನಾಟಕದ ಯಶಸ್ಸುಕೂಡ ತಾಯಿ ಕರುಳು ನಾಟಕದಂತೆ ರೆಹಮಾನವ್ವ

ಕಲ್ಮನಿಯವರಿಗೆ ಸಲ್ಲುತ್ತದೆಂದು ಪಿ.ಬಿ. ಧುತ್ತರಗಿಯವರು ಕೃತಜ್ಞತೆ ತೋರಿಸುತ್ತಿದ್ದರು. ಇವರ ಮಲಮಗಳು ನಾಟಕದಲ್ಲಿಯೂ ಪ್ರಧಾನ ಪಾತ್ರವಹಿಸಿ ಸಾಮಾಜಿಕ ನಾಟಕಗಳನ್ನು ಅಭಿನಯಿಸುವಲ್ಲಿಯೂ ಇವರಿಗೆ ಪ್ರಾವೀಣ್ಯತೆಯಿದೆ ಯೆಂದು ಸಾಬೀತುಪಡಿಸಿದ್ದಾರೆ.

ಎಚ್. ಎನ್. ಹೂಗಾರರ 'ಹುಚ್ಚರ ರಾಜ್ಯ'ದಲ್ಲಿ ಮನೋಜ್ಞ ಅಭಿನಯ ನೀಡಿದಂತೆ ಅವರ 'ಸುವರ್ಣ ಪುತ್ಥಳಿ' 'ಹಡೆದವ್ವ' ಮೊದಲಾದ ಸಾಮಾಜಿಕ ನಾಟಕಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದಾರೆ ಎಂಬುದನ್ನು ರಂಗಭೂಮಿ ಕಲಾ ವಿಮರ್ಶಕರು ಎತ್ತಿ ತೋರಿಸಿದ್ದಾರೆ.

ಈವರೆಗೆ ಚರ್ಚಿಸದಿದ್ದ ಪೌರಾಣಿಕ ನಾಟಕ ರೇಣುಕಾ ಯಲ್ಲಮ್ಮದಲ್ಲಿ ರೇಣುಕೆಯಾಗಿ ಬಹು ಭಕ್ತಿಯಿಂದ ಆಕೆಯ ಭಕ್ತರು ಮೆಚ್ಚುವಂತೆ ಅಭಿನಯಿಸಿ ಹೆಸರು ಪಡೆದಿದ್ದಾರೆ. ಟಿಪ್ಪು ಸುಲ್ತಾನ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಬೆಳವಡಿ ಮಲ್ಲಮ್ಮ ನರಗುಂದ ಬಂಡಾಯ ಮೊದಲಾದ ದೇಶಭಕ್ತಿ ಉದ್ದೀಪನಗೊಳಿಸುವ ನಾಟಕಗಳಲ್ಲಿ ಅವರ ಅಭಿನಯ ಅಮೋಘವಾಗಿರುತ್ತಿತ್ತೆಂದು ರಂಗಕರ್ಮಿ ವಸಂತ ಕುಲಕರ್ಣಿಯವರು ಹಾಗೂ ಅಬ್ದುಲ್‌ಸಾಬ ಅಣ್ಣಿಗೇರಿಯವರಂಥ ನುರಿತ ಹಿರಿಯ ನಟರು ಅಭಿಪ್ರಾಯಪಡುತ್ತಾರೆ. ಅವರಿಗೆ ಗೌರವ ಅರ್ಪಿಸುತ್ತಾರೆ. ಏಕೆಂದರೆ, ಅಬ್ದುಲ್‌ಸಾಬ ಅಣ್ಣಿಗೇರಿ ಪತ್ನಿ ಪುಷ್ಪಮಾಲಾ ರೇಣುಕಾ ಯಲ್ಲಮ್ಮದ ಇಂದಿನ ಖ್ಯಾತ ಪಾತ್ರಧಾರಿಗಳಾಗಿದ್ದಾರೆ.

## ಗಾನ ಕೋಗಿಲೆ ಮನಸೂರು ಸುಭದ್ರಮ್ಮನವರನ್ನು ಮಾತಾಡಿಸಿದಾಗ

ರೆಹಮಾನವ್ವ ಕಲ್ಮನಿ ಕುರಿತು ಬರೆಯುವುದಿದೆಯೆಂದು ಬಳ್ಳಾರಿಯಲ್ಲಿದ್ದ ಸುಭದ್ರಮ್ಮ ಮನಸೂರರನ್ನು ಸಂಪರ್ಕಿಸಿದಾಗ ''ಬನ್ನಿರಿ ಅವರ ಹಾಗೂ ಅವರ ಮಕ್ಕಳ ಅಭಿನಯ ಕುರಿತು ಅನುಭವಗಳನ್ನು ಹಂಚಿಕೊಳ್ಳೋಣ''ವೆಂದರು. ''ರೆಹಮಾನ್ ಜಾನ್‌ರು ನನ್ನ ಹಿರಿಯ ತಲೆಮಾರಿನ ರಂಗಭೂಮಿ ಕಲಾವಿದೆ. ಅವರ ಹಿರಿಯ ಮಗ ಬಾಬಣ್ಣ ಕಲ್ಮನಿ, ಸೋದರಿ ಲಲಿತಮ್ಮ ನಾವು ಸಹ ನಟ ನಟಿಯರಾಗಿ ಪಾತ್ರ ನಿರ್ವಹಿಸಿದ್ದೇವೆ. ಬಳ್ಳಾರಿ, ಸುತ್ತಮುತ್ತ ಇವರಿಬ್ಬರು ಹಲವಾರು ಹವ್ಯಾಸಿ ನಾಟಕಗಳಲ್ಲಿ ನನ್ನೊಂದಿಗೆ ಅಭಿನಯಿಸಿದ್ದಾರೆ. ನಟರಿಗಿಂತ ನಟಿಯರಾದ ನಮಗೆ ಬವಣೆಗಳು ಬಹಳ. ಬಸಿರು ಬಾಣಂತನ ನಮಗೆ ದೇವರು ಕೊಟ್ಟಿರುವ ವರ'' ಎಂದರು. ಆಗ ನಾನು ಸತ್ಯ ಹರಿಶ್ಚಂದ್ರ ನಾಟಕದಲ್ಲಿ

ತಾರಾಮತಿಯಾಗಿ ಪಾತ್ರವಹಿಸುವಾಗ ಮುದ್ಗಲ್ಲ ಕ್ಯಾಂಪಿನ ಗ್ರೀನ್ ರೂಮಿನಲ್ಲಿ ಮೊಹರ್‍ರಂ ಹಬ್ಬದಂದು ಮಂಜುಳಾಗೆ ಜನ್ಮ ನೀಡಿದ್ದನ್ನು ಅದರಂತೆ, ಮುನ್ನಾ ಕೂಡ ಗಬ್ಬೂರು ಕ್ಯಾಂಪಿನಲ್ಲಿ ಇದೇ ಹರಿಶ್ಚಂದ್ರ ನಾಟಕವಾಡುವಾಗ ಜನಿಸಿದ್ದನ್ನು ನೆನಪಿಸಿದೆ. ಸುಭದ್ರಮ್ಮನವರು ಹೆರಿಗೆಯಾಗಿ ಮೂರು ದಿನಗಳಲ್ಲಿ ಪಾತ್ರವಹಿಸಿರುವುದನ್ನು ಹೇಳಿದರಲ್ಲದೆ, ತಾವು ಏಣ್ಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘದಲ್ಲಿ ಪಾತ್ರ ಮಾಡುತ್ತಿರುವಾಗಲೇ ಗರ್ಭಪಾತವಾದದ್ದನ್ನು ಅತ್ಯಂತ ನೋವಿನಿಂದ ಹೇಳಿಕೊಂಡರು. ರಾತ್ರಿಯೆಲ್ಲ ಪಾತ್ರ ವಹಿಸಬೇಕು, ನಾಟಕ ಮುಗಿಸಿಕೊಂಡು ತೂಕಡಿಸುತ್ತ ಮುಂದಿನ ಪ್ರಯೋಗದ ಊರನ್ನು ತಲುಪಬೇಕು. ಅಲ್ಲಿ ಮುಂದಿನ ಪ್ರಯೋಗದ ತಾಲೀಮು ನಡೆಸಬೇಕಾಗುತ್ತದೆ. ಊಟ ಉಪಚಾರದ ಪರಿವೆಯಿಲ್ಲ, ರಸ್ತೆ ಚೆನ್ನಾಗಿರುವುದಿಲ್ಲ, ವಾಹನ ಸೌಕರ್ಯ ಗಳಿಲ್ಲ; ನಡೆದುಕೊಂಡು ಹೋಗಬೇಕಾಗುತ್ತದೆ. ಹವ್ಯಾಸಿ ಕಲಾವಿದರಿಗೆ ತಮ್ಮ ನಾಟಕದ ಚಿಂತೆ. ಇವರಿಗೂ ಅವರ ನಾಟಕ ಯಶಸ್ವಿಗೊಳಿಸುವ ಜವಾಬ್ದಾರಿ ಯಿರುತ್ತದೆ. ಹೀಗಾಗಿ ಊಟ–ಉಪಚಾರ–ವಿಶ್ರಾಂತಿಗಳಿಗೆ ಅವಕಾಶವಾಗುವುದಿಲ್ಲ, ಇದರಿಂದಾಗಿ ಸ್ತ್ರೀ ಸಹಜ ದೈಹಿಕ ಕ್ರಿಯೆಗಳಿಗೆ ಅಡೆ ತಡೆಯುಂಟಾಗಿ ಅನಾರೋಗ್ಯ ವುಂಟಾಗುವುದು ಸಹಜವಾಗಿರುತ್ತದೆ. ಈಗ ಇರುವಷ್ಟು ಅನುಕೂಲಗಳು ಆಗ ನಟಿಯರಿಗೆ ಇರಲಿಲ್ಲ, ಇದರಿಂದಾಗಿ ರೆಹಮಾನವ್ವ ದೊಡ್ಡವರಾಗುತ್ತಾರೆ.

ಸುಭದ್ರಮ್ಮ ಮನಸೂರರು ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಮ್ಮನಾಗಿ ಚಿಕ್ಕೇನಕೊಪ್ಪದ ಮೌನ ತಪಸ್ವಿ ಶ್ರೀ ಚೆನ್ನವೀರಶರಣರ ನಾಟಕ ತಂಡದಲ್ಲಿ ಅಭಿನಯಿಸಿದ್ದಾರೆ. ಅದರಂತೆ ಅವರ ಇನ್ನೊಂದು ಪ್ರಸಿದ್ಧ ನಾಟಕ ರಕ್ತ ರಾತ್ರಿಯ ದ್ರೌಪದಿ, ಕುರುಕ್ಷೇತ್ರ, ಚಿತ್ರಾಂಗದಾ ಹಾಗೂ ಅಕ್ಷಯಾಂಬರಗಳಂತೂ ಅವರಿಗೆ ಮನೆ ಮಾತು. ರೆಹಮಾನವ್ವ ಕಲ್ಮನಿಯವರ ಚಿತ್ರಾಂಗದಾ ನಾಟಕದ ಅಭಿನಯವನ್ನು ಅನುಕರಿಸಿ, ಅನುಸರಿಸಿ, ಪ್ರಸಿದ್ಧ ರಂಗ ಅಭಿನೇತ್ರಿ ಜುಬೇದಾಬಾಯಿ ಪಾತ್ರ ಮಾಡಿರುವುದನ್ನು ರಂಗಭೂಮಿ ಆಸಕ್ತರು ಬಲ್ಲರು. ಎಚ್. ಟಿ. ಅರಸರು ಇದನ್ನು ಪುಷ್ಟೀಕರಿಸುತ್ತಾರೆ. ರೆಹಮಾನ್ ಜಾನ್, ಸುಭದ್ರಮ್ಮ ಮುಂತಾದ ಪೌರಾಣಿಕ ನಾಟಕಗಳ ಪಾತ್ರ ಧಾರಿಗಳು ''ಕಂದಗಲ್ಲ ಹನುಮಂತರಾಯರ ನಾಟಕಗಳು ನಮ್ಮ ವಿದ್ಯಾ ಶಾಲೆಗಳಾಗಿವೆ; ಸಂಗೀತ ಹಾಗೂ ನಾಟಕ ನಿರ್ದೇಶಕರು ನಮ್ಮನ್ನು ತಿದ್ದಿ ತೀಡಿದ ಗುರುಗಳು'' ಎಂದು ಪ್ರಾಂಜಲ ಮನಸಿನಿಂದ ಒಪ್ಪಿಕೊಳ್ಳುತ್ತಾರೆ.

## ತೊಗಲು ಗೊಂಬೆ ಅಂತರ್ರಾಷ್ಟ್ರೀಯ ಖ್ಯಾತಿಯ ಬೆಳಗಲ್ ವೀರಣ್ಣನವರೊಂದಿಗೆ

ಬೆಳಗಲ್ ವೀರಣ್ಣನವರು ಅಂತರ್ರಾಷ್ಟ್ರೀಯ ತೊಗಲು ಗೊಂಬೆಯಾಟಗಳ ಖ್ಯಾತ ಪ್ರದರ್ಶಕರು. ವಿದೇಶಕ್ಕೂ ಹೋಗಿ ಬಂದಿದ್ದಾರೆ. ತೊಗಲು ಗೊಂಬೆಯಾಟಕ್ಕೆ ಬರುವ ಪೂರ್ವದಲ್ಲಿ ಅವರೊಬ್ಬ ರಂಗಭೂಮಿಯ ಶ್ರೇಷ್ಠ ನಟರು. ಅವರೊಡನೆ ರೆಹಮಾನವ್ವ ಕಲ್ಮನಿ ಹಿರಿಯ ಮಗ ಬಾಬಣ್ಣ ಹಾಗೂ ಲಲಿತಮ್ಮ ಕಲ್ಮನಿಯವರ ಬಗ್ಗೆ ನೆನಪು ತೆಗೆದಾಗ ''ಕುಕನೂರು ಕಲ್ಮನಿ ಮನೆತನ ರಂಗ ಕಲಾವಿದರ ಮೆನತನ'' ವೆಂದರು. ವೀರಣ್ಣ ಬೆಳಗಲ್ಲರು, ರಂಗಭೂಮಿಗೆ ಬಂದಾಗ ರೆಹಮಾನವ್ವನವರು ಆಗಲೇ ರಂಗದಿಂದ ಹಿಂದೆ ಸರಿದಿದ್ದರು. ಬಾಬಣ್ಣ ಹಾಗೂ ಲಲಿತಮ್ಮ ಅವರ ಮಕ್ಕಳು ಮಾಡದ ಪಾತ್ರಗಳಿಲ್ಲ, ಆಡದ ನಾಟಕಗಳಿಲ್ಲ. ಬಳ್ಳಾರಿ ಹಾಗೂ ಸುತ್ತಲಿನ ಊರುಗಳಲ್ಲಿ ಕೆಲವೊಂದು ವರ್ಷ ಬಾಬಣ್ಣ ಹಾಗೂ ಲಲಿತಮ್ಮ ಈ ಪ್ರದೇಶದಲ್ಲಿ ಮನೆ ಮಾತಾಗಿದ್ದರೆಂದು ತಿಳಿಸಿದರು. ೧೯೭೦ ರ ದಶಕ ಅಣ್ಣ – ತಂಗಿ ನಾಟಕ ಮೊಹನಚಂದ್ ಕೀರಣಗಿಯವರದು. ಇದರಲ್ಲಿ ವೀರಣ್ಣನವರು ಬಳೆ ಮಾರುವ ಕಾಶೀಮನ ಹಾಸ್ಯ ಪಾತ್ರ ವಹಿಸುತ್ತಿದ್ದರು. ಅವನದು ಉರ್ದು ಮಿಶ್ರಿತ ಸಾಬರ ಭಾಷೆ. ವೀರಣ್ಣನವರು ಟಿಪ್ಪುಸುಲ್ತಾನದಲ್ಲಿ ಮೀರ್ ಸಾದಕ್‌ನಾಗಿ, ತಿರುಮಲನಾಗಿ ಪಾತ್ರ ನಿರ್ವಹಿಸಿದವರು. ವಿಶೇಷವಾಗಿ ಆಗಿನ ರಂಗ ನಿರ್ದೇಶಕ ಸಿಡಿಗಿನ ಮಳಿ ಚಂದ್ರ ಶೇಖರಯ್ಯನವರು . ಇವರ ಗುರುಗಳು. ಪ್ರಸಿದ್ಧ ಹಾಸ್ಯ ಹಾಗೂ ವಿಲನ್ ನಟ ಶಾಂತಕುಮಾರರ ಮೀರ್‌ಸಾದಕ್ ಮತ್ತು ತಿರುಮಲನ ಪಾತ್ರಗಳನ್ನು ಕಂಡವರು, ಅವರಿಂದ ತರಬೇತಾದವರು. ಬೆಳಗಲ್ ವೀರಣ್ಣ, ಲಲಿತಮ್ಮ ಬಳೆಗಾರ ಕಾಶೀಂ ಹಾಗೂ ಗೌರೀ ಪಾತ್ರದಲ್ಲಿ ಅಭಿನಯಿಸಿ, ಪ್ರೇಕ್ಷಕರನ್ನು ನಕ್ಕು ನಗಿಸುತ್ತಿದ್ದರು. ಗೌರೀ ಅಕ್ಕ ಗಂಗಾನ ಪಾತ್ರದಲ್ಲಿ ಸುಭದ್ರಮ್ಮ ''ಗೌರೀ ಗೌರೀ ಸಾವಕಾರ ಹೊಲಕ್ಕೆ ಕೆಲಸಕ್ಕೆ ಹೋಗಬೇಕು ಬೇಗ ಬಾ'' ಎಂದು ಪರದೆಯ ಹಿಂದೆ ನಿಂತು ಕೂಗುತ್ತಾಳೆ. ''ಕಾಶೀಮಾ ನಮ್ದು ಅಕ್ಕಾ ಕರೀತಾಳ ಹೋಗಬೇಕು'' ಎಂದ ಕಾತರಿಸುತ್ತಾಳೆ. ಆಗ ಕಾಶೀಂ ''ನಿಮ್ದು ಅಕ್ಕಾ ಐತಿ ಆಕೆಗೂ ಬಳಿ ತೋಡಿಸ್ತೀನಿ'' ಈ ಎರಡೂ ಸಂಭಾಷಣೆಗಳನ್ನು ಲಲಿತಮ್ಮ ಅಲ್ಲಿಯೇ ಹುಟ್ಟಿಸಿ ತಮ್ಮ ಕಲಾ ಪ್ರತಿಭೆ ಮೆರೆಯಿಸುತ್ತಿದ್ದಳಂತೆ. ಲಲಿತಮ್ಮ ಪ್ರತಿಭಾವಂತ ನಟಿಯಾಗಿದ್ದಳು.

ಶಿಕ್ಷಣ ಇಲಾಖೆಯ ನಿವೃತ್ತ ಗುಮಾಸ್ತರಾಗಿದ್ದ ಬಳ್ಳಾರಿಯ ಕೆ. ಜಂಬುನಾಥರು ರಂಗನಟರು. ತಾವು ಕೊಪ್ಪಳದಲ್ಲಿ ಸರಕಾರಿ ಸೇವೆಯಲ್ಲಿದ್ದಾಗ ಕೊಪ್ಪಳ ಜಾತ್ರೆಯಲ್ಲಿ ನಾಟಕಗಳನ್ನು ರೆಹಮಾನವ್ವಕಲ್ಮನಿ ಪ್ರಯೋಗಿಸುತ್ತಿದ್ದು ದನ್ನು ನೆನಪಿಸಿದರು. ಹೇಮರೆಡ್ಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ ಚಿತ್ರಾಂಗದಾ ಅವರ ಪೇಟೆಂಟ್ ನಾಟಕಗಳು. ಬಡತನ ಭೂತ, ತಾಯಿ ಕರುಳು, ಸ್ತ್ರೀ ರತ್ನ ಹಾಗೂ ಸಹೋದರಿ ನಾಟಕಗಳಿಗೆ ಜನರು ಮುಗಿ ಬಿದ್ದು ನೋಡುತ್ತಿದ್ದರು. ಕೇವಲ ಕೊಪ್ಪಳಕ್ಕೆ ಮಾತ್ರವಲ್ಲ ಬಳ್ಳಾರಿ ರಾಘವ ಕಲಾ ಮಂದಿರದಲ್ಲಿ ತುಂಬಿದ ಪ್ರೇಕ್ಷಾಗೃಹಗಳಿಂದ ಇವರ ನಾಟಕಗಳು ಅಭಿನಯಿಸಲ್ಪಡುತ್ತಿದ್ದವು. ನಾವೂ ಆಗ ನಾಟಕಗಳಲ್ಲಿ ಅಭಿನಯಿಸುತ್ತಿದ್ದೆವು. ಇವರ ನಾಟಕಗಳಿಂದ ಬಹಳಷ್ಟು ಕಲಿತೆವು. ಬಳ್ಳಾರಿ ಹತ್ತಿರವಷ್ಟೇ ಅಲ್ಲ ಹಗರಿಬೊಮ್ಮನಳ್ಳಿ, ತಂಬ್ರಳ್ಳಿ, ಹಂಪಸಾಗರ, ಹಡಗಲಿ, ಮೈಲಾರದವರೆಗೆ ಇವರ ಕಂಪನಿ ನಾಟಕಗಳು ಪ್ರಯೋಗಗೊಂಡಿವೆ. ಹವ್ಯಾಸಿ ನಾಟಕಗಳಿಗೂ ಬಂದು ಅಭಿನಯಿಸಿ ಹೆಸರು ಪಡೆದವರು ಎಂದರು.

## ಉರ್ದು ನೆಲದಲ್ಲಿ ಕನ್ನಡ ನಾಟಕ ಕಂಪನಿ

ರಂಗವಿಮರ್ಶಕ ಗುಡಿಹಳ್ಳಿ ನಾಗರಾಜರು ೨೦೦೯ ರ ಫೆಬ್ರುವರಿ ೫ ರಂದು ಚಿತ್ರದುರ್ಗದ ೭೫ನೆಯ ಅ. ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ಹಾಗೂ ಅದೇ ಚಿತ್ರದುರ್ಗದ ಬಂಡಾಯ ಸಾಹಿತ್ಯ 'ಮೂವತ್ತು ವರುಷ' ಸಮಾವೇಶ (ಸೆಪ್ಟೆಂಬರ್ ೧೯, ೨೦೧೦) ದ ವೇದಿಕೆಗಳಲ್ಲಿ ಸಮೂಹ ಮಾಧ್ಯಮಗಳು ಹಾಗೂ ರಂಗಭೂಮಿ ಕುರಿತು ಮಾತನಾಡುವಾಗ ''ಉರ್ದು ಪ್ರಭಾವವಿರುವ ಹೈದರಾಬಾದ ಕರ್ನಾಟಕದಲ್ಲಿ ರೆಹಮಾನವ್ವ ಕಲ್ಮನಿ ಎಂಬ ರಂಗಭೂಮಿ ಅಭಿನೇತ್ರಿ ನಾಟಕ ಕಂಪನಿ ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭಿಸುತ್ತಾಳೆಂಬುದು ಅಭಿಮಾನದ ಸಂಗತಿ'' ಯೆಂದು ಹೇಳಿದರು. ಕರ್ನಾಟಕದ ವೃತ್ತಿರಂಗಭೂಮಿ ಚರಿತ್ರೆಯ ಆರಂಭ ಕಾಲದಲ್ಲಿ ಯಲ್ಲವ್ವ ಗುಳೇದಗುಡ್ಡ, ಮಗಳು ಗಂಗೂಬಾಯಿ ಗುಳೇದಗುಡ್ಡರು ನಾಟಕ ಕಂಪನಿ ಆರಂಭಿಸಿದ್ದಿದೆ. ಲಕ್ಷ್ಮೇಶ್ವರದ ಬಚ್ಚಾಸಾನಿ, ಬ್ಯಾಡಗಿ ಸಾವಿತ್ರವ್ವ, ಕಲಾಕಿನ್ನರ ಡಿ. ದುರ್ಗಾದಾಸರ ಅಕ್ಕ ಸಂಜೀವಮ್ಮ ಹನುಮಂತೆವ್ವ ಮುಂತಾದವರು ನಾಟಕ ಕಂಪನಿ ಮಾಡಿದ್ದಾರೆ. ಯಶಸ್ವಿಯಾಗಿ ನಾಟಕ ಕಂಪನಿ ನಡೆಸಿದ್ದಾರೆ. ನಮ್ಮ ಕಣ್ಣ ಎದುರಿಗೆ ಕೆ.ಬಿ. ಆರ್. ಡ್ರಾಮಾ ಕಂಪನಿಯನ್ನು ಮರಾಠಿಗರ ದರ್ಪ ದೌರ್ಜನ್ಯಗಳನ್ನೆದುರಿಸಿ ಪದ್ಮಶ್ರೀ ಚಿಂದೋಡಿ ಲೀಲಾರು ಬೆಳಗಾವಿಯಲ್ಲಿ ಸ್ವಂತ ಥೇಟರ್ ಕಟ್ಟಿಸಿ ಪ್ರತಿಷ್ಠಾಪಿಸಿದರು.

ರೆಹಮಾನ್‌ಬಿ ರೆಹಮಾನ್ ಜಾಣರಾಗಿ ತಳಕಲ್ಲ ವೆಂಕರೆಡ್ಡಿ ಕಂಪನಿಯಿಂದ ಪತಿ ನಂದಕುಮಾರ್ ಮೇವುಂಡಿಯವರೊಂದಿಗೆ ಹೊರಬಿದ್ದ ಮೇಲೆ, ಪತಿಯ ಪ್ರೋತ್ಸಾಹ ಹಾಗೂ ಚಿಕ್ಕೇನಕೊಪ್ಪದ ಕಲಾ ಪ್ರೇಮಿಗಳ ಆಶ್ರಯದಲ್ಲಿ 'ಶಿವಯೋಗಿ ಸಿದ್ಧರಾಮ' ನಾಟಕವಾಡಲು ಸ್ಥಳೀಯ ಹವ್ಯಾಸಿ ನಾಟಕ ಕಲಾ ತಂಡ ಕಟ್ಟುತ್ತಾಳೆ. ಸೊಲ್ಲಾಪುರದವರೆಗೆ ಹೋಗಿ ನಾಟಕ ಪ್ರಯೋಗಿಸುತ್ತಾಳೆ. ೧೯೩೮ ರಲ್ಲಿ ಕುಕನೂರಿನವರಾದ ಆ ಕಾಲದ ಮೇರು ನಟ ಸಂಗೀತಗಾರ ಸಂಗನಬಸಪ್ಪ ಮಟ್ಟಿ ಭರತ ಕಲಾ ನಾಟ್ಯ ಸಂಗೀತ ಮಂಡಳಿ ಆರಂಭಿಸಿದಾಗ ಅವರು ಹಿರಣ್ಯ ಕಶ್ಯಪು, ಇವರು ಖಯಾದು ಆಗಿ ಅಭಿನಯಿಸುತ್ತಾರೆ. ಆ ಕಂಪನಿ ಒಂದೂವರೆ ವರ್ಷ ನಡೆದು ನಿಂತ ಮೇಲೆ, ತನ್ನ ಅಭಿನಯದ ಕಲಾ ಚೈತ್ರ ಯಾತ್ರೆಗೆ ಹೊರಡುತ್ತಾಳೆ. ಗೋಕಾಕ ಶಾರದಾ ಸಂಗೀತ ನಾಟಕ ಮಂಡಳಿ, ಹಾಗೂ ಏಣ್ಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘ, ಹಂದಿಗನೂರು ಸಿದ್ಧರಾಮಪ್ಪನವರ ವಿಶ್ವ ಕಲಾ ರಂಜನಿ ನಾಟಕ ಮಂಡಳಿಗಳಲ್ಲಿ ಖಾಯಂ ನಟಿಯಾಗಿ ಪತಿ ಮೇವುಂಡಿ ನಂದರಾಜ, ಮಕ್ಕಳಾದ ಬಾಬಣ್ಣ, ಲಲಿತಮ್ಮರನ್ನು ಕರೆದುಕೊಂಡು ಅಭಿನಯಿಸುತ್ತಾಳೆ. ಆಕೆ ಮಾಡದ ಪಾತ್ರಗಳಿಲ್ಲ, ಪೌರಾಣಿಕ, ಐತಿಹಾಸಿಕ, ಭಕ್ತಿರಸ ಪ್ರಧಾನ ಹಾಗೂ ಸಾಮಾಜಿಕ ನಾಟಕಗಳಲ್ಲಿ ತನ್ನ ಪ್ರಬುದ್ಧ ಅಭಿನಯದಿಂದ ಆ ಕಾಲದ ಮಹತ್ವದ ಅಭಿನೇತ್ರಿಯಾಗಿ ಹೆಸರು ಪಡೆಯುತ್ತಾಳೆ.

ಭಾರತೀಯ ಸಮಾಜದಲ್ಲಿ ಹೆಣ್ಣು ಮಗಳಾಗಿ ಹುಟ್ಟುವುದೇ ಒಂದು ಶಾಪ. ಬಾಲ್ಯದಲ್ಲಿ ತಂದೆ, ವಯಸ್ಸಿನಲ್ಲಿ ಪತಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿ ಕಳೆಯಬೇಕೆಂಬ ಮನುವಿನ ಶಿಷ್ಟಾಚಾರದ ಸೂತ್ರಗಳಲ್ಲಿ ಹೆಡಮುರಿಗಿ ಕಟ್ಟಿಸಿಕೊಂಡಿದ್ದಾಳೆ. ಮೇಲಿನ ಜಾತಿ ವರ್ಗಗಳಲ್ಲಿ, ಶ್ರೀಮಂತರಲ್ಲಿ ಆ ಸಮಸ್ಯೆ ಬರುವುದಿಲ್ಲ, ಬಡವರು, ಮಧ್ಯಮ ವರ್ಗದವರು ಅದರಲ್ಲೂ ಅಸ್ಪೃಶ್ಯರು, ದಲಿತರು, ಕೆಳವರ್ಗದವರು ಆದರಂತೂ ಅಲ್ಲಿಯ ಪುರುಷ ವರ್ಗವನ್ನೇ ಬಿಟ್ಟಿಯಾಗಿ ದುಡಿಸಿಕೊಂಡವರು ಶೋಷಿಸಿದವರು, ಮಹಿಳೆಯನ್ನು ಬೇಕಾಬಿಟ್ಟಿಯಾಗಿ ಬಳಸಿಕೊಂಡು ಶೋಷಣೆ ಮಾಡಿರುವುದರ ಇತಿಹಾಸವನ್ನೇ ಕಂಡಿದ್ದೇವೆ. ಹುಲಿ, ಸಿಂಹ, ಕರಡಿ, ತೋಳಗಳನ್ನು ಬಲಿಕೊಡುವುದಿಲ್ಲ; ಬಲಿ ಕೊಡುವುದು ಸಾಧು ಪ್ರಾಣಿಗಳಾದ ಕುರಿ–ಕೋಳಿ–ಕೋಣಗಳನ್ನು. ಹಾಗೆಯೇ ಯಾರ ರಕ್ಷಣೆ ಇಲ್ಲದ ಬಡ ದಲಿತರು 'ಹಿಂದುಳಿದವರನ್ನು ದೇವದಾಸಿಯಂಥ ಪಾಪ ಕೂಪಕ್ಕೆ, ಬೆತ್ತಲೆ ಸೇವೆಯಂಥ ಅಸಹ್ಯ ಪದ್ಧತಿಗೆ, ಜೋಗತಿಯ ರಾಗುವುದಕ್ಕೆ ಬಲಿಕೊಡುತ್ತಾರೆ. ಇದೊಂದು ನೋವಿನ ಅಮಾನವೀಯ ಸಂಗತಿ.

ಇತ್ತಿತ್ತಲಾಗಿ ಸ್ವಾಭಿಮಾನ ಬಾಬಾ ಸಾಹೇಬ ಅಂಬೇಡ್ಕರ ವಿಚಾರದಿಂದಾಗಿ ಮೂಡುತ್ತಿದೆ.

ಇಂಥ ಕಟ್ಟುಪಾಡುಗಳ ಸಪ್ತ ಸಮುದ್ರಗಳನ್ನು, ಬೆಂಕಿಯ ಹೊಳೆಗಳನ್ನು ಅಗ್ನಿದಿವ್ಯಗಳನ್ನು ಹಾದು, ಈಜಿ ರೆಹಮಾನವ್ವ ಕಲ್ಮನಿ ಒಂದು ದಡ ತಲುಪುತ್ತಾಳೆ. ಸ್ಥಳೀಯ ಕಲಾವಿದರನ್ನು ಕಟ್ಟಿಕೊಂಡು, ಕುಕನೂರಿನ ಶಕ್ತಿ ದೇವತೆ–ಮಹಾಮಾಯೆಯ ಹೆಸರಿನಲ್ಲಿ ೧೯೪೨ರಲ್ಲಿ 'ಮಹಾಮಾಯೆ ನಾಟ್ಯ ಸಂಘ. ಆರಂಭಿಸುತ್ತಾಳೆ. ಆಗಿನ ಸಮಾಜದ ಬೇಡಿಕೆಯಂತೆ ಅದೇ ಹೇಮರೆಡ್ಡಿ ಮಲ್ಲಮ್ಮ, ನೆಲ್ಲೂರು ನಂಬೆಕ್ಕ, ರಾಜಾ ಭರ್ತೃಹರಿ ಅರ್ಥಾತ್ ಪ್ರಪಂಚ ಪರೀಕ್ಷೆಯಂಥ ನಾಟಕಗಳನ್ನು ಅಭಿನಯಿಸುತ್ತಾರೆ. ರೆಹಮಾನವ್ವನವರಿಗೆ ಒಂದು ಸಾದಾ ರಂಗ ಸಜ್ಜಿಕೆ ಸಿಕ್ಕರೆ ಸಾಕು, ಸಹ ನಟ ನಟಿಯರೊಂದಿಗೆ ತಮ್ಮ ಅಭಿನಯ ಸಾಮರ್ಥ್ಯ, ಕಂಚಿನ ಕಂಠದ ಬಲದಿಂದ ನಾಟಕಗಳನ್ನು ಯಶಸ್ವಿಗೊಳಿಸಿಬಿಡುತ್ತಿದ್ದಳು. ಲಂಕಾದಹನ, ಸಂಪೂರ್ಣ ರಾಮಾಯಣಗಳನ್ನು ಕಡಿಮೆ ಖರ್ಚಿನಲ್ಲಿ ಸ್ಥಳೀಯ ರಂಗ ಪರಿಕರಗಳಿಂದ ಅಭಿನಯಿಸುತ್ತಿದ್ದಳು. ಮಹಾಮಾಯಾ ನಾಟ್ಯ ಸಂಘ ಮುಚ್ಚಿತು. ೨೧–೦೪–೧೯೪೨ರಂದು ಶ್ರೀ ಲಲಿತ ಕಲಾ ನಾಟ್ಯ ಸಂಘವನ್ನು ಮಾರುತೇಶ ಮಾಂಡ್ರೆಯವರ 'ಸ್ತ್ರೀ ರತ್ನ' ನಾಟಕದಿಂದ ಆರಂಭಿಸಿದಳು. ಜೂಜಿನಾಟ, ಓಸಿಯ ಕೆಡಕನ್ನು ಕುರಿತ ನಾಟಕ. ಶೋಭಾ ಗೃಹಿಣಿ ಗಂಡ ರಾಜಶೇಖರ ಸುರೇಶನಂಥ ದುಷ್ಟ ಗೆಳೆಯನ ಸಹವಾಸದಿಂದ ಪುಷ್ಪಾಳಂಥ ವೇಶ್ಯೆಯ ಸಂಗದಿಂದ, ಸುರಾಪಾನ, ಓಸಿ, ಜೂಜಿನಾಟ, ಒಡಹುಟ್ಟಿದ ಜಾಣ ಸೋದರ ಕಾಲೇಜು ವಿದ್ಯಾರ್ಥಿ ಆನಂದನ ಕೊಲೆ ಸಂಚು, ಬಸವಂತ ಬಸವಂತಿಯರ ಹಾಸ್ಯಗಳಿಂದ ನಾಟಕ ಗಮನ ಸೆಳೆಯುತ್ತದೆ. ಆದರ್ಶಸತಿಯಾಗಿ ಶೋಭಾ ಕುರುಡು ಗಂಡನನ್ನು ರಕ್ಷಿಸುತ್ತಾಳೆ. ಶೋಭಾನ ಪಾತ್ರದಲ್ಲಿ ರೆಹಮಾನ್ವ ಆದರ್ಶ ಗೃಹಿಣಿಯಾಗಿ ಪ್ರೇಕ್ಷಕರ ಮನ ಗೆಲ್ಲುತ್ತಾಳೆ. ಒಂದು ತಿಂಗಳ ಕಾಲ ಕುಕನೂರಿನಲ್ಲಿ ರಂಗ ಪ್ರಯೋಗ ಕಂಡಿತು. ಮುಂದೆ ಇದೇ ನಾಟಕ ರಾಜೂರದಲ್ಲಿ ಜನರ ಒತ್ತಾಯದ ಮೇರೆಗೆ ಪ್ರಯೋಗ ಕಂಡಿತು.

ನಾಟಕದ ಸಾಮಾನುಗಳನ್ನು ಖರೀದಿಸಲು ಆ ಕಾಲಕ್ಕೆ ೩೫ ಸಾವಿರ ರೂಪಾಯಿ ಹಿಡಿಯಿತು. ತನ್ನ ಸ್ವಂತ ಮನೆಯನ್ನು ಕುಕನೂರಿನ ಸಾಳೇರ ರಂಗಪ್ಪನಿಗೆ ಒತ್ತಿ ಬರೆದುಕೊಟ್ಟು ಹಣ ಪಡೆದಳು. ಅನಂತರ ಹಣ ಸಂಪಾದನೆಯಾದ ಮೇಲೆ ಬಿಡಿಸಿಕೊಂಡಳು. ಕಂಪನಿ ಕಟ್ಟುವುದು ಕಷ್ಟದ ಕೆಲಸ. ಖ್ಯಾತ ನಾಟಕಕಾರ ಎಚ್. ಟಿ. ಮಹಾಂತೇಶ ಶಾಸ್ತ್ರಿಗಳಿಂದ ನಾಲ್ಕಾಣೆಗೆ

ಒಂದರಂತೆ ಬಾಡಿಗೆ ನಿಗದಿಪಡಿಸಿ, ಖುರ್ಚಿ ತಂದಿದ್ದಳು. ಹಣ ಕೊಡದಿದ್ದಾಗ ಕೋರ್ಟ್ ನೋಟಿಸು ಕೊಡಿಸಿ, ಹಣ ಹಾಗೂ ಖುರ್ಚಿಗಳನ್ನು ವಾಪಸ್ಸು ಪಡೆದರು. ಬಟ್ಟೆಯ ಟೆಂಟಿನೊಂದಿಗೆ ನಾಟಕ ಕಂಪನಿ ಆರಂಭಗೊಂಡು ಮುಂದೆ ಈಚಲು ತಟ್ಟಿ ತದನಂತರ ಬಿದಿರು ತಟ್ಟಿಗಳನ್ನು ಬಳ್ಳಾರಿ ಹತ್ತಿರದ ಹಯ್ಯಾಳ್ ಜಾತ್ರೆ ಕ್ಯಾಂಪಿನಲ್ಲಿ ಹೊಂದಿತು. ಹಣ ಸಂಪಾದನೆ ಆದಂತೆ ತಗಡು ಖರೀದಿಸಿ, ಥೇಟರ್‌ಗೆ ಬಳಸಹತ್ತಿದರು. ಆರಂಭದ ದಿಸೆಯಲ್ಲಿ ಕಂಪನಿ ಹೊಂದಿದ್ದ ಆಸ್ತಿ ಕುರಿತು ಪಿಎಚ್. ಡಿ. ಪ್ರಬಂಧಕಾರ ಡಾ. ಮಲ್ಲಿಕಾರ್ಜುನ ಕುಂಬಾರರು ''ಎರಡು ಫ್ರೇಮಿನ ಥೇಟರದಲ್ಲಿ ಸುಮಾರು ೨೨–೨೩ ಜನ ಪಾತ್ರಧಾರಿಗಳಿದ್ದರು. ಅವರೇ ಕಂಪನಿಯ ಇತರ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ನಂತರ ಕಂಪನಿ ಎತ್ತರದ ಸ್ಥಿತಿಗೇರಿದಾಗ ಈ ಸಂಖ್ಯೆ ೭೦–ಅಂಕ್ಕೇರಿತು. ಬೆಳಕಿಗಾಗಿ ೬ ಗ್ಯಾಸುಗಳಿದ್ದವು. ಗ್ಯಾಸ್ ವ್ಯವಸ್ಥೆಯನ್ನು ಪರದೆ ಎಳೆಯುವ ನಾಗಪ್ಪ ನೋಡಿಕೊಳ್ಳುತ್ತಿದ್ದ. ನಂತರದಲ್ಲಿ ಗ್ಯಾಸುಗಳ ಜಾಗೆಗೆ ಪೆಟ್ರೊಮ್ಯಾಕ್ಸ್ ಬಂದವು. ನಂತರ ೩ ಕಿಲೋವ್ಯಾಟ್ ಸಾಮರ್ಥ್ಯದ ಡೈನಮೋ ತರಿಸಲಾಯಿತು. ಕಾಲ ಕಳೆದಂತೆ ನಾಲ್ಕು ಎಂಜಿನ್ ತರಿಸಲಾಯಿತು. ಉಸ್ತುವಾರಿ ರಜಾಕ್ ಮೇಸ್ತ್ರಿ ನೋಡಿಕೊಳ್ಳುತ್ತಿದ್ದ. ಕೆಲವೊಮ್ಮೆ ಡೈನಮೋ ಕೆಟ್ಟು ಪ್ರೇಕ್ಷಕರು ಗಲಾಟೆ ಗದ್ದಲ ಮಾಡುತ್ತಿದ್ದರು. ಆಗ ಸಿಟ್ಟಿಗೆದ್ದ ರೆಹಮಾನವ್ವ ರಜಾಕ್ ಮೇಸ್ತ್ರಿಯನ್ನು ದಂಡಿಸುತ್ತಿದ್ದಳು'' ಎಂಬ ಅಲಭ್ಯ ಮಾಹಿತಿಯನ್ನು ಕಲೆಹಾಕಿದ್ದಾರೆ. ಮುಂದಿನ ಮಾಹಿತಿಯನ್ನು ಯಥಾವತ್ತಾಗಿ ಆ ಮಹಾ ಪ್ರಬಂಧದಿಂದ ಉದ್ಧರಿಸಿದ್ದೇನೆ: ಅಳವಂಡಿ ಕ್ಯಾಂಪ್‌ನಲ್ಲಿ ಡೈನಮೊದಿಂದ ಲೈಟುಗಳ ಬಳಕೆ ಆರಂಭಗೊಂಡಿತು. 'ಲಂಕಾ ದಹನ 'ನಾಟಕ ಆಡಲಾಗುತ್ತಿತ್ತು. ಜನರು ಲೈಟುಗಳನ್ನು ಗಾಬರಿಯಿಂದ ನೋಡುತ್ತ ಈ ದೀಪಕ್ಕೆ ಎಣ್ಣೆ ಎಲ್ಲಿಂದ ಬರುತ್ತದೆ? ಎಂದು ಕುತೂಹಲದಿಂದ ಕಂಪನಿಯವರಿಗೆ ಕೇಳುತ್ತಿದ್ದರು. ಡ್ರೈಸೆಲ್ಲುಗಳಿಂದ ಮೈಕ್ ಹಚ್ಚುತ್ತಿದ್ದರು. ರೆಕಾರ್ಡ ಪ್ಲೇಯರ್ (ಗ್ರಾಮ್ ಫೋನ್)ಗಳು ಚಾಲ್ತಿಯಲ್ಲಿದ್ದವು. ನಾಟಕಗಳ ಪ್ರಚಾರ ಮಾಡುವಾಗ ಮೊದ ಮೊದಲು ಬಂಡಿಯಲ್ಲಿ ಬೋಂಗಾದಿಂದ ಒದರುತ್ತ ಚರ್ಮದ ಹಲಗೆ ಬಡಿಯುತ್ತ ಪ್ರಚಾರ ಮಾಡುತ್ತಿದ್ದರು. ನಂತರ ಪ್ರಚಾರಕ್ಕಾಗಿ ಎಂಪ್ಲಿಫಾಯರ್‌ಗಳು ಬಂದಾಗಲೂ ಜನರು ಕುತೂಹಲದಿಂದ ನೋಡುತ್ತಿದ್ದರು. ನಾಟಕಗಳ ಪ್ರಚಾರ ಮಾಡಲು ನಂತರ ೨ ಕಾರುಗಳು ಕಂಪನಿಗೆ ಸೇರಿದವು. ಅದರಲ್ಲಿ ಹ್ಯಾಂಡ್ ಬಿಲ್ (ಕರಪತ್ರ) ತೂರುತ್ತ ಹಳ್ಳಿಗಳಲ್ಲಿ ನಾಟಕ ಪ್ರಚಾರ ಮಾಡುತ್ತಿದ್ದರು. ಮೊದಮೊದಲು ಕಂಪನಿಯ ಸಾಮಾನು–ಸರಂಜಾಮು ಕ್ಯಾಂಪ್‌ದಿಂದ ಕ್ಯಾಂಪಿಗೆ ಎತ್ತಿನ ಬಂಡಿಗಳ ಮೂಲಕ ಸಾಗಿಸಲಾಗುತ್ತಿತ್ತು.

ಹಚ್ಚಿಕೊಂಡ ಬಣ್ಣದ ಪಾತ್ರೆಯಲ್ಲಿ ನಟಿ ಮುರಗೋಡ ರೇಣುಕಮ್ಮ ಹಾಕಿದ ಮೊಸರು ನೀಲಿಯಾಯಿತು. ಅದನ್ನು ಯಲಿವಾಳ ಸಿದ್ಧಯ್ಯನವರಿಗೆ ಬಡಿಸಿದಾಗ , ರೆಹಮಾನವ್ವ ಇವರನ್ನು ಕೊಲ್ಲಿಸಲು ವಿಷ ಹಾಕಿದಳೆಂದು ಸುದ್ದಿಯಾಗಿ, ಕೊನೆಗೆ ಅದು ಪಾರ್ಟಿನವರು ಮುಖಕ್ಕೆ ಹಚ್ಚಿಕೊಳ್ಳುವ ಬಣ್ಣವೆಂದು ರೆಹಮಾನವ್ವ ಡಾಕ್ಟರರಿಂದ ಪರೀಕ್ಷಿಸಿ ಸಾಬೀತು ಪಡಿಸಿ ಆರೋಪದಿಂದ ಮುಕ್ತಳಾದಳು.

ಕುಕನೂರು ಹತ್ತಿರದ ರಾಜೂರಿನಲ್ಲಿ ಈ ಕಂಪನಿ ಸ್ತ್ರೀರತ್ನ ನಾಟಕವಾಡುವಾಗ ಸ್ತ್ರೀ ಪಾತ್ರ ಮಾಡುವ ಕುಕನೂರ ದಾವಲವ್ವ ನಾಟಕ ಆರಂಭವಾಗುವವರೆಗೂ ಬರಲಿಲ್ಲ. ಹಿರಿಯ ಮಗ ಬಾಬಣ್ಣನನ್ನು ಕರೆದು, ಆ ಸ್ತ್ರೀ ಪಾತ್ರ ಮಾಡಲು ಬಣ್ಣ ಹಚ್ಚಿಸಿದಳು. ಸ್ತ್ರೀ ಪಾತ್ರವಾದ್ದರಿಂದ ಚೆಂಡು ಇಟ್ಟು ಎದೆಗೆ ಕಟ್ಟಿದರು. ಅದು ಇರಸುಮುರಸಾದ್ದರಿಂದ ಸ್ಟೇಜಿನಿಂದ ಚೆಂಡು ಒಗೆದುಬಿಟ್ಟನು. ಹಾರ್ಮೋನಿಯಂ ಮಾಸ್ತರ ಕಂಠೆಪ್ಪ ಶೆಲೂಡಿಯವರು ಚೆಂಡು ಹುಡುಕಿ ತಂದು ರಮಿಸಿ ತಿಳಿಸಿದ ಮೇಲೆ ಆ ರೀತಿ ಮೇಕಪ್‌ಗೆ ಹೊಂದಿಕೊಂಡನಂತೆ. ಮುಂದೆ ಸ್ತ್ರೀ ಪಾತ್ರಕ್ಕೆ ಪ್ರಸಿದ್ಧಿ ಪಡೆದನು.

ಹೊಸಪೇಟೆಯಲ್ಲಿ ನಾಟಕವಾಡುವಾಗ ಗದಗ ಕಡೆಯ ವ್ಯಕ್ತಿಯೊಬ್ಬನು ಬಂದು ರೆಹಮಾನವ್ವನನ್ನು ಕಡಿದು ಸೇಡು ತೀರಿಸಕೊಳ್ಳುವುದಾಗಿ ಬೆದರಿಕೆಯೊಡ್ಡಿದನು. ಸಹನಟ–ನಟಿಯರು ಹಾಗೂ ಊರಿನ ಹಿರಿಯರು ರಕ್ಷಣೆ ನೀಡಿದರು. ಆಗಿನ್ನೂ ಹದಿಹರೆಯದ ಹವ್ಯಾಸಿ ನಟ–ಶಿಕ್ಷಕ ಪರಮೇಶ್ವರಪ್ಪ (ಹೊಸಪೇಟೆ) ನವರು ಆ ವ್ಯಕ್ತಿಗೆ ಚೆನ್ನಾಗಿ ಬುದ್ಧಿ ಹೇಳಿ ಕಳಿಸಿದರಂತೆ. ಲಾಡ್ ಸಾಹೇಬರು ಇದ್ದ ಹೂವಿನ ಹಡಗಲಿಗೂ ಬಂದು ಇಂತ ಬೆದರಿಕೆ ಹಾಕಿದಾಗ ಅವರೂ ಬುದ್ಧಿ ಹೇಳಿ ಅಪಾಯದಿಂದ ರೆಹಮಾನವ್ವನನ್ನು ಪಾರು ಮಾಡಿದರು. ಸಿಂಗ್ಟಾಲೂರು ಜಾತ್ರೆಯಲ್ಲಿ ನಾಟಕವಿತ್ತು.

ಸ್ತ್ರೀ ಯಳಾದರೂ ಇಂಥ ಗೊಡ್ಡು ಬೆದರಿಕೆಗೆ ಹೆದರುತ್ತಿರಲಿಲ್ಲ . ಬಂದ ಇಂಥ ಪ್ರಸಂಗಗಳನ್ನು ಎದುರಿಸಿದ್ದಾಳೆ. ಗೆದ್ದಿದ್ದಾಳೆ.

ಚಿಂಚೋಳಿ ಕ್ಯಾಂಪಿನಲ್ಲಿ ಕೆಲವು ರೌಡಿಗಳು ಟಿಕೆಟ್ ಪಡೆಯದೆ ನುಗ್ಗಿದಾಗ ಗೇಟಿನಲ್ಲಿದ್ದ ಗೋಕಾಕ ಈರಯ್ಯನ ಸಹಾಯಕ್ಕೆ ರೆಹಮಾನವ್ವ ಧಾವಿಸಿ ಬಂದು ಅವರನ್ನು ಹೊಡೆದಳು. ಪೋಲೀಸರು ಬರುವವರೆಗೆ ಅವರನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿದಳು. ಪೋಲೀಸ ಠಾಣೆಗೆ ಹೋಗಿ, ಚಿಂಚೋಳಿ ಕ್ಯಾಂಪ್ ಮುಗಿಯುವವರೆಗೆ ಥೇಟರಿಗೆ ಏನೇ ಆದರೂ ನಾವು ಜವಾಬ್ದಾರರೆಂದು

ಬರೆಯಿಸಿಕೊಂಡುಬಿಟ್ಟಳು. ಅಲ್ಲಿಂದ ಕಂಪನಿ ಕೀಳುವವರೆಗೂ ಅವರು ಥೇಟರ್ ಕಾಯಬೇಕಾಯಿತು. ರೌಡಿಗಳು ಅಂಜಿ ನಡೆದರು.


ಸುರಪುರದ ಹತ್ತಿರದ ರಂಗಂಪೇಟೆ ಹಾಗೂ ತಿಮ್ಮಾಪುರಗಳಲ್ಲಿ ನಾಟಕದ ಕ್ಯಾಂಪು ಇತ್ತು, ನಾಟಕದ ಟಿಕೆಟ್ಟುಗಳು ಆರಂಭಗೊಳ್ಳುವ ಮೊದಲೇ ಟಿಕೆಟ್‌ಕೊಳ್ಳದೆ ಪ್ರೇಕ್ಷಕರು ಕುಳಿತು ಬಿಟ್ಟಿದ್ದರು. ಸ್ಟೇಜಿನ ಮೇಲೆ ನಿಂತು ಟಿಕೆಟ್ ಪಡೆಯದೆ ಬಂದವರು ಟಿಕೆಟ್ ಪಡೆದು ಬರಬೇಕೆಂದೂ, ಟಿಕೆಟ್ ಪಡೆಯದೆ ಪುಕ್ಕಟೆ ನಾಟಕ ನೋಡುವವರು ತಮ್ಮ ತಂದೆಗೆ ಹುಟ್ಟಿದವರೆಂದು ಬೈದು–ಮೂದಲಿಸಿ, ಥೇಟರಿನಿಂದ ಎಬ್ಬಿಸಿ ಕಳಿಸಿದಳು. ಊರವರನ್ನು ಹಾಗೆ ಬೈದದ್ದರಿಂದ ಮುಂದಿನ ಊರಿಗೆ ಕ್ಯಾಂಪ್ ಮಾಡಬೇಕಾಯಿತು. ಆದರೂ ಆಕೆ ಕ್ಷಮೆ ಕೇಳಲಿಲ್ಲ, ಆ ಊರವರು ನಾಟಕ ಥೇಟರಿಗೆ ಸುತ್ತಲೂ ಕಟ್ಟಿದ ಪರದೆಯನ್ನು ರಿಬ್ಬನ್ನಿನಂತೆ ಹರಿದು ಕಂಪನಿಗೆ ಹಾನಿಮಾಡಿದ್ದರು.

ಅಳವಂಡಿ ಜಾತ್ರೆ ಕ್ಯಾಂಪಿನಲ್ಲಿ ಲಲಿತ ಕಲಾ ನಾಟ್ಯ ಸಂಘದ ಲಂಕಾದಹನ ನಾಟಕ, ಮೇಲಾಗಿ ಡೈನಮೋದಿಂದಾಗ ಲೈಟಿನ ಬೆಳಕು. ಅಂದು ತಮ್ಮ ನಾಟಕದ ಗುರು ಮತ್ತು ಮಾಲೀಕ ವೆಂಕರೆಡ್ಡೆಪ್ಪ ತಳಕಲ್ಲ ಅವರ ದತ್ತು ಪುತ್ರ ನಾಟಕ ಪ್ರೇಕ್ಷಕರಿಲ್ಲದೆ ತತ್ತರಿಸಿ ಹೋದರು. ಮುಂದೆ ಗೊಂಡಬಾಳ ಶಂಕರಮ್ಮನ ಜಾತ್ರೆಯಲ್ಲಿ ಇದೇ ಪರಿಸ್ಥಿತಿಯುಂಟಾಯಿತು. ವೆಂಕರೆಡ್ಡಪ್ಪ ತಡೆದುಕೊಳ್ಳಲಾರದೆ ಥೇಟರಿನಲ್ಲಿ ನುಗ್ಗಿ ರೆಹಮಾನವ್ವನನ್ನು ಹೊಡೆದು ಸಿಟ್ಟು ತೀರಿಸಿಕೊಂಡರು. ಏನೂ ಪ್ರತಿಕ್ರಿಯಿಸಲಿಲ್ಲ. ಅನ್ನ ನೀಡಿದ ಧಣಿ, ತನ್ನ ಬೆಳೆಸಿದ ಗುರು ಎಂದು ಪೋಲೀಸರಿಗೆ ದೂರು ಕೊಡಲಿಲ್ಲ, ಹೊಡೆದು ಬಡಿದು ಹೆಣ್ಣುಮಗಳಾದ ತನಗೆ ವೆಂಕರೆಡ್ಡಿ ಅವಮಾನ ಮಾಡಿದ್ದರೂ ಸುಮ್ಮನಿದ್ದಳು.

ಕೊಪ್ಪಳದಿಂದ ಕುಷ್ಟಗಿಗೆ ಹೋಗುವ ಹೆದ್ದಾರಿಯಲ್ಲಿ ಲಿಂಗನಬಂಡಿ ಬರುತ್ತದೆ. ಮೌನೇಶ್ವರ ಜಾತ್ರೆಯಲ್ಲಿ ಕ್ಯಾಂಪ್ ಮಾಡಿದಾಗ ಲೈಸೆನ್ಸು ತೆಗೆಸಿರಲಿಲ್ಲ, ಪಿ.ಎಸ್.ಐ. ಬಂದು ನಾಟಕ ಬಂದ್ ಮಾಡಲು ಬೈದಾಡಿದ. ಥೇಟರಿನ ಪಕ್ಕದ ಮರಕ್ಕೆ ಆತನನ್ನು ಕಟ್ಟಿಸಿ ನಾಟಕವಾಡಿದಳು. ನಾಟಕ ಮುಗಿದ ಮೇಲೆ ಬಿಚ್ಚಿಸಿ ಕಳಿಸಿದಳು. ಆದರೆ ಆ ಪಿ.ಎಸ್.ಐ. ಇವರ ಮೇಲೆ ಯಾವ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ.

ಗುಲಬರ್ಗಾ ಜಿಲ್ಲೆಯ ಸೇಡಂದ ಕ್ಯಾಂಪಿನಲ್ಲಿ ದೊಡ್ಡ ಮಳೆ ಬಂದು ನೀರು ಥೇಟರಿನಲ್ಲಿ ಹೊಕ್ಕು ಬಹಳ ಹಾನಿಯುಂಟಾಯಿತಲ್ಲದೆ ನಾಟಕ ಪ್ರಯೋಗ ಗೊಳ್ಳಲಿಲ್ಲ, ಹಣದ ಕೊರತೆಯಿಂದ, ಕೊತ್ತಲ ಬಸವೇಶ್ವರ ದೇವಸ್ಥಾನದ

## ಹವ್ಯಾಸಿ ರಂಗ ಕಲಾವಿದೆಯಾಗಿ ರೆಹಮಾನವ್ವ



ಬಾಬಣ್ಣನ ಹಿರಿಯ ಮಗಳು, ಬಾಲಕಲಾವಿದೆ ದಾನಮ್ಮ

ರೆಹಮಾನವ್ವನ ಮಕ್ಕಳು ನವಂಬರ್ ೨೦, ೧೯೮೦ ರಂದು ಬೆಳಗಿನ ಜಾವ ೨–೩೦ ಕ್ಕೆ ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವಾಗ ಕಾರ ಅಪಘಾತದಲ್ಲಿ ಲಲಿತಮ್ಮ, ಮಂಜುಳಾ ನಿಧನರಾದರು. ಕೊನೆಯ ಮಗ ಮುನ್ನಾ ಮಾರಣಾಂತಿಕ ಗಾಯಗಳಾಗಿ, ಮಣಿಪಾಲ ಆಸ್ಪತ್ರೆಯಲ್ಲಿ ಒಂದೆರಡು ವರ್ಷಗಳ ಕಾಲ ತೋಟ ಮಾರಿ ಖರ್ಚುದಾಯಕ ಚಿಕಿತ್ಸೆ ಮಾಡಿಸಿ ಉಳಿಸಿಕೊಂಡಳು. ಈ ಕಾರು ಅಪಘಾತ ನಡೆದ ದಿನ ಮಗ ಬಾಬಣ್ಣನ 'ವಿಜಯಲಕ್ಷ್ಮೀ ನಾಟ್ಯ ಸಂಘ ಕುಕನೂರು' ಬಳ್ಳಾರಿ ರಾಘವ ಕಲಾಮಂದಿರದಲ್ಲಿ ನಾಟಕಗಳನ್ನು ಪ್ರಯೋಗಿಸುತ್ತಿತ್ತು, ಅಲ್ಲಿಯೂ ರೆಹಮಾನವ್ವ ಪಾತ್ರ ವಹಿಸುತ್ತಿದ್ದಳು. ಈ ಕಂಪನಿ ನಿಂತು ಹೋಯಿತು. ಮುನ್ನಾನನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಣಿಪಾಲ ಆಸ್ಪತ್ರೆಯಲ್ಲಿಟ್ಟು, ಚಿಕಿತ್ಸೆ ಮಾಡಿಸುತ್ತಿದ್ದಳು. ತಂಗಿಯರ ಸಾವು, ತಮ್ಮನ ಅಂಗ ಊನತೆಯಿಂದ ಕಂಗೆಟ್ಟ ಬಾಬಣ್ಣ ಕಂಪನಿ ನಿಲ್ಲಿಸಿ, ಬೇರೆ ನಾಟಕ ಕಂಪನಿಗಳಲ್ಲಿ ಪಾತ್ರ ವಹಿಸತೊಡಗಿದರು. ಬೆಳವಣಿಕಿ ವೀರಭದ್ರೇಶ್ವರ ನಾಟಕ ಕಂಪನಿ ಮುಂಡರಗಿಯಲ್ಲಿತ್ತು, ಅಲ್ಲಿಗೆ ರೆಹಮಾನವ್ವ ಹೋಗಿ ಪಾತ್ರ ವಹಿಸತೊಡಗಿದಳು. ಈ ಕಂಪನಿಯಲ್ಲಿ ಕವಿ ಎಚ್. ಎನ್. ಹೂಗಾರರು ಬರೆದು, ನಿರ್ದೇಶಿಸುತ್ತಿದ್ದ 'ಹುಚ್ಚರ ರಾಜ್ಯ' ನಾಟಕದಲ್ಲಿ ಗರ್ವಿಷ್ಠ ಶ್ರೀಮಂತ ಮಹಿಳೆಯಾಗಿ ಅದ್ಭುತ ಅಭಿನಯ ನೀಡಿದ್ದಾಳೆ. ಅನಾಥ ಮಕ್ಕಳಾದ ಮಮತಾ, ನವೀನ ಜೊತೆಗೆ, ಮಗ ಬಾಬಣ್ಣನ ಮಕ್ಕಳಾದ ದಾನಮ್ಮ ಹಾಗೂ ಶಾಹಿರಾ ಇದ್ದರು. ಇವರನ್ನು ಸಾಕುವ ಹೊಣೆ ಇದ್ದುದರಿಂದ ತಾನು ನಾಟಕ ಕಂಪನಿ ಮಾಲೀಕಳು ಎಂಬ ಅಹಂಕಾರವಾಗಲೀ, ತಾನೊಬ್ಬ ಹಿರಿಯ ಮೇರು ನಟಿ ಈಗ ಹೇಗೆ ಪಾತ್ರ ನಿರ್ವಹಿಸಲಿ ಎಂಬ ಕೀಳರಿಮೆ ಆಕೆಗಿರಲಿಲ್ಲ. ಮೊದಲನೆಯದು ಅಭಿನಯದ ಮೇಲಿನ ಪ್ರೀತಿ, ಎರಡನೆಯದು ಜೀವನ ನಿರ್ವಹಣೆ.

ರೆಹಮಾನವ್ವ ತನ್ನ ಸ್ವಂತ ನಾಟಕ ಕಂಪನಿ ಕಟ್ಟುವ ಪೂರ್ವದಲ್ಲಿ ೧೯೪೯ರಲ್ಲಿ ಬಿಸರಹಳ್ಳಿ ಚಂದ್ರೋದಯ ಸಂಗೀತ ನಾಟಕ ಮಂಡಳಿಯ 'ಅಕ್ಷಯಾಂಬರ' ನಾಟಕದಲ್ಲಿ ದ್ರೌಪದಿ ಪಾತ್ರ ವಹಿಸಲು ಬಂದಿದ್ದಳು. ನಾನಾಗ ಏಳು ವರ್ಷದ ಬಾಲಕ. ನಮ್ಮೊಂದಿಗೆ ಓದುತ್ತಿದ್ದ ಲಕ್ಷ್ಮಣ ಆ ನಾಟಕದಲ್ಲಿ ರುಕ್ಮಿಣಿ, ಸಣ್ಣೆಲ್ಲಪ್ಪ ಸತ್ಯಭಾಮರಾಗಿ ರೆಹಮಾನವ್ವನೊಂದಿಗೆ ಅಭಿನಯ ಮಾಡುತ್ತಿದ್ದರು. ಒಂದು ದಿನ ಪೂರ್ವದಲ್ಲಿ ಬಂದು ತಾಲೀಮು ಕೊಟ್ಟಳು. ಕೌರವ (ದುರ್ಯೋಧನ) ನ ಪಾತ್ರಧಾರಿ ದೊಡ್ಡೆಲ್ಲಪ್ಪ ದುಶ್ಯಾಸನನ ಪಾತ್ರಧಾರಿ ಮರ್ದಾನ ಸಾಬನಿಗೆ ಬಂದ ನಟಿ ಭಯ ಭೀತಳಾಗುವಂತೆ, ಆಕೆ ನಿಜವಾಗಿಯೂ ಅತ್ತಿರಬೇಕು. ಹಾಗೆ ಸೀರೆ ಸೆಳೆ ಎಂದು ಹೇಳಿದ್ದುದನ್ನು ತಪ್ಪಾಗಿ ರೆಹಮಾನವ್ವನಿಗೆ ವರದಿ ಮಾಡಿದ್ದರು. ಇದರಿಂದಾಗಿ ಆಕೆ ಊರಿನ ಗೌಡರ ಮಧ್ಯಸ್ತಿಕೆಯಲ್ಲಿ ದ್ರೌಪದಿ ಪಾತ್ರ ಮಾಡಿದ್ದಳು. ಅಮೇಚ್ಯೂರ ಕಂಪನಿಯಾಗಿದ್ದರಿಂದ ಅಲ್ಲಿಯ ಹಾರ್ಮೋನಿಯಂ ಹಾಗೂ ತಬಲಾ ಮಾಸ್ತರರಿಗೆ ಹೀಗೆ ಬಾರಿಸಿರೆಂದು ಹೇಳಿಕೊಟ್ಟು ಹೊಸಬರೊಂದಿಗೆ ಪಾತ್ರ ಮಾಡಿದ್ದನ್ನು ಲಕ್ಷ್ಮಣ ಮಾಸ್ತರ ನೆನಪಿಸುತ್ತಿರುತ್ತಾರೆ.

ನನ್ನ ಗುರುಗಳಾದ ಉಪ್ಪಿನ ಬೆಟಗೇರಿ ಚೆನ್ನಬಸಪ್ಪ ಸಜ್ಜನರು ಇದೇ ೧೯೪೮–೪೯ರ ಕಾಲದ ಕೊಪ್ಪಳ ತಾಲೂಕು ಕವಲೂರಿನಲ್ಲಿ ಅಕ್ಷಯಾಂಬರ ನಾಟಕ ಸಂದರ್ಭದಲ್ಲಿ ನಡೆದ ಸಂಗತಿ: 'ಕವಲೂರಿನಲ್ಲಿ ಅಬ್ಬಿಗೇರಿ ರಾಜೇಸಾಬರು ದುಶ್ಯಾಸನ, ಮಲ್ಲಾಪುರ ರುದ್ರಗೌಡರು ಭೀಮನ ಪಾತ್ರವಹಿಸುತ್ತಿದ್ದರು. ಇಬ್ಬರಿಗೂ ಜಗಳವಾಗಿ ಅಕ್ಷಯಾಂಬರ ನಾಟಕದ ಭೀಮ ದುಶ್ಯಾಸನರ ಪಾತ್ರಗಳಲ್ಲಿಯೂ ಮುಂದುವರಿದಿತ್ತು, ವೈಯಕ್ತಿಕವಾಗಿ ರಹಿಮಾನವ್ವನಿಗೂ ಅಬ್ಬಿಗೇರಿ ರಾಜಾಸಾಹೇಬರಿಗೂ ಯಾವುದೋ ಕಾರಣಕ್ಕೆ ದ್ವೇಷವುಂಟಾಗಿತ್ತು. ಇಂಥ ಸಂದರ್ಭದಲ್ಲಿ ಮಲ್ಲಾಪುರ ರುದ್ರಗೌಡನು ಭೀಮನಾಗಿ ರೆಹಮಾನವ್ವನಿಗೇನಾದರೂ ಸೀರೆ ಸೆಳೆಯುವಾಗ ಅವಮಾನ ಮಾಡಿದರೆ ಕೈಯಲ್ಲಿರುವ ಗದೆಯಿಂದ ಜಜ್ಜಿ, ಸಾಯಿಸಿ ನಿಮ್ಮನ್ನು ರಕ್ಷಿಸುವೆನೆಂದು ಹೇಳಿದ ಮೇಲೆ, ಒಂದು ದಿವಸ ಇದೇ ಕಾರಣಕ್ಕಾಗಿ ನಿಲ್ಲಿಸಿದ ಪ್ರಯೋಗವನ್ನು ಮುಂದುವರಿಸಲು ರೆಹಮಾನವ್ವ ಒಪ್ಪಿಗೆ ನೀಡಿದ್ದಳು. ಇಂಥ ಪೇಚಿನ ಪ್ರಸಂಗಗಳು ಅನೇಕ, ಆಗಿನ ಪ್ರೇಕ್ಷಕರು ಇನ್ನೂ ನೆನಪಿಸುತ್ತಾರೆ.

ಬಿಸರಹಳ್ಳಿ ಲಕ್ಷ್ಮಣ ಮಾಸ್ತರರು ನೆನಪಿಸುವಂತೆ ಕೊಪ್ಪಳ ತಾಲೂಕಿನ ಗೊಂಡಬಾಳ ಜಾತ್ರೆಯಲ್ಲಿ ಮರುದಿವಸ ರೆಹಮಾನವ್ವನ ಕಂಪನಿ ಒಂದು ದಿನ

ರೆಹಮಾನವ್ವನವರ ಕಲಾವಂತಿಕೆಯ ಬಗ್ಗೆ ಅಭಿಮಾನ, ಗೌರವ ಮೂಡುತ್ತದೆ. ಈ ನಾಟಕದಲ್ಲಿ ರೆಹಮಾನವ್ವ ಲಕ್ಷ್ಮೀ ಪಾತ್ರ ನಿರ್ವಹಿಸುತ್ತ ಸೂಳೆ ಶಾರದಾ ಹಾಗೂ ನೆಗೆಯಣ್ಣೆ ಯಮುನಾ ಆಗಿ ಅಭಿನಯಿಸಿದ ಮೊಮ್ಮಕ್ಕಳಿಗೆ ಅಭಿನಯ ತರಬೇತಿ ನೀಡುತ್ತಿದ್ದಳು. ಅವರಿಗೆ ಡಾನ್ಸ್ ಹಾಗೂ ರಂಗಗೀತೆಗಳನ್ನು ಹೇಳಿಕೊಡುತ್ತಿದ್ದಳು.

ಕೊಪ್ಪಳದ ಹಿರಿಯ ರಂಗ ನಟಿ ಡಿ. ದುರ್ಗಾದಾಸರ ಅಕ್ಕನವರಾದ ಡಿ. ಹನುಮಂತೆವ್ವ, ಸಂಜೀವಮ್ಮರ ನಾಟಕ ಕಂಪನಿಯಲ್ಲಿ ದುರ್ಗಾದಾಸರೊಡನೆ ನಾಯಕಿ ಪಾತ್ರ ವಹಿಸುತ್ತಿದ್ದ ಸುಭದ್ರಮ್ಮ ಹುಣಸೀಮರದವರು, ತಮ್ಮ ಮಗಳು ಶಾರದಾಳನ್ನು ಕರೆದುಕೊಂಡು ಕುಷ್ಟಗಿ ತಾಲೂಕಿನ ಮೆಣೆಧಾಳಿಗೆ ಹೋಗಿದ್ದಳು. ಅಲ್ಲಿಗೆ ತನ್ನ ಮಕ್ಕಳಾದ ಲಲಿತಾ ಹಾಗೂ ಮಂಜುಳಾಳೊಂದಿಗೆ ರೆಹಮಾನವ್ವ ಕೂಡ ಬಂದಿದ್ದಳು. ಲಲಿತಾ ಹಾಗೂ ಶಾರದಾ ಇಬ್ಬರೂ ಯುವತಿಯರು, ಇವರಿಬ್ಬರನ್ನೂ ಈ ಹಿರಿಯ ನಟಿಯರು ಡಾನ್ಸ್ ಮಾಡಿಸಲು ಆ ನಾಟಕದ ದೃಶ್ಯ ಒಂದನ್ನು ಆರಿಸಿಕೊಂಡು, ಇಬ್ಬರೂ ಸೇರಿ ಇಡೀ ದಿನ ಅವರಿಗೆ ನೃತ್ಯ ಕಲಿಸಿ, ಮಾಡಿಸಿದರು. ಪ್ರೇಕ್ಷಕರಿಗೆ ನೃತ್ಯದ ರಸದೌತಣ ನೀಡಿದ್ದರು. ಸಿರಗುಪ್ಪದ ವರಾದ ಗಂಗಾವತಿಯಲ್ಲಿ ವಾಸವಾಗಿರುವ ೭೮ರ ವಯಸ್ಸಿನ ನಾಟಕಕಾರ, ಯು.ಆರ್. ಶಿವರುದ್ರಪ್ಪನವರು ಬಳ್ಳಾರಿ ಜಿಲ್ಲೆಯ ಹೊಳಗುಂದ, ತೆಕ್ಕಲಕೋಟೆ, ದಮ್ಮೂರು, ಸಿರಿಗೇರಿ, ಸಿರಗುಪ್ಪಗಳಲ್ಲಿ ಡಿ. ದುರ್ಗಾದಾಸರ ಅರ್ಜುನ ಹಾಗೂ ರೆಹಮಾನವ್ವನ ಚಿತ್ರಾಂಗದೆ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದರೆ ಚಕ್ಕಡಿ ಕಟ್ಟಿಕೊಂಡು, ಸಹಸ್ರಾರು ಜನರು ಬಂದು ನಾಟಕ ನೋಡುತ್ತಿದ್ದುದಾಗಿ ಹೇಳಿದ್ದನ್ನು ಕೇಳಿ ನನಗೆ ತುಂಬ ಆನಂದವಾಯಿತು. ಬಾಲ ಪಾತ್ರಗಳಲ್ಲಿ ಬಾಬಣ್ಣ ಹಾಗೂ ಲಲಿತಾ ಅಭಿನಯಿಸುತ್ತಿದ್ದರು ಎಂದು ತಮ್ಮ ನೆನಪುಗಳ ಸುರಳಿ ಬಿಚ್ಚಿದರು.

## ಹಿರಿಯ ಮಗ ಬಾಬಣ್ಣ ಕಲ್ಮನಿ

ಗ್ರೀನ್ ರೂಂ ವ್ಯವಸ್ಥೆ, ಸ್ಟೇಜ್ ಕಟ್ಟುವುದು, ಗೇಟ್ ಕೀಪರ್‌ನಾಗಿ, ನಾಟಕ ಕಂಪನಿ ಮಾಲೀಕನಾಗುವವರೆಗೆ ರಂಗ ಭೂಮಿಯ ವಿವಿಧ ಮುಖಗಳ ಪರಿಚಯ. ನಂದರಾಜ ಮೇವುಂಡಿ ಹಾಗೂ ರೆಹಮಾನವ್ವನ ಹಿರಿಯ ಮಗನಾಗಿ ೨-೧೧-೧೯೩೪ರಂದು ಜನನ ಕುಕನೂರಿನಲ್ಲಿ. ಅಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸ, ಅವ್ವನ ಗರಡಿಯಲ್ಲಿ ಕಲಿತಿದ್ದು ಬಹಳ. ಬಾಯಿ ತುಂಬ ಮಾತು,



ಹಿರಿಯ ಮಗ ಬಾಬಣ್ಣ
ಸ್ತ್ರೀ ಪಾತ್ರದಲ್ಲಿ

ದೊಡ್ಡನಗು, ನಿಷ್ಕಲ್ಮಷ ಮನಸ್ಸು. ಸಿರಿಬರಲಿ, ಉರಿ ಬರಲಿ, ಯಾವುದಕ್ಕೂ ಜಗ್ಗದ ಧೈರ್ಯ. ಅವ್ವನ ಎದೆಗಾರಿಕೆ ಕಂಡು ಆಕೆಯ ವೈವಿಧ್ಯಮಯ ಪಾತ್ರಗಳನ್ನು ಕಂಡು, ಬೈಸಿಕೊಂಡು, ಮುನಿಸಿಕೊಂಡು, ನಾಟಕ ಕಂಪನಿ ಮಾಲೀಕಳಾಗಿ ಆಡಳಿತ ನಡೆಸಿದ್ದನ್ನು ಕಂಡು ಕಲಾವಿದನಾಗಿ ಬೆಳೆದಾತ. ಇವರು ನಾಯಕನಾಗಿ, ಪ್ರತಿ ನಾಯಕ, ವಿಲನ್ ಆಗಿ, ಹಾಸ್ಯ ಪಾತ್ರಧಾರಿಯಾಗಿ, ಸ್ತ್ರೀಯಾಗಿ, ಪುರುಷನಾಗಿ, ನಪುಂಸಕ, ಅರೆ ಹುಚ್ಚನಾಗಿ ಯಾವುದಾದರೂ ಸೈ, ಪಾತ್ರಕ್ಕೆ ತಕ್ಕಂಥ ಅಭಿನಯ. ತಾನು ಪಾತ್ರ ಮಾಡಿದರೆ ಬೇರೆ ಇನ್ನಾರೂ ಅದರಂತೆ- ಮಾಡದಿರವಂಥ ತನ್ನದೇ ಛಾಪಿನ ನಟನೆ, ಒಪ್ಪುವಂಥ ಮೇಕಪ್ಪು, ಹಾಡು, ಕುಣಿತ, ಸಮಯಕ್ಕೆ ತಕ್ಕಂಥ ಹಾವ ಭಾವ, ನೋಡಿದವರು ನಕ್ಕು ನಲಿದು ಬೆಕ್ಕಸ ಬೆರಗಾಗುವಂಥ ಪಾತ್ರ ಮಾಡಬಲ್ಲ ಸಾಮರ್ಥ್ಯ ಇಂಥವರಿಗೆ ಮಾತ್ರ ಸಾಧ್ಯ. ಗಂಭೀರ ಸನ್ನಿವೇಶದ ಒತ್ತಡದಲ್ಲಿ ಪ್ರೇಕ್ಷಕರು ಉಸಿರು ಬಿಗಿ ಹಿಡಿದು ಕೂತಿರುವಾಗ, ವಿನೋದ, ಹಾಸ್ಯ ಚಟಾಕಿಗಳಿಂದ, ಒಮ್ಮೊಮ್ಮೆ ಅದು ದಾರ್ಶನಿಕತೆಯ ಸ್ಪರ್ಶ ಪಡೆಯಬಹುದು, ಮನಸ್ಸನ್ನು ಹಗುರಗೊಳಿಸುವ, ನಕ್ಕು ಖುಷಿ ಪಡಿಸುವ ಸಂಭಾಷಣೆಗಳಿಂದ ಹಾಸ್ಯ ನಟನೆ, ಸಹಜವಾಗಿ ಇವರು ಹಾಸ್ಯ ಪಾತ್ರ ಮಾಡುತ್ತಿದ್ದರೆ, ನಾಯಕ-ನಾಯಕಿಯನ್ನು ಪ್ರೇಕ್ಷಕ ಮರೆತು ಬಿಡುವಷ್ಟು ಇವರ ಹಾಸ್ಯ ಪಾತ್ರವೇ ಪ್ರಧಾನವಾಗಿಬಿಡುತ್ತದೆ.

ಬಿ. ಆರ್. ಅರಿಷಣಗೋಡಿಯವರ 'ಬಸ್ ಕಂಡಕ್ಟರ್', ಕೆ. ಎನ್. ಸಾಳುಂಕೆಯವರ 'ಬದುಕು ಬಂಗಾರವಾಯ್ತು' , 'ವರನೋಡಿ ಹೆಣ್ಣು ಕೊಡು' , ಪಿ. ಬಿ. ಧುತ್ತರಗಿಯವರ 'ಮಲಮಗಳು ಅರ್ಥಾತ್ ಮುದುಕನ ಮದುವೆ' 'ಇಳಕಲ್ಲ ಸೀರೆ' , ಟಿ. ಕೆ. ಮಹಮ್ಮದಲಿ ಅವರ 'ಶೆಟ್ಟರ ಸಂಕ್ಟ, ಗೌಡ್ರ ಗದ್ಲ' ಎಚ್.ಎನ್ ಹೂಗಾರರ 'ಕೊಂಡು ತಂದ ಗಂಡ ಅರ್ಥಾತ್ ವರದಕ್ಷಿಣೆ', 'ಹುಚ್ಚರರಾಜ್ಯ' ಮುಂತಾದ ನಾಟಕಗಳಲ್ಲಿ ಇವರ ಹಾಸ್ಯ ಪಾತ್ರ ಅದ್ಭುತ ವಾಗಿರುತ್ತಿತ್ತು, ಕೀಳು ದರ್ಜೆಯ ಹಾವ ಭಾವ, ದ್ವಂದ್ವಾರ್ಥದ ಸಂಭಾಷಣೆ

ರುಚಿನಗಳು ಒಳಗೆ ಲಾವಾರಸವಾಗಿ ಕುದಿಯುತ್ತಿರುತ್ತವೆ. ಒಮ್ಮೆ ಅತ್ತೆ ಸತ್ತ ಸುದ್ದಿ ಬಂದಾಗ ನಾಟಕ ಅರ್ಧಕ್ಕೆ ನಿಲ್ಲಿಸದೆ, ದುಃಖದ ಬೆಂಕಿ ಹೊಟ್ಟೆಯೊಳಗಿಟ್ಟು ಕೊಂಡು ನಗಿಸಿ–ನಲಿಸಿ ನಾಟಕ ಮುಗಿದ ಮೇಲೆ ಮಣ್ಣಿಗೆ ಹೋಗಿದ್ದಾರೆ. ರೌಡಕುಂದಿ ಕ್ಯಾಂಪಿನಲ್ಲಿ ಹಿರಿಯ ತಂಗಿ ಲಲಿತಮ್ಮನ ಗಂಡು ಮಗು ಸತ್ತಿತ್ತು. ಕಂಪನಿ ಬಂದ್ ಮಾಡಿಕೊಂಡು ಊರಿಗೆ ಬಂದರು. ದೇವರನ್ನು ವಂಚಿಸಿದರೂ ಪ್ರೇಕ್ಷಕ ಪ್ರಭುವನ್ನು ವಂಚಿಸಬಾರದೆನ್ನುವ ಸ್ವಭಾವದವರು ಬಾಬಣ್ಣ. ಒಳಸಂಗ ಕ್ಯಾಂಪ್, ೧೯೫೭–೫೮ ರಲ್ಲಿ ಹುಬ್ಬಳ್ಳಿ ಸಿದ್ಧಾರೂಢರ ಭಕ್ತರಾದ ಹಸನಮ್ಮನ ಮಗಳು ಮೆಹಬೂಬಿ (ಮಹಾದೇವಿ) ಯನ್ನು ಮದುವೆಯಾದರು.

ಅವರ ಶ್ರೀಮತಿ ಸ್ತ್ರೀ ಪಾತ್ರಕ್ಕೆ ಕೊರತೆಯಿದ್ದಾಗ ಬಣ್ಣ ಹಚ್ಚಿದ್ದಿದೆ. ಅತ್ತೆಯ ಕಂಪನಿಯಿರಲಿ, ಗಂಡನ ವಿಜಯ ಲಕ್ಷ್ಮೀ ನಾಟ್ಯ ಸಂಘವಿರಲಿ ಬೋರ್ಡಿಂಗಿನ ವ್ಯವಸ್ಥೆ, ಸ್ಟೇಜ್ ಕಟ್ಟುವುದರಿಂದ ಹಿಡಿದು ಹಿರಿದು ಕಿರಿದು ಕೆಲಸವೆನ್ನದೆ ಗಂಡನೊಂದಿಗೆ, ಅತ್ತೆಯೊಂದಿಗೆ ಕಾಲಹಾಕಿದ್ದಾರೆ. ಬಾಬಣ್ಣನವರು ಈಗಲೂ ತಮ್ಮ ಟ್ರೂಪಿನ ಮೂಲಕ, ಶಿಶುನಾಳ ಶರೀಫ ನಾಟಕವಾಡುತ್ತಾರೆ. 'ಈಶ್ವರ ಅಲ್ಲಾ ನೀನೇ ಎಲ್ಲ' ಹರಿ ಬಿ. ಖೋಡೆಯವರ ಧಾರವಾಹಿಯಲ್ಲಿ ಶರೀಫರ ಗುರು ಮೌಲ್ವಿಯಾಗಿ; ಗುರುಪಂಚಾಕ್ಷರಿ ಗವಾಯಿಗಳ ಚಲನಚಿತ್ರದಲ್ಲಿ ಕಾರಕೂನನಾಗಿ ಚೆನ್ನಾಗಿ ಅಭಿನಯಿಸಿದ್ದಾರೆ.

ಚಿಂದೋಡಿ ಲೀಲಾರ ಕೆ.ಬಿ. ಆರ್. ಡ್ರಾಮಾ ಕಂಪನಿ ದಿಲ್ಲಿಯಲ್ಲಿ ಧರ್ಮದ ದೌರ್ಜನ್ಯ ನಾಟಕ ಪ್ರಯೋಗಿಸಿದಾಗ ಅದರಲ್ಲಿ ಧರ್ಮಾಧಿಕಾರಿ ಪಾತ್ರವನ್ನು ನೋಡಿದ ದಿಲ್ಲಿ ಪ್ರೇಕ್ಷಕರು ಮೆಚ್ಚಿಕೊಂಡರು. ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿ ಅಜಿತಕುಮಾರ ಪಾಂಜಾರಿಂದ ಸತ್ಕಾರಗೊಂಡಿದ್ದಾರೆ. ಇದೇ ಕಂಪನಿ ಮೂಲಕ ಮುಂಬೈ ನಗರದಲ್ಲಿ 'ಧರ್ಮದ ದೌರ್ಜನ್ಯ', 'ಸಿಡಿದೆದ್ದ ಬಡವ', 'ಕೊಂಡು ತಂದ ಗಂಡ', 'ದುಡ್ಡು ದುಡ್ಡು' ನಾಟಕಗಳನ್ನು ಪ್ರಯೋಗಿಸಿದಾಗ ಒಳ್ಳೆಯ ಅಭಿನಯ ನೀಡಿ ಪ್ರಶಂಸೆಗೊಳಗಾಗಿದ್ದಾರೆ. ಇವರನ್ನು ಅನೇಕ ಸಂದರ್ಭದಲ್ಲಿ ಸಂಘ ಸಂಸ್ಥೆಗಳು ಗೌರವಿಸಿವೆ. ಇವರ ರಂಗಭೂಮಿಯ ಸೇವೆಯನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿಯನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಎಂ. ವೀರಪ್ಪ ಮೊಯ್ಲಿಯವರಿಂದ ದಾವಣಗೆರೆ ನಗರದಲ್ಲಿ ದಿ: ೧೧–೦೬–೧೯೯ಳರಂದು ದಯಪಾಲಿಸಿದೆ. ಸ್ಥಳೀಯ ಸಂಘ ಸಂಸ್ಥೆಗಳು, ಬೇರೆ ಬೇರೆ ನಾಟಕ ಕಂಪನಿಗಳೂ ಅತಿಥಿ ನಟರನ್ನಾಗಿ ಬರಮಾಡಿಕೊಂಡು ಗೌರವಿಸುತ್ತವೆ. ಸಮಾಜದ ಗೌರವಾದರಕ್ಕೆ ಪಾತ್ರರಾಗಿದ್ದಾರೆ.

ಆರ್ಥಿಕವಾಗಿ ಬಡವರಾಗಿದ್ದಾರೆ. ಗೌರವಾದರಗಳಿಂದ ಶ್ರೀಮಂತರಾಗಿದ್ದಾರೆ. ಯಾರಿಗಿಲ್ಲದ ನಟನಾ ಪ್ರತಿಭೆ, ಡೋಲಕ್, ಹಾರ್ಮೋನಿಯಂ, ಬುಲ್‌ಬುಲ್ ತರಂಗ, ಹಾಗೂ ತಬಲಾ ನುಡಿಸಬಲ್ಲರು. ಹಾಡ ಬಲ್ಲರು. ನೃತ್ಯ ಮಾಡಬಲ್ಲರು. ಇದೆಲ್ಲ ಹೇಗೆ ಕಲಿತಿರೆಂದರೆ ಅವ್ವ ! ಎನ್ನುತ್ತಾರೆ. ಸುತ್ತಲಿನ ನಾಟಕ ಕಂಪನಿಗಳು ಕಾರಣ ಎನ್ನುತ್ತಾರೆ. ಇಷ್ಟಿದ್ದರೂ ತಾನೊಬ್ಬ ದೊಡ್ಡ ನಾಟಕ ಕಂಪನಿ ಮಾಲೀಕನೆಂಬ ಅಹಂಕಾರವಿಲ್ಲ. ತಾಯಿ ರೆಹಮಾನವ್ವನ ಹೆಸರು ಹೇಳಿ ದುಡ್ಡು ಮಾಡುವ ಹಪಾಹಪಿ ಇಲ್ಲ. ಕೈಯೊಡ್ಡಿ ಬೇಡುವುದಿಲ್ಲ. ನನ್ನ ನಾಟಕ ಹಣ ಕೊಟ್ಟು ನೋಡಿರಿ, ಪ್ರೋತ್ಸಾಹಿಸಿರಿ. ನನ್ನಂತೆ ಎಲ್ಲ ಕಲಾವಿದರಿಗೂ ಸಹಾಯ ಸಹಕಾರ ನೀಡಿರಿ ಎಂದು ದೊಡ್ಡ ನಗುವಿನೊಂದಿಗೆ ವಿನಯ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತಾರೆ. ಲಕ್ಷ್ಮೇಶ್ವರದ ರವಿ ಕಲಾ ನಾಟ್ಯ ಸಂಘ ಆರಂಭವಾಗಲು ಹಾಗೂ ಸುಮತಿ ಶ್ರೀ ಅವರ 'ಶ್ರೀದೇವಿ ಮಹಾತ್ಮೆ' ಪ್ರದರ್ಶನಗೊಳ್ಳಲು ಬಾಬಣ್ಣ ಶ್ರಮಿಸಿರುವುದು ಉಲ್ಲೇಖನೀಯ ಸಂಗತಿಯಾಗಿದೆ. ಅವುಗಳ ಬಗ್ಗೆ ಹೇಳಿಕೊಳ್ಳುವುದಿಲ್ಲ. ಶಿಶುನಾಳ ಶರೀಫ, ನಾಗಲಿಂಗಲೀಲೆ, ಅಕ್ಕಮಹಾದೇವಿ ಇವರು ಇತ್ತೀಚೆಗೆ ಪ್ರಯೋಗಿಸುತ್ತಿರುವ ನಾಟಕಗಳು. ಸಿನೇಮಾ, ಧಾರವಾಹಿ ಭರಾಟೆಯಲ್ಲಿಯೂ ಜನರು ಕಿಕ್ಕಿರಿದು ಇವರ ನಾಟಕಗಳನ್ನು ನೋಡುತ್ತಾರೆ.



ದಿಲ್ಲಿ ಕರ್ನಾಟಕ ಸಂಘದಲ್ಲಿ ಕೇಂದ್ರ ಪ್ರಸಾರ ಮಂತ್ರಿ ಅಜಿತ ಕುಮಾರ ಪಾಂಜಾ ಅವರಿಂದ ಹಿರಿಯಮಗ ಬಾಬಣ್ಣ ಕಲ್ಮನಿಯವರಿಗೆ ಸನ್ಮಾನ

ಇವರಿಗೆ ದಾನಮ್ಮ, ಶಾಹಿರಾ, ಅಪ್ಪಣ್ಣ, ರಾಜಣ್ಣ ಹೀಗೆ ನಾಲ್ಕು ಮಕ್ಕಳಿದ್ದಾರೆ. ಎಲ್ಲರೂ ಪ್ರಸಂಗ ಬಿದ್ದರೆ ಈಗಲೂ ಬಣ್ಣ ಹಚ್ಚುತ್ತಾರೆ. ಹವ್ಯಾಸಿ ಕಲಾವಿದರಿಂದ ಕರೆ ಬಂದರೆ ಹೋಗುತ್ತಾರೆ. ಹಂಪಿ ಉತ್ಸವ, ಆನೆಗುಂದಿ ಉತ್ಸವ, ಉರುಸು, ಹಬ್ಬ, ಜಾತ್ರಾ ವಿಶೇಷಗಳಿಗೆ ತಮ್ಮ ತಂಡವೊಯ್ದು ನಾಟಕ ಪ್ರದರ್ಶಿಸುತ್ತಾರೆ. ರಂಗ ಚಟುವಟಿಕೆಗಳಲ್ಲಿ ಈಗಲೂ ಕ್ರಿಯಾಶೀಲರಾಗಿದ್ದಾರೆ. ರಾಜ್ಯ ಸರಕಾರ ನೀಡುವ ಕಲಾವಿದರ ಮಾಸಾಶನದಲ್ಲಿ ನಾಲ್ಕು ಮಕ್ಕಳನ್ನು ಜೊತೆಗೆ ಶ್ರೀಮತಿ ಮೆಹಬೂಬಿಯನ್ನು ಬದುಕಿಸುತ್ತಿದ್ದಾರೆ.

## ಲಲಿತಾ ಕಲ್ಮನಿ

ಪ್ರತಿಭಾವಂತ ನಟಿ. ತಾಯಿ ರೆಹಮಾನವ್ವ, ಅಣ್ಣ ಬಾಬಣ್ಣನವರನ್ನು ಮೀರಿಸಿದ ರಂಗ ಕಲಾವಿದೆ. ೧೯೩೮ರಲ್ಲಿ ಅಳವಂಡಿ ಕ್ಯಾಂಪಿನಲ್ಲಿ ಜನಿಸಿದಳು. 'ಜನ್ನತ್‌ಬಿ' ಯೆಂಬುದು ಹುಟ್ಟಿದಾಗಿರಿಸಿದ ಹೆಸರು. ತಮ್ಮ ಕಂಪನಿಯಲ್ಲಿ ಮೊದಲು ನೃತ್ಯಗಾರ್ತಿಯಾಗಿ ಪ್ರವೇಶ ಪಡೆದು, ಬಾಲ ಪಾತ್ರಗಳಾದ ಪ್ರಹ್ಲಾದ, ಲೋಹಿತಾಶ್ವ, ಬಾಲ ಪರಶುರಾಮಗಳ ಮೂಲಕ ಅಭಿನಯದ ತರಬೇತಿ ಪಡೆದಳು. ಮನೆಮಗಳು ನಾಟಕದಲ್ಲಿ ರಾಜೇಶ್ವರಿ ಹಾಸ್ಯ ಪಾತ್ರ, ಗೌಡ್ರ ಗದ್ದಲದಲ್ಲಿ ಭಾರತಿ, ಹೇಮರೆಡ್ಡಿ ಮಲ್ಲಮ್ಮದಲ್ಲಿ ನಾಗಮ್ಮ ಟಿಪ್ಪುಸುಲ್ತಾನದಲ್ಲಿ ಜಯಂತಿ, ಸತ್ಯ ಹರಿಶ್ಚಂದ್ರದಲ್ಲಿ ಕಾಶೀಪಟ್ಟಣದ ಬ್ರಾಹ್ಮಣನ ಹೆಂಡತಿಯಾಗಿ, ಅಲ್ಲದೆ ಬಸ್ ಕಂಡಕ್ಟರ್, ಸ್ತ್ರೀ ರತ್ನ ಹಾಗೂ ರೈತನ ಮಕ್ಕಳು ನಾಟಕದಲ್ಲಿ ನಾಯಕಿಯಾಗಿ ಅಭಿನಯಿಸಿದಳು.


ರಂಗ ಅಭಿನೇತ್ರಿ, ರೆಹಮಾನವ್ವ ಕಲ್ಮನಿಯವರ ಹಿರಿಯ ಮಗಳು ಲಲಿತಮ್ಮ ಕಲ್ಮನಿ

ಬಿ. ಆರ್. ಅರಿಷಣಗೋಡಿ ಕಂಪನಿ, ಗುಡಿಗೇರಿ ಕಂಪನಿ, ಗುಡಿಗೇರಿ ಮುದಕಣ್ಣನ ಕಂಪನಿ, ಚಿತ್ತರಗಿ ಕುಮಾರ ವಿಜಯ ನಾಟ್ಯ ಸಂಘಗಳಲ್ಲಿ ಅಭಿನಯಿಸಿದ್ದಾಳೆ. ಈಕೆ ಅಭಿಜಾತ ನಟಿ. ಹಾಸ್ಯ, ರೌದ್ರ, ಗಂಭೀರ, ಗೃಹಿಣಿ, ಹುಚ್ಚಿ, ಗಯ್ಯಾಳಿ, ಗಂಡುಬೀರಿ ಯಾವ ಪಾತ್ರಕ್ಕಾದರೂ ಸೈ. ಎಚ್.ಬಿ. ಸರೋಜಮ್ಮನಂಥ

ಪ್ರಬುದ್ಧ ನಟಿಗೆ ಆರಂಭ ಕಾಲದಲ್ಲಿ ಅಭಿನಯ ಮತ್ತು ಸಂಭಾಷಣೆಗಳನ್ನು ಹೇಗೆ ಹೇಳಬೇಕೆಂಬುದನ್ನು ಹೇಳಿಕೊಟ್ಟಿದ್ದಾಳೆ. ಪ್ರಬುದ್ಧ ಅಭಿನಯದಿಂದ ಯಾವ ಕಂಪನಿಗಾದರೂ, ಯಾವ ಪಾತ್ರಕ್ಕಾದರೂ ಬೇಕಾಗಿದ್ದ ಬೇಡಿಕೆಯ ನಟಿ.

ಆಶಾಪುರ ಕಂಪನಿ ರಾಮರಾವ್ ದೇಸಾಯರ 'ಗೌಡ್ರ ಗದ್ಲ' ನಾಟಕ ನೋಡಿ, ಟಿ. ಕೆ. ಮಹ್ಮದಲಿಯವರಿಂದ 'ಸೆಟ್ಟರ ಸಂಗ್ಟ-ಗೌಡ್ತಿ ಗದ್ಲ' ನಾಟಕವನ್ನು ಬರೆಯಿಸಿ, ತನ್ನ ಅಣ್ಣ ಬಾಬಣ್ಣನ ಕಂಪನಿ ಮೂಲಕ ಪ್ರಯೋಗಿಸಿ ಹೆಸರು ಪಡೆದಳು. ಆಕೆಯ ಅಭಿನಯವನ್ನು ಮೆಚ್ಚಿದ ಪುರತಿಪ್ಲಿಯ ಗೌಸ್ ಮಾಸ್ತರ್ ಹಾರ್ಮೋನಿಯಂ ವಾದಕರು, ನಟ-ನಿರ್ದೇಶಕ ಹಾಗೂ ನಾಟಕಕಾರರು, ಲಲಿತಮ್ಮನನ್ನು ಮೆಚ್ಚಿ ಮದುವೆಯಾದರು. ಇವರಿಗೆ ಮಮತಾ ಮತ್ತು ನವೀನರೆಂಬ ಮಕ್ಕಳಾದರು. ಮಮತಾ ಕೂಡ ತಾಯಿಯಂತೆ ಬಾಲ್ಯದಲ್ಲಿಯೇ ಶಾಲೆಯ ಸ್ನೇಹ ಸಮ್ಮೇಳನದಲ್ಲಿ ಪಾತ್ರ ಮಾಡಿ ಹೆಸರು ಗಳಿಸಿದ್ದಳು. ಹವ್ಯಾಸಿ ಕಂಪನಿಗಳಲ್ಲಿ ಅಜ್ಜಿ ರೆಹಮಾನಮ್ಮನ ಮಾರ್ಗದರ್ಶನದಲ್ಲಿ, ಅಭಿನಯದಲ್ಲಿ ಹಾಡಿನಲ್ಲಿ ನೃತ್ಯದಲ್ಲಿ ಮುಂದುವರಿದಿದ್ದಳು. ಶಿಕ್ಷಕಿಯಾದ ನಂತರ ರಂಗಭೂಮಿ ಯಿಂದ ದೂರ ಸರಿದಳು. ಈಕೆಯ ತಮ್ಮ ನವೀನ ಕುಕನೂರಿನಲ್ಲಿದ್ದಾನೆ.

ಲಲಿತಮ್ಮ ಅಪಘಾತದಲ್ಲಿ ಸಾಯುವ ಪೂರ್ವದಲ್ಲಿ ಸಹನಟ ಅಂಬಲಿ ಲಿಂಗನಗೌಡನೊಂದಿಗೆ, ಎನ್. ಬಸವರಾಜ ಗುಡಗೇರಿ ಅವರ ಸಂಗಮೇಶ್ವರ ನಾಟಕದಲ್ಲಿ ಪ್ರಧಾನ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಳು. ರೈತನ ಮಕ್ಕಳು ನಾಟಕದ ಶಿವರುದ್ರ-ಭಾರತಿ ಪಾತ್ರದಲ್ಲಿ ಮಿಂಚುತ್ತಿದ್ದಳು. ''ಇವರಿಬ್ಬರೂ ಆ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ನನ್ನ ಅಭಿನಯವನ್ನು ಮೀರಿಸಿದ ಕಲಾವಿದರು, ಅಂಥವರಿಗೆ ನಾನು ನನ್ನ ಕಂಪ್ನಿಯಲ್ಲಿ ಪ್ರೋತ್ಸಾಹಿಸಿ ಇಟ್ಟುಕೊಂಡಿದ್ದೆ.'' ಎಂದು ಗುಡಿಗೇರಿ ಬಸವರಾಜರು ಅಭಿಪ್ರಾಯಪಟ್ಟರು. ''ಕರ್ನಾಟಕದ ರಂಗಭೂಮಿಯಲ್ಲಿ ಕೆಲವರು ಹಾಸ್ಯ ಪಾತ್ರಕ್ಕೆ, ಕೆಲವರು ಗಂಭೀರ ಪಾತ್ರಕ್ಕೆ, ವಿಲನ್ ಪಾತ್ರಕ್ಕೆ ಪ್ರಸಿದ್ಧರಿರುತ್ತಾರೆ. ಆದರೆ ಲಲಿತಮ್ಮ ಮಾತ್ರ ಆಲ್ ರೌಂಡರ್. ಯಾವ ಪಾತ್ರ ನೀಡಿದರೂ ನ್ಯಾಯ ಒದಗಿಸುವ ಮಹಾನ್ ಕಲಾವಿದೆ. ಸಿನೆಮಾ ರಂಗದ ಜಯಂತಿ ಇದ್ದ ಹಾಗೆ ಇದ್ದಳು'' ಎಂದು ಗುಡಿಗೇರಿ ಬಸವರಾಜ ಹೇಳಿದರು. ರೈತನ ಮಕ್ಕಳು ನಾಟಕದಲ್ಲಿ ಮಂಜುಳಾ ಹಾಸ್ಯ ಪಾತ್ರದಲ್ಲಿದ್ದಳು.


ಗುಡಿಗೇರಿ ಬಸವರಾಜರು ಗುಬ್ಬಿ ವೀರಣ್ಣನವರಂತೆ, ಪೌರಾಣಿಕ ನಾಟಕ ಒಂದನ್ನು ಅವರು ನಿಧನರಾದ ವರ್ಷ ೧೯೬೭ರಲ್ಲಿ ಲಕ್ಷಾಂತರ ರೂಪಾಯಿ

ಸುರಿದು, ರಾಜಾ ವಿಕ್ರಮ ಪೌರಾಣಿಕ ನಾಟಕ ಗುಲಬರ್ಗಾದಲ್ಲಿ ಪ್ರದರ್ಶಿಸಿದರು. ಇದರಲ್ಲಿ ರಾಜಾ ವಿಕ್ರಮನಾಗಿ ದೊಡ್ಡವಾಡ ಸಿದ್ಧಯ್ಯ ಸ್ವಾಮಿಗಳು, ದುರ್ಜಯನಾಗಿ ಮಾಲೀಕರಾದ ಗುಡಿಗೇರಿ ಬಸವರಾಜರು, ಹಾಸ್ಯ ಪಾತ್ರ ಬಂಗಾರಿಯಾಗಿ ಬಾಬಣ್ಣಾ ಕಲ್ಮನಿ, ಲಲಿತಮ್ಮ ಡಾನ್ಸರ್, ೧೦ ವರ್ಷದ ಮುನ್ನಾ ಕಲ್ಮನಿ ರಾಜಕುಮಾರ. ದುರ್ಜಯ (ಗುಡಗೇರಿ ಬಸವರಾಜರು) ೧೦ ವರ್ಷದ ಬಾಲಕನನ್ನು ಒಂದೇ ಮುಷ್ಟಿಯಲ್ಲಿ ಹಿಡಿದೆತ್ತಿ ತನ್ನ ಕ್ರೌರ್ಯವನ್ನು ತೋರಿಸುತ್ತಿದ್ದರೆ ಮುನ್ನಾ ಹೆದರದೇ ಗಂಭೀರನಾಗಿರುತ್ತಿದ್ದ. ಪ್ರೇಕ್ಷಕರು, ದುರ್ಜಯನ ಆ ಕ್ರೌರ್ಯಕ್ಕೆ, ಎಲ್ಲಿ ತೂರಿಬಿಡುತ್ತಾನೋ ರಾಜಕುಮಾರನನ್ನು ಎಂದು ತಲ್ಲಣಿಸಿ, ಹಿಡಿ ಶಾಪ ಹಾಕುತ್ತಿದ್ದರು. ಆ ದೃಶ್ಯದಲ್ಲಿ ಕ್ರೌರ್ಯಕ್ಕೆ ಹೆದರದೆ, ನಟಿಸುತ್ತಿದ್ದ ಮುನ್ನಾನನ್ನು ನಿತ್ಯವೂ ಆ ಕಾಲದಲ್ಲಿ ಗುಡಿಗೇರಿ ಬಸವರಾಜರು ಲೀಟರ್‌ಗಟ್ಟಲೇ ಹಾಲು ಕುಡಿಸಿ, ಪೇಡೆ ತಿನ್ನಿಸುತ್ತಿದ್ದರಂತೆ. ರೆಹಮಾನವ್ವ ಕಲ್ಮನಿಯವರ ಮಕ್ಕಳು ಗುಡಿಗೇರಿ ಬಸವರಾಜ ಕಂಪನಿಯ ಪ್ರಮುಖ ನಟರಾಗಿದ್ದರು. ಮಾಲೀಕರ ವಿಶ್ವಾಸಕ್ಕೆ – ಪ್ರೀತಿಗೆ ಪಾತ್ರರಾಗಿದ್ದರು. ಬಾಬಣ್ಣಾ ಲಲಿತಮ್ಮ, ಮುನ್ನಾ, ಮಂಜುಳಾ ಎಲ್ಲರೂ ಒಂದು ಕಾಲಕ್ಕೆ ಗುಡಿಗೇರಿ ಕಂಪನಿಯಲ್ಲಿ ಪ್ರಮುಖ ನಟರಾಗಿದ್ದರು. ತಾಯಿ ಹಾಗೂ ಅಣ್ಣನ ಗರಡಿಯಲ್ಲಿ ಲಲಿತಮ್ಮ ಪಳಗಿದ್ದಳು. ಪ್ರತಿಭೆ ಇತ್ತು. 'ತಾಳಿ ತಕರಾರು' ಜಿ. ಆರ್. ಮಾಸ್ತರ್ ಬರೆದ ಸಾಮಾನ್ಯ ನಾಟಕ, ಅದರಲ್ಲಿ ಅಣ್ಣನನ್ನು ಹಾಸ್ಯ ಪಾತ್ರ ಮಾಡಿಸಿ ತಾನೂ ಹಾಸ್ಯ ಪಾತ್ರದಲ್ಲಿ ಅಭಿನಯಿಸಿ ನಾಟಕವನ್ನು ಯಶಸ್ವಿಗೊಳಿಸಿದಳು. ನೂರಾರು ಪ್ರಯೋಗಗಳಾದವು. 'ತಾಳಿ ತಕರಾರು' ಪ್ರಚಾರಗೊಂಡಿದ್ದನ್ನು ನೋಡಿ, ಬೇರೆ ಕಂಪನಿಯವರು ತೆಗೆದುಕೊಂಡರಾದರೂ ಅವರು ಯಶಸ್ಸು ಕಾಣಲಿಲ್ಲ. ಅದರ ಯಶಸ್ಸಿಗೆ ಆಕೆಯ ನಿರ್ದೇಶನ, ಪ್ರತಿಭೆ, ಛಲ ಕಾರಣವಾಗಿತ್ತು.

ಅಣ್ಣಾ ಬಾಬಣ್ಣನ ಕಂಪನಿಯಲ್ಲಿ ಹೆಣ್ಣಿನ ಜೀವನ, ಗುರು ಕಾಣಿಕೆ, ವರನೋಡಿ ಹೆಣ್ಣುಕೊಡು, ದಾರಿ ದೀಪ ಮುಂತಾದ ನಾಟಕಗಳಲ್ಲಿ ಪಾತ್ರ ವಹಿಸಿದ್ದಳು. ಟಿ.ಕೆ. ಮಹ್ಮದಲಿಯವರ 'ಸೆಟ್ಟರ ಸಂಗ್ಯ ಗೌಡ್ತಿ ಗದ್ಲ' ನಾಟಕದ ಸಂಪೂರ್ಣ ನಿರ್ದೇಶ ಲಲಿತಮ್ಮನದಾಗಿತ್ತು, ಮಹಾ ಹಠಮಾರಿ, ಛಲದವಳಾಗಿದ್ದಳು. ಗೌಡ್ರ ಗದ್ಲಕ್ಕೆ ಎದುರಾಗಿ ಈ ನಾಟಕ ಪ್ರಯೋಗಿಸಿದಳು.

ಇಂಥ ಧೀಮಂತ ನಟಿ ಪ್ರೇಮಿ ಅಂಬಲಿ ಲಿಂಗನಗೌಡ ಹಾಗೂ ತಂಗಿ ಮಂಜುಳಾಳೊಂದಿಗೆ ಧಾರವಾಡದ ಹತ್ತಿರದ ಕಾರು ಅಪಘಾತದಲ್ಲಿ ನವಂಬರ್ ೨೦, ೧೯೮೦ರಂದು ಬೆಳಗಿನ ಜಾವ ೨–೩೦ರ ಸಮಯಕ್ಕೆ ನಿಧನಳಾದಳು.

## 'ರಂಗಭೂಮಿ ಹುಲಿ' ಖ್ಯಾತಿಯ ಉಮೇಶ ಕಲ್ಮನಿ



ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿಯವರ ಎರಡನೇ ಮಗ ಉಮೇಶ ಕಲ್ಮನಿ ಕಿತ್ತೂರ ಚೆನ್ನಮ್ಮ ನಾಟಕದಲ್ಲಿ ಮಲ್ಲಸರ್ಜನಾಗಿ

'ಹುಲಿಯ ಹೊಟ್ಟೆಯಲ್ಲಿ ಹುಲಿ ಹುಟ್ಟುವಂತೆ' ತಾಯಿ ರೆಹಮಾನವ್ವನ ಹೊಟ್ಟೆಯಲ್ಲಿ ಬಾಬಣ್ಣ, ಲಲಿತಮ್ಮ ಹುಟ್ಟಿದ ಮೇಲೆ ೧೯೪೩ರಲ್ಲಿ ಹುಟ್ಟಿದಾತ ಉಮೇಶ. ಹುಟ್ಟಿದ್ದು ರಂಗಭೂಮಿಯಲ್ಲಿ, ಬೆಳೆದದ್ದೂ ಅಲ್ಲಿಯೇ. ಇಟ್ಟ ಹೆಸರು 'ಉಮ್ಮರಸಾಬ' ಪ್ರಖ್ಯಾತನಾದದ್ದು ಉಮೇಶ ಕಲ್ಮನಿಯೆಂದು. ಗದಗ ನಗರದ ಕಲಾವಿದರ ಸಂಘದಿಂದ 'ರಂಗಭೂಮಿ ಹುಲಿ' ಎಂಬ ಬಿರುದು ಪಡೆದಿದ್ದಾರೆ. ತಮ್ಮ ನಾಟಕ ಕಂಪನಿ ಸ್ತ್ರೀ ರತ್ನದಲ್ಲಿ ಶಂಕರ, ತಾಯಿ ಕರುಳುವಿನಲ್ಲಿ ಶಿವಮೂರ್ತಿಯಾಗಿ ಅಭಿನಯಿಸಿ ಹೆಸರು ಮಾಡಿದ್ದರೂ, ರಂಗಭೂಮಿಯ ಅಲೆದಾಟದ ಬದುಕಿಗೆ ಬೇಸರಿಸಿ, ಊರು ಬಿಟ್ಟು ಲಾರಿ ರಿಪೇರಿ ಮಾಡುತ್ತ ಲಾರೀ ಚಾಲಕನಾದನು. ಅಜ್ಜಿ ಹಸ್ನಮ್ಮ ಸತ್ತ ಸುದ್ದಿ ತಿಳಿದು ಮಣ್ಣಿಗೆ ಬಂದಾಗ ತಾಯಿ , ಅಣ್ಣ, ಅಕ್ಕನ ಮಾತಿಗೆ ಕಟ್ಟು ಬಿದ್ದು ರಂಗಭೂಮಿ ನಟನೆಗೆ ಮರಳಿದನು. ತಾಯಿ ರೆಹಮಾನವ್ವನೇ ನಟನೆಗೆ ಮೂಲ ಗುರು, ಅಣ್ಣ ಬಾಬಣ್ಣನ ಪ್ರೋತ್ಸಾಹ ಹಾಗೂ ಅಕ್ಕ ಲಲಿತಮ್ಮ ಅಭಿನಯ ಹೇಳಿಕೊಟ್ಟು ನಟನೆಗೆ ನೀರೆರೆದರು; ಗುರುವಾದರು. ಉಮೇಶ ಕಲ್ಮನಿ ಅಭಿನಯದಲ್ಲಿ ಪಾರಂಗತನಾದನು.

ತಮ್ಮ ಕಂಪನಿಯ 'ಮಂಗಳಾ ನನ್ನ ಅತ್ತಿಗೆ' ಯಲ್ಲಿ ಶಂಕರ, ಮನೆಮಗಳು ನಾಟಕದಲ್ಲಿ ಶ್ರೀಪತಿಯಾಗಿ ಅಭಿನಯಿಸಿದ. ೧೯೭೦ರಲ್ಲಿ ತಮ್ಮ ಕಂಪನಿ ಬಿಟ್ಟು ಸೋದರಿಯರಾದ ಮಂಜುಳಾ ಮತ್ತು ಲಲಿತಾರೊಂದಿಗೆ ಗುಡಿಗೇರಿ ಕಂಪನಿಗೆ ಹೋದರು. ಅಲ್ಲಿ ರೈತನ ಮಕ್ಕಳು (ಕಾಳಿದಾಸ), ಬಸ್ ಕಂಡಕ್ಟರ್ (ದೇವಣ್ಣ) ಹೆಣ್ಣು ಮಗಳು (ಗೂರ), ಚಿನ್ನದ ಗೊಂಬೆ (ಕುರಹಟ್ಟಿ ಮಾಸ್ತರು) ಗಳಂಥ ನಾಟಕಗಳಲ್ಲಿ ಹೆಸರು ಪಡೆದರು. ಕಡಪಟ್ಟಿ ಕಂಪನಿ, ಸೂಡಿ ಕಂಪನಿ, ಕಮತಗಿ

ಕಂಪನಿ, ಚಿತ್ತರಗಿ ಕಂಪನಿ, ಜೇವರಗಿ ಕಂಪನಿ, ತಪಲಗುಂಡಿ ಕಂಪನಿ, ಕುಂದಾಪುರ ಸುಮಿತ್ರಾರ ಕಂಪನಿ, ಹಾನಗಲ್ಲ ಹಾಗೂ ಅಕ್ಕಲಕೋಟೆ ಮುಂತಾದ ಕಂಪನಿಗಳಲ್ಲಿ ನಾಯಕ, ವಿಲನ್, ಹಾಸ್ಯ ಪಾತ್ರಗಳನ್ನು ಮಾಡಿದನು. ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರನಾದನು. ಪೌರಾಣಿಕ, ಐತಿಹಾಸಿಕ ಹಾಗೂ ಭಕ್ತಿರಸ ಪ್ರಧಾನ ಪಾತ್ರಗಳಲ್ಲಿಯೂ ಅಭಿನಯಿಸಿ ಹೌದೆನ್ನಿಸಿಕೊಂಡದ್ದಿದೆ. ಕಿತ್ತೂರು ಚೆನ್ನಮ್ಮ ನಾಟಕದಲ್ಲಿ ಮಲ್ಲಸರ್ಜನ, ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಿಕಾರ್ಜುನನಾಗಿ ಅಭಿನಯಿಸಿರುವುದೇ ನಿದರ್ಶನ.

'ಬಂಗಾರದ ಗುಂಡು'ವಿನ ಶಿವರಾಮು, 'ರೈತನ ಮಕ್ಕಳು'ವಿನ ನಾಯಕ ಶಿವರುದ್ರ, 'ಹಸಿರು ಬಳೆ'ಯ ರಾಜೀವಪ್ಪ, 'ತಾಯಿ ಕರುಳು'ವಿನ ಕಲ್ಯಾಣಶೆಟ್ಟಿ, 'ನಮ್ಮೂರ ಸೊಸೆ'ಯ ಯಮಧರ್ಮ, 'ಚಿನ್ನದ ಬೊಂಬೆ'ಯ ಬಸವಣ್ಣ ಮುಂತಾದ ಪಾತ್ರಗಳನ್ನು ಮಾಡಿ ಮಾಲೀಕರ ಹಾಗೂ ಪ್ರೇಕ್ಷಕರ ಮನ ಗೆದ್ದರು. ಇವರ ನಟನಾ ಶಕ್ತಿಯನ್ನು ಮೆಚ್ಚಿದ ಗದಗದ ಹೆಬ್ಬಾಳ ರಾಮಣ್ಣನವರು ಮಗಳು ಚೆನ್ನಮ್ಮ (ಗೋರಿಮಾ)ನನ್ನು ಕೊಟ್ಟು ಮದುವೆ ಮಾಡಿದರು. ಇವರಿಗೆ ಜ್ಯೂನಿಯರ್ ಮುನ್ನಾ, ಸಾಯಿರಾಬಾನು ಹಾಗೂ ಜೀವನ ಸಾಬರೆಂಬ ಮೂವರು ಮಕ್ಕಳಿದ್ದು, ದೊಡ್ಡಪ್ಪನ ನಾಟಕ ತಂಡದಲ್ಲಿ ಅಭಿನಯಿಸುತ್ತಾರೆ. ಪತ್ನಿ ಚೆನ್ನಮ್ಮ ನಟನೆಗಿಳಿಯಲಿಲ್ಲ, ಆದರೆ ಅವರ ಸಹಾಯದಿಂದ 'ರೇಣುಕಾಚಾರ್ಯ ನಾಟ್ಯ ಸಂಘ ಕುಕನೂರ' ನಾಟಕ ಕಂಪನಿ ೧೯೮೦ರಲ್ಲಿ ಉಮೇಶ ಆರಂಭಿಸಿ, ೧೯೮೨ರಲ್ಲಿ ನಿಲ್ಲಿಸಿದರು. ಗುಡಗೇರಿ ನಾಟಕ ಕಂಪನಿ ಗುಲಬರ್ಗಾದಲ್ಲಿ ೧೯೮೩ರಲ್ಲಿ ಕ್ಯಾಂಪ್ ಮಾಡಿದಾಗ ಬಸ್ ಹಮಾಲ ದಲ್ಲಿ ನಟಿಸುತ್ತಿರುವಾಗ ತಾಯಿ ರೆಹಮಾನವ್ವ ಸತ್ತ ಸುದ್ದಿ ಬಂತು. ನಾಟಕದಲ್ಲಿ ಸೋದರ ಮುನ್ನಾನನ್ನು ಬಡಿಯುವ ದೃಶ್ಯದಲ್ಲಿ ತಾಯಿಯ ಅಗಲುವಿಕೆಯ ಸುದ್ದಿಕೇಳಿ ಇಬ್ಬರೂ ಕಣ್ಣೀರು ಸುರಿಸುತ್ತ ಪಾತ್ರ ಮಾಡಿದ ಜೀವನ ಇವರದ್ದಾಗಿದೆ. ಕಂಪನಿಯಿಂದಾದ ನಷ್ಟ ಸೋದರಿಯರಾದ ಲಲಿತಮ್ಮ, ಮಂಜುಳಾರ ಅಪಘಾತದಲ್ಲಾದ ಸಾವು, ತಾಯಿಯ ಸಾವು, ಪತ್ನಿ ಚೆನ್ನಮ್ಮನ ಸಾವು, ಮಕ್ಕಳ ಅನಾಥ ಸ್ಥಿತಿ, ಮುಂತಾದವುಗಳಿಂದ ರೋಸಿ ಕುಡಿತದ ದಾಸರಾದರು. ೨೦೦೬ರಲ್ಲಿ ನಿಧನರಾದಾಗ ಅವರಿಗೆ ೬೦ ವರ್ಷ ವಯಸ್ಸಾಗಿತ್ತು.


## ಮಂಜುಳಾ ಕಲ್ಮನಿ



ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿಯವರ ಕಿರಿಯ ಮಗಳು ರಂಗ ಅಭಿನೇತ್ರಿ ಮಂಜುಳಾ

ಮುದ್ಗಲ್ ಕ್ಯಾಂಪಿನಲ್ಲಿ ಸತ್ಯ ಹರಿಶ್ಚಂದ್ರ ನಾಟಕ, ೧೯೫೨ರ ಮೊಹ್ರಂ ಹಬ್ಬದಂದು ತಾರಾಮತಿ ಪಾತ್ರ ಮಾಡುವಾಗ ಬೆಳಗಿನ ೨-೩೦ ಗಂಟೆಗೆ ಗ್ರೀನ್ ರೂಮಿನಲ್ಲಿ ಹೆಣ್ಣು ಕೂಸಿಗೆ ರೆಹಮಾನವ್ವ ಕಲ್ಮನಿ ಜನ್ಮ ನೀಡಿದಳು. ಆ ಕೂಸು ಮಂಜುಳಾ. ಆಕೆ ೧೯೮೦ರ ನವೆಂಬರ್ ೨೦ರಂದು ಅದೇ ಮೊಹ್ರಂ ಹಬ್ಬದಂದು ೨೮ ವರ್ಷಗಳ ನಂತರ ಬೆಳಗಿನ ಅದೇ ೨-೩೦ರ ವೇಳೆಗೆ ಅಕ್ಕ ಲಲಿತಮ್ಮ ನೊಂದಿಗೆ ಭೀಕರ ಕಾರ ಅಪಘಾತದಲ್ಲಿ ನಿಧನ ಹೊಂದಿದಳು. ಈಕೆಯ ಹೆಸರು 'ಮಹ್ಮದಬಿ'. ಪ್ರೀತಿಯಿಂದ ಮಂಜುಳಾ ಎಂದು ಕರೆದು ಅದೇ ಹೆಸರಿನಲ್ಲಿ ಪ್ರಖ್ಯಾತಿ ಪಡೆದಳು. ತಾಯಿಯ ಹಾಗೂ ಅಣ್ಣನ ಕಂಪನಿಗಳಲ್ಲಿ ಬಾಲ ಪಾತ್ರ ಹಾಗೂ ಡಾನ್ಸ್ ಮಾಡುತ್ತಿದ್ದಳು. ಅಣ್ಣ ಬಾಬಣ್ಣ ಹಾಗೂ ಹದ್ಲಿ ಶಿವಣ್ಣ ಬೆಳವಣಿಕಿ ಅಮರೇಶ್ವರ ನಾಟ್ಯ ಸಂಘದ ಮಾಲೀಕರಾಗಿದ್ದರು. ಆಗ ಮನೆ ಮಗಳು ನಾಟಕದ ಮುಖ್ಯ ಪಾತ್ರಧಾರಿ ಹೇಳದೆ ಬಿಟ್ಟು ಹೋಗಲು ಆ ಪ್ರಮುಖ ಪಾತ್ರ ನಿರ್ವಹಿಸಿದಳು. ಗುಡಿಗೇರಿ ಕಂಪನಿಯಲ್ಲಿ ಬಸ್ ಕಂಡಕ್ಟರ್‌ದ ಖಾನಾವಳಿ ಚೆನ್ನಿ, ಗೌಡ್ರ ಗದ್ದದ ವಿಮಲಾ ಪಾತ್ರದಲ್ಲಿ ಗುರುತಿಸಿಕೊಂಡಳು. ರೈತನ ಮಕ್ಕಳು ನಾಟಕದಲ್ಲಿ ಅಕ್ಕ ಲಲಿತಾ, ಭಾರತಿ, ಭಾವ ಅಂಬಲಿ ಲಿಂಗನಗೌಡ ಶಿವರುದ್ರ, ಈಕೆ ಅವರ ತಂಗಿಯಾಗಿ ಅಭಿನಯಿಸಿ ಪ್ರಖ್ಯಾತಳಾದಳು.

ಗುಡಿಗೇರಿ ಎನ್. ಬಸವರಾಜರು ತಾವು ಬರೆದ ರೈತನ ಮಕ್ಕಳು ನಾಟಕ ಚಲನಚಿತ್ರವಾಗಿ ಮಾಡಲು ಚಿತ್ರೀಕರಣ ಹುಬ್ಬಳ್ಳಿ ನೃಪತುಂಗ ಬೆಟ್ಟದಲ್ಲಿ ನಡೆಸಿದ್ದರು. ಶಿವರುದ್ರನ ಪಾತ್ರ ಮಾಲೀಕ ಗುಡಿಗೇರಿ ಬಸವರಾಜರೇ ಮಾಡುತ್ತಿದ್ದರು. ತಾಯಿಯಾಗಿ ರೆಹಮಾನವ್ವ ಕಲ್ಮನಿ, ತಂದೆಯಾಗಿ ಚಿದಂಬರ ಜೋಶಿ, ಇನ್ನುಳಿದ ಪಾತ್ರಗಳಲ್ಲಿ ಲಲಿತಮ್ಮ, ಅಂಬಲಿ ಲಿಂಗನಗೌಡ ಅಭಿನಯಿಸುತ್ತಿದ್ದರು. ಇದರಲ್ಲಿ ಮಂಜುಳಾಗೆ ಮಹತ್ವದ 'ತಂಗಿ' ಪಾತ್ರ ನೀಡಿದ್ದರು. ತಂಗಿಯನ್ನು ಸಿನೆಮಾ ದೃಶ್ಯದಲ್ಲಿ ರೌಡಿಗಳು ಬೆಟ್ಟದಲ್ಲಿ ಅಟ್ಟಿಸಿಕೊಂಡು ಬರಬೇಕು. ಮೂರೂವರೆ ಹಾರ್ಸ್ ಪಾವರಿನ ಬುಲೆಟ್ ಗಾಡಿಯಲ್ಲಿ ರಭಸವಾಗಿ ಬರುವ ತಂಗಿ (ಮಂಜುಳಾ) ಅಭಿನಯದ ಚಿತ್ರೀಕರಣವಾಗಲಿತ್ತು ಇದಕ್ಕಾಗಿ



ರಂಗ ಅಭಿನೇತ್ರಿ, ರೆಹಮಾನವ್ವ ಕಲ್ಮನಿಯವರ ಕಿರಿಯ ಮಗಳು ಮಂಜುಳಾ ಕಲ್ಮನಿ

ಗುಡಿಗೇರಿ ಬಸರಾಜರು, ನೃಪತುಂಗ ಬೆಟ್ಟದ ತಿರುವಿನಲ್ಲಿ ವೇಗವಾಗಿ ಮೂರುವರೆ ಎಚ್. ಪಿ. ಬುಲೆಟ್ ಮೋಟಾರ್ ಬೈಕ್ ಓಡಿಸುವ ತರಬೇತಿ ನೀಡಿದ್ದರು. ರೈತನ ಮಕ್ಕಳು ಚಲನ ಚಿತ್ರದಲ್ಲಿ ಮಂಜುಳಾ ಪೂರ್ಣ ಪಾತ್ರ ವಹಿಸಿದ್ದರೆ ಆಕೆಗೆ ಸಿನಿಮಾರಂಗದಲ್ಲಿ ಉಜ್ವಲ ಭವಿಷ್ಯವಿದೆಯೆಂದು ಅವರು ನಂಬಿದ್ದರು. ಆ ಕನಸು ನನಸಾಗಲು ಮಂಜುಳಾ ಬದುಕಿ ಉಳಿಯಲಿಲ್ಲ. ೧೯೮೦ರ ೨೦ ನೇ ನವೆಂಬರ್ ಬೆಳಗಿನ ೨–೩೦ರ ಕಾರ್ ಅಪಘಾತದಲ್ಲಿ ಗುಡಿಗೇರಿ ಬಸವರಾಜರ ನಾಟಕ ಕಂಪನಿ ಪ್ರಧಾನ ಪಾತ್ರವಹಿಸುತ್ತಿದ್ದ ಲಲಿತಮ್ಮ ಕಲ್ಮನಿ, ಅಂಬಲಿ ಲಿಂಗನಗೌಡ ಹಾಗೂ ಮಂಜುಳಾ ಬಾರದ ದಾರಿ ಹಿಡಿದು ಹೆಣವಾಗಿ, ರಕ್ತದ ಮಡುವಿನಲ್ಲಿ ಮಲಗಿದ್ದರು. ಎಲ್ಲರಿಗಿಂತ ಕಿರಿಯ ರಂಗ ನಟ ಮಹಮ್ಮದರಫಿ ಮುನ್ನಾ ಅಪಘಾತದಲ್ಲಿ ವಿಕಾರ ಮುಖ ಪಡೆದು ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಗುಣಮುಖನಾದ.

## ಮಹ್ಮದ ರಫಿ ಮುನ್ನಾ ಕಲ್ಮನಿ

ರೆಹಮಾನವ್ವನ ಕೊನೆಯ ಹಾಗೂ ಪ್ರೀತಿಯ ಮಗ ಮಹ್ಮದರಫಿ ಮುನ್ನಾ ಯುವ ಪೀಳಿಗೆಯ ನಟರಲ್ಲಿಯೇ ಪ್ರಥಮ ಪಂಕ್ತಿಯಲ್ಲಿ ಬರುವವನು. ದೇವದುರ್ಗ ತಾಲೂಕಿನ ಶರಣ ಬಿಬ್ಬಿ ಬಾಚರಸನು ಅನ್ನದಾಸೋಹಮಾಡಿ ಕೀರ್ತಿ ಪಡೆದ ಸ್ಥಳ ಗಬ್ಬೂರು ಕ್ಯಾಂಪಿನಲ್ಲಿ ೧೯೪೯ರಲ್ಲಿ ತಾರಾಮತಿ ಪಾತ್ರ ಮಾಡುತ್ತಲೇ ಈತನಿಗೆ ಜನ್ಮ ನೀಡಿದರು. ಪೌರಾಣಿಕ ಪಾತ್ರಗಳನ್ನು ಅದರಲ್ಲಿಯೂ ದೈತ್ಯ ಪಾತ್ರ ನಿರ್ವಹಿಸಬಲ್ಲ ನಟರೆಂದರೆ ಹಲಿಗೇರಿ ಭೀಮರಾವ್, ಮಂಗಳೂರು ವೀರಣ್ಣ, ಎಚ್.ಟಿ. ಅರಸರು ಪ್ರಸಿದ್ಧರು. ಇವರ ಸಾಲಿನಲ್ಲಿ ಬರುವಂಥ ನಟಶೇಖರ ಮುನ್ನಾ !

ಸುಮತಿಶ್ರೀಯವರು ಪ್ರಸಿದ್ಧಿ ಪಡೆದ ಶ್ರೀದೇವೀ ಮಹಾತ್ಮೆಯಲ್ಲಿ ಶುಂಭನಾಗಿ ಪಾತ್ರವಹಿಸಿದ, ದೈತ್ಯ ಪಾತ್ರಕ್ಕೆ ಹೆಸರಾದನು. ತಮ್ಮ ತಾಯಿಯ ಕಂಪನಿಯ ರಾಜಾವಿಕ್ರಮ ನಾಟಕದಲ್ಲಿ ವಿಕ್ರಮರಾಜನ ಮಗನಾಗಿ ಪಾತ್ರ ವಹಿಸಿ ಹೆಸರಾದನು. ಇದೇ ಪಾತ್ರವನ್ನು ಗುಡಿಗೇರಿ ಬಸವರಾಜರ ರಾಜಾ


ರಂಗ ಅಭಿನೇತ್ರಿ ರೆಹಮಾನವ್ವ ಕಲ್ಮನಿ ಇವರ ಕಿರಿಯ ಮಗ ಮಹ್ಮದರಫಿ ಮುನ್ನಾ ರಕ್ತರಾತ್ರಿ ನಾಟಕದಲ್ಲಿ ಭೀಮಸೇನನಾಗಿ

ವಿಕ್ರಮದಲ್ಲಿ, ಗುಡಿಗೇರಿ ದುರ್ಜಯನಾಗಿ ಅಭಿನಯಿಸುವಾಗ ಅದೇ ವಿಕ್ರಮ ಮಹಾರಾಜನ ಬಾಲ ಕುವರನಾಗಿ ಅಭಿನಯಿಸಿ ಪ್ರೇಕ್ಷಕರ ಗಮನ ಸೆಳೆಯುತ್ತಿದ್ದನು. ಅಣ್ಣ ಬಾಬಣ್ಣನ ನಾಟಕ ಕಂಪನಿಯ 'ರಕ್ತ ರಾತ್ರಿ ನಾಟಕ'ದಲ್ಲಿ ಅವ್ವ ರೆಹಮಾನವ್ವ ದ್ರೌಪದಿಯಾಗಿ ಅಭಿನಯಿಸುತ್ತಿದ್ದರೆ, ಭೀಮನಾಗಿ ಅಭಿನಯಿಸಿ ಅವ್ವನ ಪ್ರಶಂಸೆಗೆ ಪಾತ್ರನಾಗುತ್ತಿದ್ದನು.

ಭೂ ಕೈಲಾಸದ ಗಣಪತಿ, ರಕ್ತರಾತ್ರಿಯ ಭೀಮ, ಗೌಡ್ರುಗದ್ದಲದ ರಾಮ, ಮನೆಮಗಳು ಜಗದೀಶ/ಶ್ರೀಪತಿ, ಗೌಡರ ಗಂಗಿಯ ಬಿಲ್ವ, ಮುಡಿ ಕಟ್ಟಿದ ಮಗದ ರಾಮು ಸತ್ಯಂಶಿವಂ ಸುಂದರಂದಲ್ಲಿ ಹಾಸ್ಯ ಪಾತ್ರ, ಕರಿಬಸವೇಶ್ವರ ಮಹಾತ್ಮೆಯಲ್ಲಿ ಕಾಲಭೈರವ, ದೇವೀ ಮಹಾತ್ಮೆಯಲ್ಲಿ ಶುಂಭ, ಭೀಮಾಂಬಿಕೆ ಮಹಾತ್ಮೆ ಸತ್ಯಪ್ಪಸೆಟ್ಟಿ/ ಕ್ಯಾದಿಗೆಪ್ಪಯ್ಯ ಮುಂತಾದ ಪೌರಾಣಿಕ ಪಾತ್ರಗಳಲ್ಲದೆ, ಸಾಮಾಜಿಕ ನಾಟಕಗಳಾದ ಚೆನ್ನಪ್ಪ ಚನ್ನಗೌಡ, ಬಂಜೆತೊಟ್ಟಿಲು, ನೀನು ಸಾಹುಕಾರನಾಗು, ಬದುಕು ಬಂಗಾರವಾಯಿತು. ಎಚ್ಚರತಂಗಿ ಎಚ್ಚರ, ಗೋಮುಖವ್ಯಾಘ್ರಗಳಲ್ಲಿ ನಾಯಕ ಪಾತ್ರಗಳನ್ನು, ಹಾಸ್ಯ ಪಾತ್ರಗಳನ್ನು, ವಿಲನ್ ಪಾತ್ರಗಳನ್ನು ನಿರ್ವಹಿಸಿದ್ದಾನೆ. ಇವರು ಎಂದೂ ಸ್ತ್ರೀಪಾತ್ರಗಳನ್ನು ಮಾಡಲಿಲ್ಲ. ಸುಮತಿಶ್ರೀಅವರ ಕಂಪನಿ ಹಾಗೂ ರಾಜು ತಾಳೀಕೋಟಿಯವರ ಕಂಪನಿ ನಾಟಕಗಳ ಪಾತ್ರಗಳ ತೃಪ್ತಿ ನೀಡಿವೆಯೆಂದು ಹೇಳುತ್ತಿದ್ದ, ನಾಡಿನ ಅನೇಕ ನಾಟಕ ಕಂಪನಿಗಳಲ್ಲಿ ಪ್ರಸಿದ್ಧ ಕಲಾವಿದನಾಗಿ ಮಿಂಚಿದ್ದಾನೆ.

ಸೋದರಿಯರಾದ ಲಲಿತಮ್ಮ ಮಂಜುಳಾ ಧಾರವಾಡದ ಹತ್ತಿರ ನಡೆದ ಭೀಕರ ಕಾರ ಅಪಘಾತದಲ್ಲಿ ಅಸುನೀಗಿದರು. ಅದೇ ಭೀಕರ ಅಪಘಾತದಲ್ಲಿ ಮಾರಣಾಂತಿಕವಾಗಿ ಗಾಯಗೊಂಡು ಮಣಿಪಾಲ ಆಸ್ಪತ್ರೆಯಲ್ಲಿ ತಾಯಿ ರೇಹಮಾನವ್ವ ಅಣ್ಣ ಬಾಬಣ್ಣ ತೋಟಮಾರಿ ಚಿಕಿತ್ಸೆ ಕೊಡಿಸಿದರು. ನೆಟ್ಟಗಾಗಿ ಮುಂದೆ ಸಾಮಾಜಿಕ ಹಾಗೂ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ

ಮನೋಜ್ಞ ಅಭಿನಯ ನೀಡಿದ ಕಲಾವಿದ. ೨೦೦೯ರಲ್ಲಿ ಅನಾರೋಗ್ಯದಿಂದ ನಿಧನರಾದರು. ರಾಜು ತಾಳಿಕೋಟಿಯವರ ಸೋದರ ಸಂಬಂಧಿ ಹುಬ್ಬಳ್ಳಿಯ ಆಶಾಬಿಯನ್ನು ಮದುವೆಯಾಗಿದ್ದರು. ತಂದೆ ನಿಧನದ ನಂತರ ತಾಯಿಯೊಂದಿಗಿದ್ದು ಇವರ ಇಬ್ಬರು ಮಕ್ಕಳು ಓದುತ್ತಿದ್ದಾರೆ, ಬಾಬಣ್ಣ ಉಮೇಶ, ಮುನ್ನಾ, ಲಲಿತಮ್ಮನ ಮಕ್ಕಳು ರಂಗಭೂಮಿ ಕಲಾವಿದರಾಗಿದ್ದು ಒಳ್ಳೆಯ ಹೆಸರು ಪಡೆದಿದ್ದಾರೆ.

## ನಾಟಕ ಕಂಪನಿ ಮಾಲೀಕಳಾಗಿ



ರಂಗ ಅಭಿನೇತ್ರಿ
ರೆಹಮಾನವ್ವ ಕಲ್ಮನಿ

ರೆಹಮಾನವ್ವ ಕಲ್ಮನಿ ಆರಂಭದಿಂದಲೂ ನಾಟಕ ಕಂಪನಿಗಳಲ್ಲಿದ್ದು ಬೆಳೆದು ಬಂದಾಕೆ. ಚಿಕೇನಕೊಪ್ಪದ ಪತಿ ನಂದಪ್ಪನ ಅಮೆಚ್ಯೂರ ಕಂಪನಿ, ತಾನು ಕಟ್ಟಿದ ಮಹಾಮಾಯಾ ಸಂಗೀತ ನಾಟಕ ಮಂಡಳಿ, ಶ್ರೀ ಲಲಿತ ಕಲಾ ನಾಟ್ಯಸಂಘ (೧೯೫೦) ಕುಕನೂರು, ಹಿರಿಯ ಮಗ ಬಾಬಣ್ಣನ ಶ್ರೀವಿಜಯ ಲಕ್ಷ್ಮೀನಾಟ್ಯ ಸಂಘ, ಉಮೇಶ ಕಲ್ಮನಿಯ ರೇಣುಕಾಚಾರ್ಯ ಸೇವಾ ಸಂಗೀತ ನಾಟಕ ಮಂಡಳಿ ಮುಂತಾದವುಗಳು ರೆಹಮಾನವ್ವನ ಉಸ್ತುವಾರಿಯಲ್ಲಿ ಬಂದವುಗಳೇ ಆಗಿವೆ. ಹೆಣ್ಣುಮಕ್ಕಳಾದ ಲಲಿತಾ, ಮಂಜುಳಾ, ತಮ್ಮ ಒಡೆತನದಲ್ಲಿ ನಾಟಕ ಕಂಪನಿಗಳನ್ನು ಕಟ್ಟದಿದ್ದರೂ ತಾವು ಪ್ರಬುದ್ಧತೆಗೆ ಬಂದ ಮೇಲೆ ತಾವು ನಟಿಸುತ್ತಿದ್ದ ನಾಟಕ ಕಂಪನಿ ಗಳಲ್ಲಿ ತಾವೇ ಒಡೆಯರೆಂಬಂತೆ ಇದ್ದವರು. ಆ ಕಂಪನಿಗಳ ಜವಾಬ್ದಾರಿ ಹೊತ್ತವರು. ಈಕೆಯ ವಿಶೇಷವೇನೆಂದರೆ ಮಾಲೀಕಳೆಂಬ ಅಹಂಕಾರವಿರಲಿಲ್ಲ, ಯಾರಮೇಲೂ ಸಿಟ್ಟು ಸೆಡವು ಮಾಡುತ್ತಿರಲಿಲ್ಲ, ತನಗಿಂತ ಹಿರಿಯರಿದ್ದರೆ ಗೌರವ, ಸಮಾನ ವಯಸ್ಕರರಿದ್ದರೆ ಪ್ರೀತಿ–ವಿಶ್ವಾಸ, ಮಕ್ಕಳ ವಾರಗಿಯವರಿದ್ದರೆ ಮಾತೃ ವಾತ್ಸಲ್ಯದೊಂದಿಗೆ ನಡೆದುಕೊಂಡಿದ್ದಾಳೆ. ತನ್ನ ಹರೆಯದ ಕಾಲದಲ್ಲಿಯೇ ಭರ್ಜರಿ ಸೀರೆ–ಕುಪ್ಪಸ–ವಸ್ತ್ರ ಒಡವೆಗಳನ್ನಿಟ್ಟು ಮೆರೆದವಳಲ್ಲವೆಂದು ಹೇಳುತ್ತಾರೆ. ಮಗ ಬಾಬಣ್ಣ ಕವಿಧುತ್ತರಗಿಯವರು ಇದನ್ನು ಸಮರ್ಥಿಸುತ್ತಾರೆ.

ತನಗೊಂದು ಬೇರೊಬ್ಬರಿಗೊಂದು ಚಹಾ–ಫಳಾರ– ಊಟವಿರುತ್ತಿದ್ದಿಲ್ಲ. ಕಂಪನಿ ಆಳು–ಕಾಳು ರಂಗಸಜ್ಜಿಕೆಯವರು ನಟ–ನಟಿಯರು ಉಂಡದ್ದನ್ನೇ ಊಟಮಾಡುತ್ತಿದ್ದಳು. ನಾಟಕದ ಕಲೆಕ್ಷನ್ ಚೆನ್ನಾಗಿದ್ದಾಗಲೆಲ್ಲ ಕರಿಗಡುಬಿನ ತುಪ್ಪದ ಊಟ ಮಾಡಿಸುತ್ತಿದ್ದಳು. ಬೂಂದಿ, ಜಿಲೇಬಿ ಆ ಕಾಲದ ವಿಶೇಷ ಭಕ್ಷ್ಯಭೋಜ್ಯಗಳನ್ನು ತಿನ್ನಿಸುತ್ತಿದ್ದಳು. ಉಪ್ಪಿಟ್ಟು, ಮಂಡಾಳ ವಗ್ಗರಣೆ, ಭಜಿ(ಪಕೋಡ), ಮಿರ್ಚಿ ಮತ್ತೆ ಮಂಡಾಳು, (ಮಂಡಕ್ಕಿ) ಸೇವು ಡಾಣಿ, ಉಳ್ಳಾಗಡ್ಡೆ ಚಹಗಳ ಸರಬರಾಜು ಇದ್ದೇ ಇರುತ್ತಿತ್ತು.

ಅನಾಥ ಹುಡುಗರು, ದಿಕ್ಕೇಡಿಗಳು, ಮನೆಯಿಂದ ಓಡಿ ಬಂದವರಿಗೆ, ಖಾನಾವಳಿ ಚಹಾದ ಹೋಟ್ಲು ಹಾಗೂ ನಾಟಕಕಂಪ್ನಿ ತವರು ಮನೆಗಳಿದ್ದಂತೆ. ಬೆಟಗೇರಿ ಪರಮೇಶಿ ಆರೆಂಟು ವರ್ಷದ ಹುಡುಗನಿದ್ದಾಗಿನಿಂದ ಇದ್ದವನನ್ನು ಸಾಕುಮಗನಂತೆ ಜೋಪಾನಮಾಡಿದಳು. ಅವನು ಸತ್ತಾಗ ಮಕ್ಕಳು ಸತ್ತಷ್ಟು ಅತ್ತಳು. ನಾಟಕ ಬಂದಿಟ್ಟಿದ್ದಳು. ಸಂಗಯ್ಯ, ಚೌಡಾ, ಬಳಗ ಇಂಥ ಹೆಸರಿನ ಹುಡುಗರು ಇದ್ದರು. ಇವರು ವಯಸ್ಸಿಗೆ ಬಂದಾಗ ಕನ್ಯಾನೋಡಿ ಲಗ್ನ ಮಾಡಿದ್ದಾಳೆ. ಬಳಗನ ಲಗ್ನದ ಎಲ್ಲ ಖರ್ಚುವಹಿಸಿದ್ದಳು. ಕಂಪನಿಯಲ್ಲಿ ನಟ–ನಟಿಯರ ಮದುವೆ ಸಹಜ, ಅವಕ್ಕೂ ಸಹಾಯ ಹಸ್ತವಿದ್ದೇ ಇರುತ್ತಿತ್ತು. ಅಡಿಗೆ ಆಳು, ನೀರುತರುವವರು ಪ್ರಚಾರ ವಿಭಾಗ, ಪರದೆ ಎಳೆಯುವವರು, ಕಲಾವಿದರು ಸೇರಿದಂತೆ ಹೊರಗಿನಿಂದ ಆಕಸ್ಮಿಕ ಅತಿಥಿಗಳು ಸೇರಿದರೆ ೧೦೦ ಜನ ಊಟ ಬೋರ್ಡಿಂಗಿನಲ್ಲಾಗುತ್ತಿತ್ತು. ಇವು ಯಾವುದಕ್ಕೂ ಲೆಕ್ಕವಿಡುತ್ತಿರಲಿಲ್ಲ.

ಕಲಾವಿದರ ಮೇಲೆ ಬಹಳ ಹಿಡಿತವಿತ್ತು. ಅವರ ಪ್ರೇಮ ಪ್ರಕರಣ, ದುಶ್ಚಟ, ಷೋಕಿ, ಅವರ ಪ್ರಚಾರಪ್ರಿಯತೆ ಮುಂತಾದವುಗಳ ಮೇಲೆ, ಇನ್ನೊಂದು ಕಂಪನಿಗೆ ಹೋಗುವುದರ ಬಗ್ಗೆ, ನಾಟಕ ಪ್ರಯೋಗಕ್ಕೆ ಕೈಕೊಡುವವರ ಮೇಲೆ ಸದಾ ಹದ್ದಿನ ಕಣ್ಣಿಟ್ಟಿರುತ್ತಿದ್ದಳು. ನಟರಾಗಲಿ, ನಟಿಯರಾಗಲಿ, ಊರಲ್ಲಿ, ಬಜಾರದಲ್ಲಿ ತಿರುಗಾಡುವುದನ್ನು ನಿಷೇಧಿಸುತ್ತಿದ್ದಳು, ಊರಿನ ಜನರೊಡನೆ ಬೆರೆತು ಮೈಮೇಲೆ ಕುತ್ತು ತಂದುಕೊಳ್ಳಬಾರದೆನ್ನುವ ಮುಂಧೋರಣೆಯಿತ್ತು. ಹಿತ್ತಾಳೆ ಕಿವಿಯ ರೆಹಮಾನವ್ವ ನಟ–ನಟಿಯರಿರಲಿ, ಸ್ವಂತ ಮಕ್ಕಳನ್ನು ಬಿಡುತ್ತಿರಲಿಲ್ಲ. ಆಕೆಯ ಹೇಳಿಕೆಯ ಪ್ರಕಾರವೇ ಮಕ್ಕಳು ನಡೆದುಕೊಳ್ಳಬೇಕು. ಏಳೆಂದರೆ ಏಳಬೇಕು. ಕೂಡೆಂದರೆ ಕೂಡ್ರಬೇಕು. ಪಾತ್ರ, ಅಭಿನಯ, ನೃತ್ಯ ಸಂಭಾಷಣೆಗಳನ್ನು ತಿದ್ದಿದಂತೆ ವೈಯಕ್ತಿಕ ಬದುಕಿನಲ್ಲಿಯೂ ಮಕ್ಕಳ ವಿಷಯಕ್ಕೆ ನಡೆದುಕೊಳ್ಳುತ್ತಿದ್ದಳು. ವಯಸ್ಸಿಗೆ ಬಂದ ಮಕ್ಕಳು,

ಪ್ರತಿಭಾವಂತ ಮಕ್ಕಳು ರಂಗಭೂಮಿಯಲ್ಲಿ ಬೇಡಿಕೆ ಇರುವ ಮಕ್ಕಳು ಹಾಗೂ ಇತರ ನಟರು ಇವರ ಕಪಿಮುಷ್ಟಿಯಲ್ಲಿರಲು ಒಪ್ಪುತ್ತಿರಲಿಲ್ಲ. ಮಕ್ಕಳೊಡನೆ ಸಿಟ್ಟು ಸೆಡವು ಮಾಡಿಕೊಳ್ಳುತ್ತಿದ್ದಳು. ಹೀಗಾಗಿಯೇ ಹಿರಿಯ ಮಗಳು ಲಲಿತಮ್ಮ, ಕಿರಿಯ ಮಗಳು ಮಂಜುಳಾ ಸ್ವಂತ ಕಂಪನಿ ಬಿಟ್ಟು ಹೊರಗೆ ಹೋದರು. ನಾಡಿನ ಪ್ರತಿಷ್ಠಿತ ಕಂಪನಿಗಳಲ್ಲಿ ಪ್ರಬುದ್ಧ ಅಭಿನಯದಿಂದ ಪ್ರಖ್ಯಾತಿ ಪಡೆದರು. ಎಲ್ಲ ಮಕ್ಕಳೂ ಕಲಾವಂತರು. ಎಲ್ಲರೂ ಕೂಡಿ ಹೋಗಿದ್ದರೆ ಕುಕನೂರಿನ ಶ್ರೀ ಲಲಿತಕಲಾ ನಾಟ್ಯ ಸಂಘ ಗುಬ್ಬೀ ವೀರಣ್ಣನವರ ಕಂಪನಿ, ಏಣ್ಗಿ ಬಾಳಪ್ಪನವರ ಕಂಪನಿಯಂತಾಗುತ್ತಿತ್ತು, ಆದರೆ ಕಾಲನ ಕೈವಾಡದಲ್ಲಿ ವೈಯಕ್ತಿಕ ಬದುಕಿನ ಹಿಡಿತವಿರದ ನಡವಳಿಕೆಯಿಂದಾಗಿ ಸಾಧ್ಯವಾಗಲಿಲ್ಲವೇನೋ.

ಭಾಗ್ಯವಾನ ಪತ್ತಾರ ತುಂಬ ಸೌಜನ್ಯದ ಗುಣಶೀಲನಟ, ತಳಕಲ್ಲದವರು. ಸ್ತ್ರೀ–ಪುರುಷ ಪಾತ್ರಗಳನ್ನು, ಸಂಗೀತವಾದ್ಯಗಳನ್ನು ನುಡಿಸಬಲ್ಲ ರೆಹಮಾನವ್ವ ನವರ ಪ್ರೀತಿಗೆ ಪಾತ್ರರಾದ ನಟರು. ೧೯೬೧–೬೨ ಇರಬೇಕು. ಕೊಳಚಿ–ಮರುಳಸಿದ್ಧಯ್ಯ, ನಾಗಸಮುದ್ರ ಹನುಮಂತಪ್ಪ, ವೆಂಕಟಾಪುರ ಷಣ್ಮುಖಪ್ಪ, ಸೊರಬದ ಗೋಪಾಲ ಬಾಬು ಮುಂತಾದ ಸಹ ನಟರೊಂದಿಗಿದ್ದ. ಅಕ್ಕಲಕೋಟೆ ಕ್ಯಾಂಪ್ ನ್ಯಾಮತಿ ಶಾಂತಪ್ಪನವರ ಕಂಪನಿ ನಟ ಹಾಗೂ ಮ್ಯಾನೇಜರ್ ಸಿದ್ಧಲಿಂಗಪ್ಪನವರು ತಮ್ಮ ಊರಾದ ಸಿಂದಗಿಯ ಹಿರಿಯರನ್ನು ತಾಯಿಕರುಳು ನಾಟಕಕ್ಕೆ ಕರೆದುಕೊಂಡು ಬಂದಿದ್ದರು. ಭಾಗ್ಯವಾನ ಪತ್ತಾರ ಸಿದ್ಧಲಿಂಗಪ್ಪ ನವರನ್ನು ಕೂಡ್ರಿಸುವುದು, ಪರಾಮರಿಕೆ ಮಾಡಿದ್ದನ್ನು ಮಾಲೀಕಳಾದ ರೆಹಮಾನವ್ವ ಗಮನಿಸಿದಳು. ಇಷ್ಟೊತ್ತಿಗೆ ಬೆಳವಣಿಕಿ ಸಂಗಪ್ಪನವರು ತಮ್ಮ ವೀರಭದ್ರೇಶ್ವರ ನಾಟಕ ಮಂಡಳಿ ಮಾಡುವವರಿದ್ದಾರೆಂಬ ಸುದ್ದಿ ಹಬ್ಬಿತ್ತು. ಮ್ಯಾನೇಜರ್ ಸಿದ್ಧಲಿಂಗಪ್ಪ ತನ್ನ ಕಂಪನಿ ನಟರನ್ನು ಕರೆದೊಯ್ಯಲು ಬಂದಿರಬೇಕೆಂದು ಭಾಗ್ಯವಾನನನ್ನು ಕರೆದು 'ತಮ್ಮಾ ನೀನು ನಮ್ಮ ಕಂಪನ್ಯಾಗ ಇರಬ್ಯಾಡ, ಕೊಡಬೇಕಾದ ಹಣ ಕೊಟ್ಟು, ಜಾಗಾ ಬಿಡು' ಎಂದು ಕಟ್ಟಪ್ಪಣೆ ಮಾಡಿ ಮಗ ಉಮೇಶನನ್ನು ಕಾಯಲು ಹಚ್ಚಿದಳು. 'ಯಕ್ಕಾ ದೂರದ ಅಕ್ಕಲಕೋಟೆ ಇದು–ನಾನು–ನೀನು ತಳಕಲ್ಲ–ಕುಕನೂರಿನವರು, ಹೇಳಿಕಿ ಮಾತು ಕೇಳಬಾಡ, ನಾನು ಎಲ್ಲಿಗೂ ಹೋಗುವುದಿಲ್ಲ'ವೆಂದು ಪರಿಪರಿಯಾಗಿ ಬೇಡಿಕೊಂಡರೂ ಕೇಳಲಿಲ್ಲ. ಕಿರಿಕಿರಿ ಶುರುಮಾಡಿಬಿಟ್ಟಳು. ಇದರಿಂದ ಬೇಸರಗೊಂಡು ಸಿಂದಗಿಯಲ್ಲಿದ್ದ ಮ್ಯಾನೇಜರ್ ಸಿದ್ಧಲಿಂಗಪ್ಪನಿಗೆ ತಿಳಿಸಿದಾಗ, ಬೆಳವಣಿಕಿ ಕಂಪನಿ ಕಟ್ಟಲಿದ್ದ ಮಾಲಿಕ ಸಂಗಪ್ಪನವರಿಂದ ಹಣ ತಂದು ರೆಹಮಾನವ್ವನ ಸಾಲ ತೀರಿಸಿ ಹೊರಗೆ ಹೋದ. ಜೊತೆಗೆ ನಾಲ್ಕೈದು

ಕಲಾವಿದರನ್ನು ಕರೆದೊಯ್ದನು. ಮುಂದೆ ನಟರಿಲ್ಲದೆ ತಾಯಿಕರುಳು ನಾಟಕ ಪ್ರಯೋಗಕ್ಕೆ ತಡೆಯುಂಟಾಯಿತು.

ಮತ್ತೊಂದು ಪ್ರಸಂಗ; ನಾಡಿನ ಶ್ರೇಷ್ಠ ಹಾಸ್ಯಗಾರ ನಟ, ಕವಿ, ನಾಟಕಕಾರ ಹಾಗೂ ರಂಗನಿರ್ದೇಶಕ ವರವಿ ಫಕೀರಪ್ಪ–ಫಕೀರೇಶರದು. ಫಕೀರೇಶರದು ೧೮ರ ಹರೆಯದ ವಯಸ್ಸು. ಅಭಿನಯದಲ್ಲಿ ಚತುರ. ಹಾಸ್ಯ, ಗಂಭೀರ ಪಾತ್ರಗಳಲ್ಲಿ ಸಂಗೀತ–ಹಾಡುಗಾರಿಕೆಯಲ್ಲಿ ಗತಿ ಇತ್ತು. ಇದನ್ನು ಗಮನಿಸಿದ ರೆಹಮಾನವ್ವ 'ತಮ್ಮಾ ಪಗಾರ ಎಷ್ಟು ಕೊಡಬೇಕು?' ಎಂದು ಕೇಳಿದಳು. 'ಪಗಾರ ನನಗ ಬ್ಯಾಡ ಪುಗಸಟ್ಟೆ ಪಾರ್ಟು ಪಾಡ್ತೀನಿ' ಅಂದ. ಅದರ ಹಿಂದಿನ ರಹಸ್ಯ ರೆಹಮಾನವ್ವನಿಗೆ ತಿಳಿಯಿತು. ಹಿರಿಯ ಮಗಳು ಲಲಿತಮ್ಮ ಪ್ರಬುದ್ಧನಟಿ, ಆಕೆಯೊಡನೆ ಪಾತ್ರವಹಿಸಬೇಕು. ಸಾಧ್ಯವಾದರೆ ಮದುವೆ ಮಾಡಿಕೊಳ್ಳಬೇಕೆನ್ನುವವರಿದ್ದರು. ಫಕೀರೇಶನೂ ಇದೇ ಇರಾದೆಯಿಂದ ಕಂಪನಿ ಸೇರಿದವನು. ರೆಹಮಾನವ್ವ ತುಂಬ ಚುರುಕು. ಕಂಪನಿ ಸುಸೂತ್ರವಾಗಿ ನಡೆಯಲು ಕಲಾವಿದರಿಗೆ ಆಮಿಷವೊಡ್ಡುತ್ತಿದ್ದಳು. ಕೆಲವು ಪ್ರಸಂಗಗಳಲ್ಲಿ ನಗಿಸುತ್ತ ನನ್ನ ಮಗಳ್ನ ನಿನಗs ಕೊಡಬೇಕಂತೀನಿ ಅಂತಾ ಬೇಕಂತಲೇ ಹೇಳುತ್ತಿದ್ದಳು. ಆ ಪ್ರಸಂಗವನ್ನು ಹಾಸ್ಯ ಚಕ್ರವರ್ತಿ ಫಕೀರೇಶರು ಜವಾರಿ ಶೈಲಿಯಲ್ಲಿ ಕಟ್ಟೆಮ್ಯಾಲೆ ರೊಟ್ಟಿಬುತ್ತಿಯಿಟ್ಟು, ಕಂಬಕ್ಕ ಹಸಿದ ನಾಯಿ ಕಟ್ಟಿದ್ಹಾಂಗ ಮಾಡುತ್ತಿದ್ದಳು ಎಂದು ಹಾಸ್ಯಪ್ರಸಂಗ ನೆನಪಿಸಿಕೊಳ್ಳುತ್ತಾರೆ.

ಎಚ್.ಟಿ. ಮಹಾಂತೇಶಶಾಸ್ತ್ರಿಗಳು ಹುಬ್ಬಳ್ಳಿಯಲ್ಲಿ ನಾಟಕ ಕಂಪನಿ ಆರಂಭಿಸುವವರಿದ್ದಾರೆಂಬ ಸುದ್ದಿ ಹರಡಿತು. ಒಂದೇ ಕಂಪನಿಯಲ್ಲಿರಲು ಕಲಾವಿದರಿಗೆ ಬೇಸರ. ಹಾಗಂತ ಪಟ್ಟದಕಲ್ಲ ಬಸಯ್ಯ, ಮಾಲಗಿತ್ತಿ ಬಸಲಿಂಗಯ್ಯ, ಸದಾಶಿವಯ್ಯ, ಕೆ.ಆರ್. ಮೆಹಬೂಬ ರೆಹಮಾನವ್ವ ಕಂಪನಿಯ ನಟರು. ವಿಜಾಪುರ ಜಿಲ್ಲೆಯ ದುಧನಿಯಲ್ಲಿ ನಾಟಕ ಕ್ಯಾಂಪು ಮಾಡಿತ್ತು, ಹೂಗಾರರ ಸುವರ್ಣ–ಪುತ್ಥಳಿ, ಆರ್.ಡಿ. ಕಾಮತ್ತರ ಟಿಪ್ಪುಸುಲ್ತಾನ್, ಧುತ್ತರಗಿಯವರ ತಾಯಿ ಕರುಳು, ಸಹೋದರಿ, ರೆಹಮಾನವ್ವನವರ ಮೆಚ್ಚಿನ ಚಿತ್ರಾಂಗದಾ, ಹೇಮರಡ್ಡಿ ಮಲ್ಲಮ್ಮ ಮುಂತಾದವು ತುಂಬಿದ ಪ್ರೇಕ್ಷಾಗೃಹದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಅದು ರೆಹಮಾನವ್ವನ ಕಂಪನಿಯ ಉಚ್ಛ್ರಾಯ ಕಾಲ.

ತನ್ನ ಕಂಪನಿ ನಟರು ಕೈಕೊಟ್ಟು ಹೋಗುವವರಿದ್ದಾರೆಂಬ ಸುಳಿವು ತಿಳಿಯಿತು. ೨–೩ ದಿವಸ ನಾಟಕಗಳಿರಲಿಲ್ಲ, ಒಂದು ದಿವಸ ಬಸಯ್ಯ, ಬಸಲಿಂಗಯ್ಯ, ಕೆ.ಆರ್. ಮೆಹಬೂಬ, ಸದಾಶಿವಯ್ಯ ಹೇಳದೆ ಕೇಳದೆ

ದುಧನಿಯಿಂದ ಹುಬ್ಬಳ್ಳಿಗೆ ಹೋಗಲು ಹುಟಗಿ ಜಂಕ್ಷನ್‌ಗೆ ರೈಲು ಹತ್ತಿ ಹೋದರು. ಮೊದಲೇ ಊಹಿಸಿದ್ದ ರೆಹಮಾನವ್ವ ಹುಟ್ಗಿ ಜಂಕ್ಷನ್‌ಗೆ ಕಂಪನಿ ಹೆಸರಿನ ತಾಟು ತಂಬಿಗಿ, ಬೋರ್ಡ್‌ಗಳೊಂದಿಗೆ ಒಬ್ಬನನ್ನು ಕಳಿಸಿ ಅವರೊಂದಿಗೆ ಮಾತಾಡುತ್ತ ಕುಳಿತುಕೊಳ್ಳಲು ತಿಳಿಸಿದ್ದಳು. ದುಧನಿ ಪೋಲೀಸ್ ಸ್ಟೇಶನ್ನಿಗೆ ಹೋಗಿ ಕಂಪನಿ ಸಾಮಾನು ಕಳವು ಆಗ್ಯಾವು, ನಟರು ತೆಗೆದುಕೊಂಡು ಪಾರಾಗ್ಯಾರೆಂದು ದೂರುನೀಡಿದ್ದಳು. ಪೋಲೀಸರು ಹುಡುಕುತ್ತ ಬಂದು 'ಪಟ್ಟದಕಲ್ಲ ಬಸಯ್ಯ ಯಾರು? ಮಾಲಗಿತ್ತಿ ಬಸಲಿಂಗಯ್ಯ ಯಾರು? ಸದಾಶಿವಯ್ಯ ಯಾರು?' ಎಂದು ಕೇಳಿದರು. ಅಪರಿಚಿತ ಹುಟಗಿ ರೇಲ್ವೇ ನಿಲ್ದಾಣದಲ್ಲಿ ತಮ್ಮನ್ನು ಕೇಳುತ್ತಾರೆಂದರೆ ನಾವು ನಾಟಕ ಕಂಪನಿಯವರೆಂದು ಗುರುತಿಸಿದ್ದಾರೆಂಬ ಪ್ರಚಾರದ ಭ್ರಮೆಯಲ್ಲಿದ್ದರು. ರೆಹಮಾನವ್ವನ ನಾಟಕ ಕಂಪನಿ ಸಾಮಾನು ತಂದಿದ್ದ ಹುಡುಗನನ್ನು ಪೋಲೀಸರು ಪಾರುಮಾಡಿ, ಅವುಗಳನ್ನು ಮುಂದಿಟ್ಟು, ''ಇವು ನಿಮ್ಮ ನಾಟಕದ ಸಾಮಾನುಗಳಲ್ಲವೇ?'' ಎಂದರು. ಹೌದೆಂದರು. ಅವೆಲ್ಲವುಗಳನ್ನು ಅವರ ಮೇಲೆ ಹೊರಿಸಿ ಕಳ್ಳತನಮಾಡಿದ್ದಾರೆಂದು ರೈಲ್ವೇ ಪೋಲೀಸರಿಗೆ ಒಪ್ಪಿಸಿ ದುಧನಿ ಪೋಲೀಸ್ ಸ್ಟೇಶನ್‌ನಿಂದ ಮಾಹಿತಿ ಬರುವವರಿಗೆ ಇವರನ್ನು ನಿಮ್ಮ ಸುಪರ್ದಿನಲ್ಲಿಟ್ಟುಕೊಳ್ಳಿರಿ ಎಂದು ಹೇಳಿ ಹೋಗಿ ಬಿಟ್ಟರು.

ಇದೆಲ್ಲ ನಮ್ಮ ನಾಟಕ ಕಂಪನಿ ಮಾಲೀಕಳದೇ ಕಿತಾಪತಿಯೆಂದು ತಮ್ಮ ಗಲ್ಲವನ್ನು (ತಪ್ಪನ್ನು) ಬಡಿದುಕೊಂಡು, ಫಕೀರೇಶನ ಜಾಣ ಸಲಹೆಯಂತೆ ಪಾರಾಗಿ ಹುಬ್ಬಳ್ಳಿ ರೈಲು ಹತ್ತಿದರು. ಫಕೀರೇಶನ ಮೇಲೆ ದೂರು ನೀಡಿರಲಿಲ್ಲವಾದ್ದರಿಂದ ದುಧನಿ ನಾಟಕ ಕಂಪನಿಗೆ ವಾಪಸ್ಸಾದನು. ಇಂಥ ಚಾಕ ಚಕ್ಯತೆ ರೆಹಮಾನವ್ವನಿಗಿತ್ತು, ಕೈ ಕೊಡುವ ನಟರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದಳು. ಕಿತ್ತೂರ ಚೆನ್ನಮ್ಮ, ಝಾನ್ಸೀ ಲಕ್ಷ್ಮೀಬಾಯಿ ಪಾತ್ರಮಾಡಿದಂತೆ ಅವರ ಧೈರ್ಯ ಶೌರ್ಯಗಳನ್ನು ಪಡೆದುಕೊಂಡಿದ್ದಳು. ಧೀಮಂತಿಕೆಯಿಂದ ಕಂಪನಿ ನಡೆಸಿದ್ದಾಳೆ. ಇನ್ನೊಬ್ಬರ ಪಾತ್ರಗಳನ್ನು ಮೆಚ್ಚಿಕೊಳ್ಳುವ ಗುಣಗಳಿದ್ದವು. ಅಬ್ದುಲ್‌ಸಾಬ ಅಣ್ಣಿಗೇರಿ, ದೊಡ್ಡವಾಡ ಫಕ್ರುಸಾಬ, ಪಟ್ಟದಕಲ್ಲ ಶಿವಪುತ್ರಯ್ಯ ಸೇರಿ ಶಾಂತೇಶ್ವರ ನಾಟ್ಯಸಂಘ ದೊಡ್ಡವಾಡೆಂದು ೧೧–೧೧–೧೯೬೧ರಲ್ಲಿ ಆರಂಭಿಸಿದ್ದರು. ಡಂಬಳ ಸಂಕಣ್ಣ ರೆಹಮಾನವ್ವನವರ ಕಂಪನಿ ನಟ, 'ತಾಯಿ ಕರುಳು'ನಾಟಕದ ಮಾತಿನ ಚೋಪಡಿಗಳೊಂದಿಗೆ ಓಡಿಬಂದು, ಈ ಕಂಪನಿಗೆ ನೀಡಿದ್ದನು. ಕವಿಧುತ್ತರಗಿಯವರ ಅನುಮತಿಪಡೆದ ಇವರು ತಾಯಿ ಕರುಳು ನಾಟಕ ಪ್ರಯೋಗ ಮಾಡಿದರು. ಅನೇಕ ಪ್ರಯೋಗಗಳಾದವು. ಈ ನಾಟಕ

ಕಂಪನಿ ಕೊಪ್ಪಳ ಜಾತ್ರೆಗೆ ಕ್ಯಾಂಪ್ ಮಾಡಿ ಗವಿಸಿದ್ಧೇಶ್ವರ ತೇರಿನ ದಿನ ೧೪-೧-೧೯೬೪ರಂದು 'ತಾಯಿ ಕರುಳು ನಾಟಕ' ಪ್ರಯೋಗ ಆರಂಭಿಸಿತು. ಸಿನಿಮಾ ಥೇಟರಿನವರಿಗೂ ನಾಟಕ ಕಂಪನಿಯವರಿಗೂ ಜಿದ್ದಾಜಿದ್ದಿಯಾಗಿ, ಪೋಲೀಸರು ತಾಯಿ ಕರುಳು ನಾಟಕ ಪ್ರಯೋಗ ನಿಲ್ಲಿಸಿದರು. ರೊಚ್ಚಿಗೆದ್ದ ಜನ ಪೋಲೀಸರ ದೌರ್ಜನ್ಯ ಪ್ರತಿಭಟಿಸಿ ಮೆರವಣಿಗೆ ಮಾಡಿದರು. ಅಗಡಿ ಸಂಗಣ್ಣನವರು ರಾಜಿ ಮಾಡಿಸಿ ತಾವೇ ಮುಂದೆ ನಿಂತು ನಾಟಕವಾಡಿಸಿದರು. ಇದನ್ನು ಕೇಳಿದ ರೆಹಮಾನವ್ವ ಬಂದು, ತಾಯಿ ಕರುಳು ನಾಟಕ ನೋಡಿದಳು. ''ಫಕ್ರು ನನ್ನ ಮೀರಿಸಿ ಗೌರವ್ವನ ಪಾತ್ರ ಮಾಡಿದ'' ಎಂದು ಪ್ರಶಂಸೆ ಮಾಡಿದಳು. ಕೆಲವೊಂದು ಸನ್ನಿವೇಶಗಳಲ್ಲಿ ನನ್ನ ಮೀರಿ ಅಭಿನಯ ಮಾಡ್ತಾನ ಅಂದಳು. ಧುತ್ತರಗಿ ಸರೋಜಮ್ಮನ ಕಿತ್ತೂರ ಚೆನ್ನಮ್ಮನ ಪಾತ್ರ ನೋಡಿ ಮೆಚ್ಚಿಕೊಂಡು ಕತ್ತಿವರಸೆ ಹೇಳಿಕೊಟ್ಟಳು. ನೀನು ಪ್ರಸಿದ್ಧ ನಟಿ ಆಗ್ತಿ ಎಂದು ಆಶೀರ್ವದಿಸಿದ್ದಳು. ಅಬ್ದುಲಸಾಬ ಅಣ್ಣಿಗೇರಿಯವರ ಶ್ರೀಮತಿ ಪುಷ್ಪಮಾಲಾರ ರೇಣುಕಾ ಯಲ್ಲಮ್ಮ ಮೆಚ್ಚಿಕೊಂಡಿದ್ದಳು. ಸುಭದ್ರಮ್ಮ ಮನಸೂರರು ದ್ರೌಪದಿ ಪಾತ್ರದಲ್ಲಿ, ಹೇಮರಡ್ಡಿ ಮಲ್ಲಮ್ಮನಾಗಿ ಪ್ರಸಿದ್ಧಿಗೆ ಬರುತ್ತಿರುವಾಗ ಮೆಚ್ಚಿಮಾತಾಡುತ್ತಿದ್ದಳು. ತಾನು ರಂಗಭೂಮಿಯಿಂದ ದೂರಸರಿದಾಗಲೂ ಬೇರೆ ಕಂಪನಿ ನಾಟಕ ಪ್ರಯೋಗಗಳಿಗೆ ಹಾಜರಾಗುತ್ತಿದ್ದಳು. ಅವರ ಬೆನ್ನು ತಟ್ಟಿ ಹುರಿದುಂಬಿಸುತ್ತಿದ್ದಳು.

ತನ್ನ ಅಜ್ಜಿ ಹಸ್ನಮ್ಮ ಸತ್ತಾಗ ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲಿ ಚಿಂದೋಡಿ ವೀರಪ್ಪನವರೊಂದಿಗೆ ಹಳ್ಳಿ ಹುಡುಗಿ ನಾಟಕದಲ್ಲಿ ಪಾತ್ರವಹಿಸುತ್ತಿದ್ದಳು. ಅಜ್ಜಿಗೆ ಸೀರಿಯಸ್ ಎಂದು ಟೆಲಿಗ್ರಾಂ ಬಂದಿರುವದನ್ನು ಚಿಂದೋಡಿ ಕಂಪನಿಯವರು ತೋರಿಸಿರಲಿಲ್ಲ, ಸತ್ತ ಸುದ್ದಿ ಹೊತ್ತು ಬಂದ ಟೆಲಿಗ್ರಾಂ ನೀಡಿದಾಗ ಮಣ್ಣಿಗೆ ಬಂದಳು. ಊರಲ್ಲಿ ಧಾರ್ಮಿಕ ಕಾರ್ಯಕ್ರಮ ಗಳಿಗೆ ಆರ್ಥಿಕ ಸಹಾಯ ನೀಡುತ್ತಿದ್ದಳು. ಗುದ್ನೆಪ್ಪನ ಜಾತ್ರೆಗೆ ಬರುವ ನಾಟಕ ಕಂಪನಿಗಳಿಗೆ ಆಶ್ರಯ ನೀಡುತ್ತಿದ್ದಳು. ಪ್ರೋತ್ಸಾಹಿಸುತ್ತಿದ್ದಳು. ಯಲಬುರ್ಗಾ, ರೋಣ, ಕುಷ್ಟಗಿ, ಗಜೇಂದ್ರಗಡಾದ ಶಾಲಾ ಕಾರ್ಯಕ್ರಮಗಳಿಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ರಂಗಗೀತೆಗಳನ್ನು ಹಾಡುತ್ತಿದ್ದಳು. ಏಕ ಪಾತ್ರಾಭಿನಯ ಮಾಡುತ್ತಿದ್ದಳು. ಶಾಲಾ ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಿದ್ದಳು. ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳ ಸನ್ನಿವೇಶ ಹೇಳಿದರೆ ಆ ಪ್ರಸಂಗದ ಸಂಭಾಷಣೆ ಹೇಳುತ್ತಿದ್ದಳು.

ಜಾತಿಮತ್ಸರ, ವೃತ್ತಿ ಮತ್ಸರಗಳಿಂದ ತತ್ತರಿಸಿಹೋಗಿದ್ದಳು. ತಳಕಲ್ಲ ವೆಂಕರೆಡ್ಡಿಯವರು ತನ್ನ ಕಂಪನಿಬಿಟ್ಟು ಹೋದದಕ್ಕೆ ಕುಕನೂರಿನ ಸಾಮಾನ್ಯ

ನಟಿಯರನ್ನು ಕರೆಯಿಸಿ ಅವರಿಂದ ಈಕೆಯ ಪಾತ್ರಮಾಡಿಸಿ ಹೊಟ್ಟೆ ಉರಿಸುತ್ತಿದ್ದರಂತೆ. ತನ್ನ ಊರಿನ, ತನ್ನ ಓಣಿಯ, ತನ್ನ ಜಾತಿಯ ಜನರನ್ನು ಎತ್ತಿಕಟ್ಟಿ ಇವರಿಗೆ ಹಾನಿಯುಂಟು ಮಾಡಲು, ಅವಮಾನಿಸಿದರೂ ಮಣಿಯುತ್ತಿದ್ದಿಲ್ಲ. ತನ್ನ ಸಾರ್ವಜನಿಕ ವ್ಯಕ್ತಿತ್ವ, ಕಲಾಜೀವನದಿಂದ ಎತ್ತರಕ್ಕೆ ಹೋಗಿದ್ದ ಇವರು ಸ್ಥಳೀಯ ಈರ್ಷೆ, ಭರ್ತ್ಸನೆಗಳಿಗೆ ಸೊಪ್ಪು ಹಾಕುತ್ತಿರಲಿಲ್ಲ, ಆ ಕಾಲದ ಅನೇಕ ಹಿರಿಯರು ಅವರನ್ನೆಲ್ಲ ಬೈದು ಸುಮ್ಮನಿರಿಸುತ್ತಿದ್ದರು. ರೆಹಮಾನವ್ವನಿಗೆ ಸಾಂತ್ವನ ಹೇಳುತ್ತಿದ್ದರು. ರೆಹಮಾನವ್ವನಿಗೆ ಜಾತಿ ಭಾವನೆ ಇರಲಿಲ್ಲ, ಎಲ್ಲದೇವರು ಒಂದೇ ಎನ್ನುತ್ತಿದ್ದಳು. ಉರುಸು. ಜಾತ್ರೆ ಹಬ್ಬಗಳಲ್ಲಿ ವ್ಯತ್ಯಾಸವಿರಲಿಲ್ಲ, ಬಾಬಣ್ಣನ ಹೆಂಡತಿ ಮೆಹಬೂಬಿಯವರನ್ನು 'ಮಹಾದೇವಿ' ಎಂದು ಕರೆಯುತ್ತಿದ್ದಳು. ಸೊಸೆಯಂದಿರನ್ನೂ ಕುಟುಂಬದ ಹೆಣ್ಣುಮಕ್ಕಳನ್ನೂ ಕುಕನೂರಿಗೆ ಬಂದಾಗ ಹನುಮಂತ ದೇವರ ಗುಡಿಗೆ ಮಹಾಮಾಯೆ ಗುಡಿಗೆ ಗುದ್ನೆಪ್ಪನ ಜಾತ್ರೆಗೆ ಕರೆದುಕೊಂಡು ಹೋಗಿ ಕಾಯಿ ಕರ್ಪೂರ ಮಾಡಿಸುತ್ತಿದ್ದಳು. ಆಕೆಯ ಬಾಯಲ್ಲಿ ಎಂದು 'ಯಾ ಅಲ್ಲಾ' ಎಂಬ ಶಬ್ದ ಬಂದದ್ದಿಲ್ಲ. 'ಅಯ್ಯೋ ಶಿವನೆ', 'ದೇವರೇ', ಎಂದೆನ್ನುತ್ತಿದ್ದಳು. ಬ್ರಾಹ್ಮಣರಿಂದ ಹಿಡಿದು ಅಂತ್ಯಜರೊಡನೆ ಸಮಾನವಾಗಿ ವ್ಯವಹರಿಸುತ್ತಿದ್ದಳು.

ತನ್ನ ನಾಟಕ ಕಂಪನಿ ಬಂದಾದಾಗ ತಗಡು ಕುಕನೂರಿನ ರಾಘಪ್ಪಜ್ಜನ ಮಠಕ್ಕೆ ದಾನ ನೀಡಿದಳು. ಮಠ ಕಟ್ಟಿಸಲು ಸಿಮೆಂಟ್ ಕೊಡಿಸಿದಳಲ್ಲದೆ ಕೂಲಿಗೆ ಹಣವನ್ನು ಕೊಟ್ಟಿದ್ದಳು. ಸೊಸೆ ಬಾಬಣ್ಣನ ಹೆಂಡತಿ ಮೆಹಬೂಬಿಗೆ ಮಕ್ಕಳಾಗದಿದ್ದಾಗ ಜಮಖಂಡಿ, ಮಹಾಲಿಂಗಪುರಗಳಲ್ಲಿ ನಾಟಕ ಕ್ಯಾಂಪ್ ಮಾಡಿದಾಗ ಗುಡ್ಡಾಪುರ ದಾನಮ್ಮ ದೇವಿಗೆ ಬರುವ ವರ್ಷದೊಳಗೆ ಮಕ್ಕಳಾದರೆ, ನಿನ್ನ ಹೆಸರು ಕೂಸಿಗೆ ಇಡುವುದಾಗಿ ಹರಕೆ ಹೊತ್ತಳು. ಅದರಂತೆ ಹುಟ್ಟಿದಾಕೆ–ಹಿರಿಯ ಮೊಮ್ಮಗಳು ದಾನಮ್ಮ. ಆಕೆ ತನ್ನ ಮಕ್ಕಳಿಗೆ ಬಾಬು–ಬಾಬಣ್ಣಾ, ಉಮೇಶ್, ಮುನ್ನಾ, ಲಲಿತಾ, ಮಂಜುಳಾ ಎಂದು ಹೆಸರಿಟ್ಟಿದ್ದಳು. ಅವರನ್ನೆಲ್ಲ ಒಪ್ಪಿಟ್ಟು ಪ್ರೀತಿಯಿಂದ ಕರೆಯುತ್ತಿದ್ದಳು.

ರೆಹಮಾನವ್ವ ತನ್ನ ೧೬ನೆಯ ವಯಸ್ಸಿಗೆ ನಂದಪ್ಪ ವೀರಪ್ಪ ಮೇವುಂಡಿಯವರನ್ನು ಮದುವೆಯಾಗಿದ್ದವಳು ಆತ ಸತ್ತಾಗ ಆತನ ಮಣ್ಣು ಹೊಂಬಳದಲ್ಲಾದಾಗ ಸೊಸೆಯೊಂದಿಗೆ ಹೋಗಿ ಅಂತಿಮ ದರ್ಶನಪಡೆದು, ತಾಳಿ–ಮೂಗುತಿ ತೆಗೆದು ತನ್ನ ನಿಷ್ಠೆ ತೋರಿಸಿದಳು. ಲಲಿತಮ್ಮ ಹಾಗೂ ಮಂಜುಳಾ ಅಪಘಾತದಲ್ಲಿ ದುರ್ಮರಣವಾದಾಗ ಹುಬ್ಬಳ್ಳಿ ಕಬರಸ್ಥಾನದಲ್ಲಿ ಮುಸ್ಲಿಂ ಪದ್ಧತಿಯಲ್ಲಿ ಮಣ್ಣು ಮಾಡಿಸಿದಳು. ಅವರು ಸತ್ತಾಗ ಒಮ್ಮೆ ಜೋರಾಗಿ

ಅತ್ತರೆ ಇನ್ನೊಮ್ಮೆ ತನಗೆ ದುಃಖವೇ ಆಗಿಲ್ಲವೆನ್ನುವಂತೆ ಇದ್ದು ಬಿಡುತ್ತಿದ್ದಳು. ಆಗ ವಿಕ್ಷಿಪ್ತಳಾಗಿ ವರ್ತಿಸಿದ್ದಳು.

ಒಂದು ಅವಧಿಗೆ ತಾಲೂಕಾಭಿವೃದ್ಧಿ ಮಂಡಳಿ ಸದಸ್ಯೆಯಾಗಿದ್ದಾಗ ಸಾರ್ವಜನಿಕ ಸೇವೆ ಮಾಡಿದಳು. ಯಾರಿಂದಲೂ ಹತ್ತು ಪೈಸೆ ಲಂಚ ಸ್ವೀಕರಿಸಲಿಲ್ಲ, ತನ್ನಿಂದಾದ ಸಹಾಯವನ್ನು ಮಾಡಿದಳು.

ರೆಹಮಾನವ್ವ ದನಕಾಯಲು ತಳಕಲ್ಲಿಗೆ ಹೋಗುವಾಗ ಶಾಲೆಗೆ ಹೋಗುತ್ತಿದ್ದಳೆಂಬುದಕ್ಕೆ ಏನು ಸಾಕ್ಷಿ? ಎಂಬುದಕ್ಕೆ ಒಂದು ಪುರಾವೆ ದೊರಕಿದೆ. ಕುಕನೂರು ಕಲ್ಮಠ ಪಟ್ಟದ್ದೇವರಮಠದಿಂದ ಶ್ರೀಮತಿ ರುದ್ರಮ್ಮ (ರಾಜೇಶ್ವರಿ ಅಮ್ಮ) ಅವರನ್ನು ಅಳವಂಡಿ ಶ್ರೀ ಸಿದ್ಧೇಶ್ವರ ಪಟ್ಟದ್ದೇವರಮಠದ ಚೆನ್ನವೀರಸ್ವಾಮಿ ಇನಾಮದಾರ ಅವರಿಗೆ ಮದುವೆ ಮಾಡಿಕೊಟ್ಟಿತ್ತು, ರುದ್ರಮ್ಮ ಹಾಗೂ ರೆಹಮಾನ್‌ಬಿ ಬಾಲ್ಯದ ಗೆಳತಿಯರು, ಕೂಡಿ ಶಾಲೆ ಕಲಿತವರು. ಕೂಡಿ ಆಡಿದವರೆಂದು ತಮ್ಮ ಹಿರಿಯ ಮಗ ಭುಜಂಗಸ್ವಾಮಿಯವರಿಗೆ ರೆಹಮಾನವ್ವರನ್ನು ಗುಲಬರ್ಗಾದ ತಮ್ಮ ಸರಕಾರಿ ಬಂಗ್ಲೆಯಲ್ಲಿ ಪರಿಚಯಿಸಿದ್ದರಂತೆ. ಚೆನ್ನವೀರಸ್ವಾಮಿ ಇನಾಮದಾರರು ಗುಲಬರ್ಗಾದಲ್ಲಿ ಅಸಿಸ್ಟಂಟ್ ಕಮೀಷನರರಾಗಿದ್ದರು. ರೆಹಮಾನವ್ವ ಚೆನ್ನವೀರ ಸ್ವಾಮಿಗಳು ತಹಸೀಲದಾರರಾಗಿದ್ದಾಗ, A.C. ಆಗಿದ್ದಾಗ, ಹುಮ್ನಾಬಾದ್, ಚಿಂಚೋಳಿ, ಬಸವಕಲ್ಯಾಣ ಅಲ್ಲದೆ, ಕಾರವಾರದಲ್ಲಿ ಕೂಡ ತಮ್ಮ ನಾಟಕ ಕಂಪ್ನಿ ತೆಗೆದುಕೊಂಡು ಬಂದಿದ್ದರೆಂದು ಭುಜಂಗಸ್ವಾಮಿಗಳು ತಿಳಿಸಿದರು.

ಅನಾಥ ಮಕ್ಕಳಾದ ಮಮತಾ, ನವೀನ ಹಾಗೂ ಬಾಬಣ್ಣನ ಮಕ್ಕಳನ್ನು ತನ್ನೊಡನಿಟ್ಟುಕೊಂಡು ಅಭ್ಯಾಸಮಾಡಿಸಿದಳು. ಆ ಕಾಲದಲ್ಲಿ ರೆಹಮಾನವ್ವನಿಗೆ ಸರಕಾರದ ಸಹಾಯಧನವಿರಲಿಲ್ಲ, ಸರಕಾರದ ಕಣ್ಣೊ ತೆರೆಯಿಸಲು ವಾಟಾಳ್ ನಾಗರಾಜರು ೧೯೮೧ರಲ್ಲಿ ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಪುರಭವನದಿಂದ ವಿಧಾನಸೌಧದವರೆಗೆ ವೃತ್ತಿ ರಂಗಭೂಮಿ ನಟ ನಟಿಯರು ವೇಷಭೂಷಣಾಲಂಕೃತರಾಗಿ ಹೋಗಿ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿ ಅಶಕ್ತ ಕಲಾವಿದರಿಗೆ ಮಾಸಾಶನಕ್ಕಾಗಿ ಒತ್ತಾಯಿಸಿದ್ದರಿಂದಾಗಿ ಕಲಾವಿದರು ಇಂದು ಮಾಸಾಶನ ಪಡೆಯುತ್ತಿದ್ದಾರೆ. ಈ ಮೆರವಣಿಗೆಯಲ್ಲಿ ರೆಹಮಾನವ್ವ ಭಾಗವಹಿಸಿದ್ದಳು. ಆದರೆ ಇವರಿಗೆ ಇದಾವುದೂ ದೊರಕಲಿಲ್ಲ, ಬಡತನದಲ್ಲಿ ಹುಟ್ಟಿ ಬಡತನದಲ್ಲಿ ಬೆಳೆದು ಮುಪ್ಪಿನ ವಯಸ್ಸಿನಲ್ಲಿಯೂ ಬಡತನವನ್ನು ಅನುಭವಿಸುತ್ತ ೧೦-೧೦-೧೯೯೩ರಂದು ನಿಧನಳಾದಳು.

## ಶ್ರೀ ಲಲಿತ ಕಲಾ ನಾಟ್ಯ ಸಂಘ ಪ್ರಯೋಗಿಸಿದ ಪ್ರಮುಖ ನಾಟಕಗಳು

ತಳಕಲ್ಲ ವೆಂಕರೆಡ್ಡಿಯವರು ಪ್ರಥಮಬಾರಿಗೆ ನಲವಡಿ ಶ್ರೀಕಂಠಶಾಸ್ತ್ರಿಗಳನ್ನು ಬರಮಾಡಿಕೊಂಡು ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನು ಪ್ರಯೋಗಿಸಿದರು. ಲಿಂಗರಾಜಬುವಾ ಸಿರಗುಪ್ಪಿ ಮಲ್ಲಮ್ಮನ ಪಾತ್ರ ನಿರ್ವಹಿಸಿದರು. ಅವರು ಕಂಪನಿಬಿಟ್ಟು ಹೋದಮೇಲೆ ರೆಹಮಾನವ್ವನ ಆ ಪಾತ್ರ ನಿರ್ವಹಿಸಿದ್ದರಿಂದ ತನ್ನ ಕಂಪನಿ ನಾಟಕದಲ್ಲಿ ಹೇಮರೆಡ್ಡಿ ಮಲ್ಲಮ್ಮ ಪ್ರಮುಖ ನಾಟಕ ಮಾಡಿಕೊಂಡರು. ಸತ್ಯಹರಿಶ್ಚಂದ್ರ, ಕುರುಕ್ಷೇತ್ರ, ರಕ್ತರಾತ್ರಿ, ಚಿತ್ರಾಂಗದಾ, ನೆಲ್ಲೂರು ನಂಬೆಕ್ಕ, ಲಂಕಾದಹನ, ರೇಣುಕಾ ಯಲ್ಲಮ್ಮ, ಭೌಮಾಸುರ, ಭಕ್ತ ಪ್ರಹ್ಲಾದ, ಗುಣಸಾಗರಿಯಂಥ ಪೌರಾಣಿಕ ನಾಟಕಗಳು, ಸ್ತ್ರೀರತ್ನ, ತಾಯಿಕರುಳು, ಆದಿಶಕ್ತಿ, ಬಡತನಭೂತ, ಸಹೋದರಿ, ನಿರ್ಮಲಾ, ಸುವರ್ಣ ಪುತ್ಥಳಿ, ದತ್ತು ಪುತ್ರ, ಗಂಡನಮಾನ, ಕಮಲಾಕ್ಷಿ, ಅಗ್ನಿ ಕಮಲ, ತವರುಮನೆ, ಮಲಮಗಳು, ಪಠಾಣಪಾಶಾ ಮುಂತಾದ ಸಾಮಾಜಿಕ ನಾಟಕಗಳು, ಬಾಬಣ್ಣ ಕಲ್ಮನಿ ನಾಟಕ ಕಂಪನಿ ಮಾಡಿಕೊಂಡಮೇಲೆ ಬಸ್‌ಕಂಡಕ್ಟರ್, ಶಿಶುನಾಳಶರೀಫ್, ನಾಗಲಿಂಗ ಮಹಾತ್ಮೆ, ಹಸಿರು ಬಳೆ ಮುಂತಾದ ನಾಟಕಗಳನ್ನು ಪ್ರಚುರಗೊಳಿಸಿದರು. ಕವಿ ಧುತ್ತರಗಿಯವರ ತಾಯಿ ಕರುಳು ಹಾಗೂ ಸಹೋದರಿಗಳನ್ನು ಸ್ವತಃ ಅಭಿನಯಿಸಿ ತಮ್ಮ ಕಂಪನಿಯಿಂದ ಪ್ರಚಾರಗೊಳಿಸಿದರು.

ತಾಯಿಕರುಳು ನಾಟಕದ ವೇಷ–ಭೂಷಣ–ಮೇಕಪ್ಪು ಆ ಕಾಲದ ಸ್ತ್ರೀ ಪಾತ್ರಧಾರಿಗಳಿಗೆ ಒಂದು ಚಿದಂಬರ ರಹಸ್ಯವಾಗಿತ್ತು, ಲಾಡ್‌ಸಾಬ ಅಮೀನಗಡ, ಸಂಕಣ್ಣ ಡಂಬಳ, ವೀರಣ್ಣ ಜಾಲೀಹಾಳ, ಸೂಳಿಭಾವಿ ಚಿದಾನಂದಪ್ಪ, ಅಬ್ದುಲ್‌ಸಾಬ ಅಣ್ಣಿಗೇರಿ ಮುಂತಾದವರು ಅನುಕರಿಸಿದರು, ಪ್ರಶಂಸಿಸಿದರು.

### ವಿಭಿನ್ನ ಪಾತ್ರಗಳು :

ಬೇರೆ ಕಂಪನಿಗಳಲ್ಲಿ ವಿವಿಧ ನಾಟಕಗಳಲ್ಲಿ ದಣಿವಿಲ್ಲದೆ, ವೈವಿಧ್ಯಮಯವಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಹಸಿರುಬಳೆ, ಉತ್ತರಭೂಪ, ಅಕ್ಷಯಾಂಬರ, ದ್ರೌಪದಿ ಸ್ವಯಂವರ, ಭೀಷ್ಮ ಪ್ರತಿಜ್ಞೆ, ಮಾತಂಗ ಕನ್ಯೆ, ದತ್ತು ಪುತ್ರ, ರಕ್ತರಾತ್ರಿ, ಮೊದಲಾದವುಗಳಲ್ಲಿ ಪ್ರಮುಖ ಪಾತ್ರಗಳನ್ನು ಮಾಡಿದ್ದಾರೆ. ದ್ರೌಪದಿಯಾಗಿ, ಸುಭದ್ರೆಯಾಗಿ,

ತಾರಾಮತಿಯಾಗಿ, ಚಿತ್ರಾಂಗದೆಯಾಗಿ, ಮಲ್ಲಮ್ಮನಾಗಿ, ಝಾನ್ಸಿ ರಾಣಿಯಾಗಿ, ಬೆಳವಡಿ ಮಲ್ಲಮ್ಮನಾಗಿ, ಟಿಪ್ಪು ಸುಲ್ತಾನದಲ್ಲಿ ಜಯಂತಿಯಾಗಿ ಮಿಂಚಿದ್ದಾರೆ.

ಇವರು ರಕ್ತರಾತ್ರಿಯಲ್ಲಿ ಶ್ರೀಕೃಷ್ಣ, ಹೇಮರೆಡ್ಡಿ ಮಲ್ಲಮ್ಮದಲ್ಲಿ ಮಲ್ಲಿಕಾರ್ಜುನ, ಲಂಕಾದಹನ, ಸಂಪೂರ್ಣ ರಾಮಾಯಣಗಳಲ್ಲಿ ಆಂಜನೇಯದಂಥ ಪುರುಷ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಡಿ. ದುರ್ಗಾದಾಸರ ನಿರ್ಮಲಾದಲ್ಲಿ ಹುಚ್ಚಿಪಾತ್ರ, ಎಚ್.ಎನ್. ಹೂಗಾರರ ಹುಚ್ಚರ ರಾಜ್ಯದ ಶ್ರೀಮಂತ ಮಹಿಳೆ ಮುಂತಾದ ವಿಶಿಷ್ಟ ಪಾತ್ರಗಳನ್ನು ಮಾಡಿ ಗಮನ ಸೆಳೆದಿದ್ದಾರೆ. ಇವರು ಮಾಡಿದಂತೆ ಪಾತ್ರಗಳನ್ನು ಇನ್ನಾರೂ ಮಾಡಲಾರರು. ಮಾಡಿದರೆ ಇವರ ಹಾಗೇ ಮಾಡಬೇಕೆಂಬ ರೀತಿಯಲ್ಲಿ ಈ ಎಲ್ಲ ಪಾತ್ರಗಳನ್ನು ನಿರ್ವಹಿಸಿದರು.

ತನ್ನ ಕಂಪನಿ ನಾಟಕಗಳ ತಾಲೀಮಿನಲ್ಲಿ ನಾಟಕ ಬರೆದ ಕವಿಗಳನ್ನು ಕರೆಯಿಸಿ ತರಬೇತಿಕೊಡಿಸಿದರೂ ಅಂತಿಮ ಅಭಿನಯ ಹೇಳಿಕೊಡುತ್ತಿದ್ದರು. ಇವರು ಹೇಳಿದಂತೆ–ಅಭಿನಯಿಸಬೇಕಾಗಿತ್ತು, ಅದು ನಾಟಕ ಬರೆದ ಕವಿಗೂ ಮೆಚ್ಚಿಗೆಯಾಗುತ್ತಿತ್ತು, ಸಮಾಲೋಚನೆಯಿಲ್ಲದೆ, ಅಭಿನಯ ಅಂತಿಮಗೊಳಿಸುತ್ತಿದ್ದಿಲ್ಲ. ಇವರ ಕಂಪನಿ ಹಾರ್ಮೋನಿಯಂ ವಾದಕರು: ಶಲವಡಿ ಕಂಠೆಪ್ಪ ಮಾಸ್ತರ, ನರಸಿಂಗಬಾನು, ಸರಾಫ್‌ಮಾಸ್ತರ, ಮ್ಯೆಂದರಗಿ ಅಕ್ಕಲಕೋಟೆ, ಸಾಸ್ವಿಹಳ್ಳಿ ಹಾಲಪ್ಪ, ಗೌಸ್ ಮಾಸ್ತರ ಪುರತಿಪ್ಲಿ, ಎಲಿಸೂರ ಶಂಕ್ರಯ್ಯ, ಶರಭಯ್ಯ ಆಡೂರು, ಬೂದೆಪ್ಪ ಮಾಸ್ತರ, ದೇವರಾಜ ಶಂಕ್ರಪ್ಪ ಹಲಗೇರಿ, ದೇವೇಂದ್ರಪ್ಪ ಮೀಸಿ ಮಂಡಲಗೇರಿ, ಲಿಂಗರಾಜ ಪಾಟೀಲ ತೊಂಡಿಹಾಳ.

ತಬಲಾ :

ಖಾಜಾಸಾಬ ಉಮಚಗಿ, ಭಾಗ್ಯವಾನ ಪತ್ತಾರ ತಳಕಲ್ಲ, ಚೆನ್ನಪ್ಪಧರಣಾ ಮುಧೋಳ, ಮರಿಯಪ್ಪ ಆಳವಂಡಿ, ಮತ್ಯಾ೯ಮಪ್ಪ ಪತ್ತಾರ ತಳಕಲ್ಲ.

ಕ್ಲಾರಿನೇಟ್ :

ಭೀಮಪ್ಪ ಭಜಂತ್ರಿ, ರಾಮಪ್ಪ ಭಜಂತ್ರಿ ಕುಕನೂರು, ಹನುಮಂತ ಕುಮಾರ ಮುಧೋಳ ಕುದರಿಮೋತಿ. ಬುಲ್ ಬುಲ್ ತರಂಗ ; ತಳಕಲ್ಲ ಭೀಮಸಿ, ಢೋಲಕ್, ಬುಲ್‌ಬುಲ್‌ತರಂಗ : ಹಿರಿಯ ಮಗ ಬಾಬಣ್ಣ ಬಾರಿಸುತ್ತಿದ್ದನು.

ನಟರು :

ವೀರಪ್ಪಶಾನಭೋಗರ ಮಂಡಲಗೇರಿ, ಕವಿ ಪಿ.ಬಿ.ಧುತ್ತರಗಿ, ಮರಿಯಪ್ಪ ಮಂಡಲಗೇರಿ, ದೇವಪ್ಪ ಮೀಸಿ ಮಂಡಲಗೇರಿ, ಶುಕಮುನೆಪ್ಪ ಸಂಗಟಿ

ಮಂಡಲಗೇರಿ, ಫಕೀರಪ್ಪ ಹಡಪದ, ಮಾನಪ್ಪ ಕಟ್ಟೀಮನಿ, ಗಿಡ್ಡ ಗುರಪ್ಪ ಕುಕನೂರು, ವೀರಭದ್ರಪ್ಪ ಮೇಟಿ, ಕಲ್ಲಪ್ಪ ಹೂಗಾರ, ಗುರಪ್ಪ ದಿವಟರ, ಕಳಕಪ್ಪ ದಿವಟರ, ಚಿದಾನಂದಪ್ಪ ರಾಜೂರ, ಶಂಕರಪ್ಪ ದಾವಣಗೆರೆ, ಬಾಷುಸಾಬ ಹಯಾತ್‌ಖಾನ್, ಸಣ್ಣಪ್ಪ ಹಾವೇರಿ, ಕವಿ ಮಾರುತೇಶ ಮಾಂಡ್ರೆ, ಡಿ. ದುರ್ಗಾದಾಸ, ಎಲಿವಾಳಸಿದ್ಧಯ್ಯ, ಮರೋಳಸಿದ್ಧಯ್ಯ, ಷಣ್ಮುಖಪ್ಪ ವೆಂಕಟಾಪುರ, ನಾಗಸಮುದ್ರ ಹನುಮಂತಪ್ಪ, ಕುಡುತಿನಿ ಭರಮಪ್ಪ, ಬೆಟಗೇರಿ ಪರಮೇಶಿ, ಗೋಪಾಲ ಸೊರಬ, ಮಡಿವಾಳಪ್ಪ, ಹನುಮಂತಾಚಾರ ಕಿನ್ನಾಳ, ಬಾಬು ರಾಮದುರ್ಗ, ಭಾಗ್ಯವಾನ ಪತ್ತಾರ, ಹನುಮಂತಪ್ಪ ದೇವರಮನಿ ತಳಕಲ್ಲ, ಸಾರಂಗಯ್ಯ ಸಾರಂಗಮಠ, ಮಲ್ಲಪ್ಪ ಯಲಬುರ್ಗಿ, ತೋಟಪ್ಪ ಕಿತ್ತೂರ, ವಿರೂಪಾಕ್ಷಪ್ಪ ಮುಧೋಳ, ರಾಚಪ್ಪ ಮುದೇನೂರ, ಗೌಸ್‌ಮಾಸ್ತರ ಪುರತಿಪ್ಲಿ, ನಾಗಭೂಷಣ ಸ್ವಾಮಿ ಗಬ್ಬೂರ, ಸಿದ್ಧಪ್ಪ ಮಾಸ್ತರ ಮೈಂದರಗಿ, ವಿರೂಪಾಕ್ಷಪ್ಪ ಮೈಂದರಗಿ, ವೆಂಕಟೇಶ, ಸೂಡಿ ಶೇಖರಯ್ಯ, ವರವಿ ಫಕೀರಪ್ಪ, ಪಟ್ಟದಕಲ್ಲ ಬಸಯ್ಯ, ಗೋಕಾಕದ ಈರಯ್ಯ, ಲಕ್ಷ್ಮಣರಾವ್ ತಾವರಗೇರಿ, ಶಂಕರಪ್ಪ ವಂದಾಲ, ಗುರುಸಿದ್ಧಯ್ಯ ಇದ್ದಲಗಿ, ಡಂಬಳ ಸಂಕಣ್ಣ, ಶಂಕರಪ್ಪ ನಿಡಗುಂದಿ, ರೆಹಮಾನಸಾಬ ಶಿರಹಟ್ಟಿ, ಖಟವಟೆ, ಲಾಡಸಾಬ ಅಮೀನಗಡ, ಕದಡಿ ಮಹಾಂತಯ್ಯ, ಬೆಟ್ಟದೂರ ಶಂಕರಯ್ಯ, ಗಂಗಾವತಿ ಬಸಪ್ಪ, ಬಾಗಲಕೋಟೆ ಕೃಷ್ಣಪ್ಪ, ಯಲಬುರ್ಗಾ ಹುಸೇನಸಾಬ, ಅನ್ನದಾನೇಶ ಕರಮುಡಿ, ಜಮಾಲಪ್ಪ, ಚೆನ್ನಪ್ಪ ಕಂಬಳಿ, ಹಾವೇರಿ ದುಂಡಪ್ಪ, ಮಾರ್ತಂಡಪ್ಪ, ಗುರುಪಾದಯ್ಯಸ್ವಾಮಿ, ಡಿ.ಡಿ. ಪತ್ತಾರ, ಜಕ್ಕಲಿ ವೀರಬಸಯ್ಯ, ಕೇಡಗಿ ಮೆಹಬೂಬ ಸಾಬ, ಮಕ್ಕಳಾದ ಬಾಬಣ್ಣ ಕಲ್ಮನಿ, ಉಮೇಶ ಕಲ್ಮನಿ, ಮಹ್ಮದರಫಿ ಮುನ್ನಾ ಕಲ್ಮನಿ ಮುಂತಾದವರು ಪ್ರಮುಖರಾಗಿದ್ದಾರೆ. ಪ್ರಮುಖ ನಟಿಯರು : ರೆಹಮಾನವ್ವ ಕಲ್ಮನಿ ಕುಕನೂರು, ಮಕ್ಕಳಾದ ಲಲಿತಮ್ಮ ಕಲ್ಮನಿ, ಮಂಜುಳಾ ಕಲ್ಮನಿ, ಮೊಮ್ಮಕ್ಕಳಾದ ಮಮತಾ, ದಾನಮ್ಮ, ಶಾಂತಾ ಪೂಜಾರ, ಅಂಬುಜಾ ಕುಮಟಿ, ಲಕ್ಷ್ಮಮ್ಮ, ದೊಡ್ಡವಾಡ ಶಾಂತಾ, ಸೀತವ್ವ, ದಾವಲವ್ವ ಗದ್ವಾಲ ಕುಕನೂರು, ಪಾರ್ವತೆವ್ವ, ಬಸವಣ್ಣೆವ್ವ, ಬ್ಯಾಡಿಗಿ ಸಾವಿತ್ರಿ, ಕೋಮಲವ್ವ ಕೊಟ್ಟೂರು, ಅಕ್ಕಲಕೋಟಿ ನಿರ್ಮಲಾ, ಮಾಬವ್ವ, ಚೌಳವ್ವ ಕುಕನೂರು, ಮುರುಗೋಡ ರೇಣುಕವ್ವ, ಸರ್ವ ಮಂಗಳಾ, ಹುಸನವ್ವ ಯಮ್ಮಿ ಕುಕನೂರ, ಸುಲೋಚನಾ ಶಿರಹಟ್ಟಿ, ಭಾರತಿ ಶಿರಹಟ್ಟಿ, ಪಕ್ಕವ್ವಸೂಡಿ ಕುಕನೂರು, ಜಯಮ್ಮ ಮೈಸೂರ, ಎಚ್.ಬಿ. ಸರೋಜಮ್ಮ ಮುಂತಾದವರು ಪ್ರಮುಖರಾಗಿದ್ದಾರೆ.

**ಅಭಿನೇತ್ರಿ ರೆಹಮಾನವ್ವ ಕಲ್ಮನಿ ಕುಕನೂರು ಜೀವನದ ಪ್ರಮುಖ ಘಟ್ಟಗಳು :**

* ಶಿಕ್ಷಕಿ ಶ್ರೀಮತಿ–ಹುಸನವ್ವ ಕಲ್ಮನಿ ಇವರ ಮಗಳಾಗಿ ಕುಕನೂರಲ್ಲಿ ಜನನ ೧೯೧೭
* ಅಜ್ಜಿ ಹಸನಮ್ಮ ಕಲ್ಮನಿಯವರ ಪಾಲನೆ ಪೋಷಣೆ ೧೯೧೮ ರಿಂದ ೧೯೨೬
* ತಳಕಲ್ಲ ವೆಂಕರೆಡ್ಡಿ ಸೋಮರೆಡ್ಡಿ ಬಸವರೆಡ್ಡಿಯವರಲ್ಲಿ ದನಕಾಯುವ ಕಾಯಕ ೧೯೨೬ – ೧೯೩೦
* ಜಮುನಾಬಾಯಿ ಹುಬ್ಬಳ್ಳಿ ಕೈಕೊಟ್ಟಿದ್ದರಿಂದ ೧೨–೧೩ ವಯಸ್ಸಿನ ದನಕಾಯುವ ಹುಡುಗಿ ಕಿತ್ತೂರ ಚೆನ್ನಮ್ಮನಾಗಿ ಅಭಿನಯ ೧೯೩೦
* ನಂದಪ್ಪ (ನಂದರಾಜ) ವೀರಪ್ಪ, ಮೇವುಂಡಿ ಚಿಕ್ಕೇನಕೊಪ್ಪದರೊಂದಿಗೆ ಮದುವೆ ೧೯೩೩
* ಹಿರಿಯ ಮಗ ಬಾಬಣ್ಣ ಕಲ್ಮನಿ ಜನನ ೧೯೩೪
* ಗಂಡನ ಊರು ಚಿಕ್ಕೇನಕೊಪ್ಪದ ಹವ್ಯಾಸಿ ಕಲಾತಂಡದ 'ಶಿವಯೋಗಿ ಸಿದ್ಧರಾಮ' ಸೋಲ್ಲಾಪುರದಲ್ಲಿ ಪ್ರಯೋಗ ೧೯೩೬
* ಸಂಗನಬಸಪ್ಪ ಮಟ್ಟಿ ಕುಕನೂರ ಇವರ ಭರತ ಕಲಾ ಸಂಗೀತ ನಾಟಕಮಂಡಳಿಯ 'ಭಕ್ತಪ್ರಹ್ಲಾದ'ದಲ್ಲಿ ಖಯಾದು ೧೯೩೮
* ಇದೇ ಕಂಪನಿ ಅಳವಂಡಿಯಲ್ಲಿ ಕ್ಯಾಂಪ್ ಮಾಡಿದಾಗ ಹಿರಿಯ ಮಗಳು ಲಲಿತಮ್ಮ ಜನನ ೧೯೩೯
* ಮಹಾಮಾಯಾ ಸಂಗಿತ ನಾಟಕ ಮಂಡಳಿ ಕುಕನೂರು ಕಟ್ಟಿದ್ದು ೧೯೪೨
* ತಳಕಲ್ ವೆಂಕರೆಡ್ಡಿ ನಾಟಕ ಕಂಪನಿ, ಶಾರದಾ ಸಂಗೀತ ನಾಟಕ ಮಂಡಳಿ ಗೋಕಾಕ, ಕಲಾವೈಭವನಾಟ್ಯ ಸಂಘ ಏಣ್ಣೆ, ವಿಶ್ವ ಕಲಾರಂಜನ ನಾಟ್ಯಸಂಘ ಹಂದಿಗನೂರು, ಕೆ.ಬಿ.ಆರ್. ಡ್ರಾಮಾ ಕಂಪನಿ ದಾವಣಗೆರೆ ಮುಂತಾದ ಪ್ರಸಿದ್ಧ ನಾಟಕಗಳಲ್ಲಿ ಅಪ್ರತಿಮ ಅಭಿನಯ, ಕಲಾಸೇವೆ. ೧೯೪೨ ರಿಂದ ೧೯೫೦ರ ವರೆಗೆ
* ಶ್ರೀ ಲಲಿತ ಕಲಾ ನಾಟ್ಯ ಸಂಘ ಕುಕನೂರು ಸ್ಥಾಪನೆ ೧೯೫೦
(ಹೈದರಾಬಾದ ಕರ್ನಾಟಕದ ಏಕಮೇವ ನಾಟಕ ಕಂಪನಿ ಮಾಲೀಕಳು)
* ಶ್ರೀ ಪಿ.ಬಿ. ಧುತ್ತರಗಿಯವರ 'ತಾಯಿಕರಳು' ನಾಟಕ ಗಂಗಾವತಿ ತಾಲೂಕು ಸಿದ್ದಾಪುರದಲ್ಲಿ ನೂರಕ್ಕೂ ಮಿಕ್ಕಿ ಪ್ರಯೋಗ ೧೯೫೯

* ಶ್ರೀ ಪಿ.ಬಿ. ಧುತ್ತರಗಿಯವರ ಸಹೋದರಿ ನಾಟಕ–
  ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ
  ಮಸರಕಲ್ಲದಲ್ಲಿ ಪ್ರಥಮ ಪ್ರಯೋಗ ೧೯೬೦
  ಅವರಿಗೆ 'ಸಾಹಿತ್ಯರತ್ನ' ಬಿರುದು ೨೫ನೆಯ ಪ್ರಯೋಗದಲ್ಲಿ
  ನೀಡಿ ಸನ್ಮಾನ, ಮಾನಪತ್ರ ಸಲ್ಲಿಕೆ
* ಶ್ರೀ ಲಲಿತ ಕಲಾನಾಟ್ಯಸಂಘ ಕುಕನೂರು ಉಚ್ಛ್ರಾಯ ಕಾಲ ೧೯೬೫–೬೬
* ಧಾರವಾಡ ನವಲೂರು ಹತ್ತಿರ ಲಲಿತಮ್ಮ, ಮಂಜುಳಾ
  ಕಾರ ಅಪಘಾತದಲ್ಲಿ ನಿಧನ ಹಾಗೂ ಕಿರಿಯ ಮಗ ಮಹ್ಮದರಫಿ
  ಮುನ್ನಾಗೆ ಮಾರಣಾಂತಿಕ ಪೆಟ್ಟು–ಗಾಯ. ೨೦–೧೧–೧೯೮೦
* ಯಲಬುರ್ಗಾ ತಾಲೂಕು ಬೋರ್ಡ ಸದಸ್ಯಳು ೧೯೭೭–೮೨
* ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ೧೯೮೨–೮೩
* ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೧೯೯೧
* ಕೊನೆಯುಸಿರು ೧೦–೧೦–೧೯೯೩

■■

## ಉಪಸಂಹಾರ

ರೆಹಮಾನವ್ವ ಕಲ್ಮನಿ ಧೀಮಂತ ನಟಿ, ಹೈದರಾಬಾದ ಕರ್ನಾಟಕದ ಉರ್ದುನೆಲದಲ್ಲಿ ೧೯೧೭ರಲ್ಲಿ ಹುಟ್ಟಿ ಜೀವನದ ಪುಣ್ಯ ವಿಶೇಷವೆನ್ನುವಂತೆ ದನಕಾಯುತ್ತಿದ್ದ ಹುಡುಗಿ ವೃತ್ತಿರಂಗಭೂಮಿಯಲ್ಲಿ ಹೆಸರು ಮಾಡಿದಳು. ಅಭಿನಯ ಸರಸ್ವತಿ, ರಂಗಭೂಮಿ ರಾಣಿ, ಕಲಾ ಸಾಮ್ರಾಜ್ಞಿ ಮುಂತಾದ ಬಿರುದು–ಗೌರವ ಸಂಪಾದಿಸಿದಳು. ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದಳೆಂಬುದು ಹೆಮ್ಮೆಯ ಸಂಗತಿ.

ರೆಹಮಾನವ್ವ, ಬಾಬಣ್ಣ, ಲಲಿತಮ್ಮ, ಮಂಜುಳಾ, ಉಮೇಶ್, ಮುನ್ನಾ ಎಲ್ಲರೂ ಶ್ರೇಷ್ಠ ಮಟ್ಟದ ಕಲಾವಿದರು. ಅವರೆಲ್ಲ ವೃತ್ತಿರಂಗಭೂಮಿಗೆ ಗೌರವ ತಂದಿದ್ದಾರೆ. ಹಿರಿಯ ಮಗ ಬಾಬಣ್ಣ ರಂಗಭೂಮಿಯಲ್ಲಿ ಈಗಲೂ ಕ್ರಿಯಾಶೀಲರಾಗಿದ್ದು ನಾಡಿನಾದ್ಯಂತ ಸಂಚರಿಸಿ ಪಾತ್ರವಹಿಸುತ್ತಾರೆ. ಅನಾರೋಗ್ಯ, ಬಡತನ, ಕುಟುಂಬದ ಕಷ್ಟಕೋಟಲೆಗಳ ಮಧ್ಯೆ ಅವರಿಗೆ ಶಾಂತಿ, ಸಂತೋಷ, ನೆಮ್ಮದಿ ನೀಡುವುದೊಂದೇ ರಂಗಭೂಮಿ. ತಾಯಿಯಂತೆ–ನಾಟಕ ಕಂಪನಿಗಳನ್ನು ನಡೆಸಿದ್ದಾರೆ. ಇವರ ಮಕ್ಕಳು–ಮೊಮ್ಮಕ್ಕಳು ಕೂಡ ರಂಗಭೂಮಿ ನಟರಾಗಿ ರೆಹಮಾನವ್ವ ಕಲ್ಮನಿ ಕುಟುಂಬ ರಂಗಭೂಮಿಗಾಗಿ ತಮ್ಮನ್ನು ಅರ್ಪಿಸಿಕೊಂಡ ಕಲಾ ಕುಟುಂಬ.

■■

# ಅನುಬಂಧ

## ಸಂದರ್ಶನಗಳು

| | |
|---|---|
| ಬಾಬಣ್ಣ ಕಲ್ಮನಿ ಕುಕನೂರು | ೩೦–೦೪–೨೦೧೦ ಮತ್ತು ೦೨–೦೫–೨೦೧೦ |
| ಶ್ರೀಮತಿ ಮೆಹಬೂಬಬಿ ಬಾಬಣ್ಣ ಕಲ್ಮನಿ ಕುಕನೂರ | ೧೦–೧೦–೨೦೧೦ |
| ಶ್ರೀಮತಿ ದಾನವ್ವ ಮಹೇಶ್ ಕುಕನೂರು | ೧೦–೧೦–೨೦೧೦ |
| ಶ್ರೀ ಟಿ. ಪರಮೇಶ್ವರಪ್ಪ ಹೊಸಪೇಟೆ | ೧೯–೦೫–೨೦೧೦ |
| ಶ್ರೀ ಲಾಡ್‌ಸಾಹೇಬ ಅಮೀನಗಡ, ಹೊಸಪೇಟೆ ಮತ್ತು ಬಾಗಲಕೋಟೆ | ೨೨–೦೬–೨೦೧೦ |
| ಶ್ರೀಮತಿ ಎಚ್.ಫ್ಲೋರಿನಾಬಾಯಿ ಗದಗ | ೨೫–೦೬–೨೦೧೦ |
| ಶ್ರೀ ಭಾಗ್ಯವಾನ್ ಪತ್ತಾರ ತಳಕಲ್ಲ | ೨೬–೦೬–೨೦೧೦ |
| ಶ್ರೀ ಹನುಮಂತಪ್ಪ ದೇವರಮನಿ ತಳಕಲ್ಲ | ೨೮–೦೬–೨೦೧೦ |
| ಶ್ರೀ ಗೂಳರೆಡ್ಡಿ ಬಿ. ಮೂಲಿಮನಿ ತಳಕಲ್ಲ | ೨೮–೦೬–೨೦೧೦ |
| ಶ್ರೀಮತಿ ಪದ್ಮಾ ಪಿ. ಕೂಡ್ಲಿಗಿ | ೩೦–೦೬–೨೦೧೦ |
| ಶ್ರೀಮತಿ ಕೆ.ನಾಗರತ್ನಮ್ಮ ಮರಿಯಮ್ಮನಹಳ್ಳಿ | ೩೦–೦೬–೨೦೧೦ |
| ಶ್ರೀ ಮಂಜು ಕವಿಗಳು ಹುಬ್ಬಳ್ಳಿ | ೨೧–೧೦–೨೦೧೦ |
| ಶ್ರೀ ಮಂಜು ಸಾಗರ ಹುಬ್ಬಳ್ಳಿ | ೨೧–೧೦–೨೦೧೦ |
| ಶ್ರೀ ಅಬ್ದುಲ್‌ಸಾಬ ಅಣ್ಣಿಗೇರಿ | ೨೧–೧೦–೨೦೧೦ |
| ಶ್ರೀಮತಿ ಪುಷ್ಪಮಾಲಾ ಅಬ್ದುಲ್‌ಸಾಬ ಅಣ್ಣಿಗೇರಿ | ೨೧–೧೦–೨೦೧೦ |
| ಶ್ರೀ ವಸಂತ ಕುಲಕರ್ಣಿ ಹಿರಿಯರಂಗಕರ್ಮಿ ಹುಬ್ಬಳ್ಳಿ | ೨೧–೧೦–೨೦೧೦ |
| ಶ್ರೀ ಬಸವರಾಜ ತಿರ್ಲಾಪುರ ಹುಬ್ಬಳ್ಳಿ | ೨೨–೧೦–೨೦೧೦ |
| ಶ್ರೀಮತಿ ಪರಿಮಳಾ ಕಲಾವಂತ ಹುಬ್ಬಳ್ಳಿ | ೨೨–೧೦–೨೦೧೦ |
| ಶ್ರೀಮತಿ ಎಚ್.ಬಿ. ಸರೋಜಮ್ಮ ಹುಬ್ಬಳ್ಳಿ | ೨೨–೧೦–೨೦೧೦ |
| ಡಾ. ಏಣ್ಗಿಬಾಳಪ್ಪ ಏಣ್ಗಿ ತಾ। ಸವದತ್ತಿ | ೨೩–೧೦–೨೦೧೦ |

| | |
|---|---|
| ಡಾ. ಬಸವರಾಜ ಜಗಜಂಪಿ ಬೆಳಗಾವಿ | ೨೪–೧೦–೨೦೧೦ |
| ಡಾ. ರಾಮಕೃಷ್ಣ ಮರಾಠೆ ಬೆಳಗಾವಿ | ೨೪–೧೦–೨೦೧೦ |
| ಶ್ರೀ ಫಕೀರಪ್ಪ ಅಮ್ಮಣ್ಣವರ್ ಗುಡಿಗೇರಿ ಕಂಪನಿ ಮ್ಯಾನೇಜರ್ ಹುಬ್ಬಳ್ಳಿ | ೨೪–೧೦–೨೦೧೦ |
| ಶ್ರೀ ಗುರುಸ್ವಾಮಿ ಹುಬ್ಬಳ್ಳಿ ಗುಡಗೇರಿ ಕಂಪನಿ ಪ್ರಚಾರ ಕಾರಿನ ಡ್ರೈವರ್ ಹುಬ್ಬಳ್ಳಿ | ೨೪–೧೦–೨೦೧೦ |
| ಶ್ರೀಮತಿ ಭಾರತಿ ಶಿರಹಟ್ಟಿ ಗದಗ | ೦೨–೧೧–೨೦೧೦ |
| ಶ್ರೀಮತಿ ಶ್ರೀದೇವಿ ಜೋಷಿ ಗದಗ | ೦೨–೧೧–೨೦೧೦ |
| ಶ್ರೀಮತಿ ಸುಭದ್ರಮ್ಮ ಮನಸೂರು ಬಳ್ಳಾರಿ | ೦೪–೧೧–೨೦೧೦ |
| ಶ್ರೀ ಬೆಳಗಲ್ ವೀರಣ್ಣ ಬಳ್ಳಾರಿ | ೦೪–೧೧–೨೦೧೦ |
| ಶ್ರೀ ಕೆ. ಜಂಬುನಾಥ ಬಳ್ಳಾರಿ | ೦೪–೧೧–೨೦೧೦ |
| ಶ್ರೀ ಚನ್ನಬಸಯ್ಯಸ್ವಾಮಿ ಗುಬ್ಬಿ ತುಮಕೂರು ಬಳ್ಳಾರಿ | ೦೪–೧೧–೨೦೧೦ |
| ಶ್ರೀ ಬಾಬಣ್ಣ ಕಲ್ಮನಿ ಕುಕನೂರು | ೦೭–೧೧–೨೦೧೦ |
| ಶ್ರೀ ಹೊರಪೇಟೆ ಸಿದ್ಧನಗೌಡ ಮಂಡಲಗೇರಿ | ೦೭–೧೧–೨೦೧೦ |
| ಶ್ರೀ ಯು.ಆರ್. ಶಿವರುದ್ರಪ್ಪ ಗಂಗಾವತಿ | ೦೮–೧೧–೨೦೧೦ |
| ಶ್ರೀ ಗೌಸುಸಾಬ ಬನ್ನಿಕಟ್ಟಿ ಕುಕನೂರು | ೦೭–೧೧–೨೦೧೦ |
| ಶ್ರೀ ಲಿಂಗನಗೌಡ ಪಾಟೀಲ ವಕೀಲರು ಅಳವಂಡಿ | ೦೮–೧೧–೨೦೧೦ |
| ಶ್ರೀ ರುದ್ರಪ್ಪ ಮಾಗಳದ ನಿವೃತ್ತ ಹೆಡ್‌ಮಾಸ್ತರ್ ಅಳವಂಡಿ | ೦೮–೧೧–೨೦೧೦ |
| ಶ್ರೀಮತಿ ಸುಭದ್ರಮ್ಮ ಹುಣಸೀಮರದ ಕೊಪ್ಪಳ | ೧೦–೧೧–೨೦೧೦ |
| ಶ್ರೀಮತಿ ಶಾರದಾ ಸುಭದ್ರಮ್ಮ ಹುಣಸೀಮರದ ಕೊಪ್ಪಳ | ೧೦–೧೧–೨೦೧೦ |
| ಶ್ರೀ ಎನ್. ಬಸವರಾಜ ಗುಡಗೇರಿ ಹುಬ್ಬಳ್ಳಿ | ೧೧–೧೧–೨೦೧೦ |
| ಶ್ರೀ ಕೊಟ್ರಪ್ಪ ತೋಟದ ಮುತಾಳಿಕ ಮಂಗಳೂರು | ೧೧–೧೧–೨೦೧೦ |
| ಶ್ರೀ ಗವೀಶ ಹಿರೇಮಠ ಗುಲಬರ್ಗಾ | ೧೨–೧೧–೨೦೧೦ |
| ಪ್ರೊ. ಆರ್.ಎಲ್.ಬಡಿಗೇರ ಗುಲಬರ್ಗಾ | ೧೨–೧೧–೨೦೧೦ |
| ಡಾ. ಕೆ.ಬಿ. ಬ್ಯಾಳಿ ಹಿರಿಯ ಸಾಹಿತಿ–ಕುಕನೂರು | ೧೩–೧೧–೨೦೧೦ |

| | |
|---|---|
| ಶ್ರೀ ಫಕೀರಪ್ಪ ವರವಿ ಬೆಂಗಳೂರು | ೨೧–೧೧–೨೦೧೦ |
| ಶ್ರೀ ದತ್ತಾತ್ರೇಯ, ಸದಾಶಿವ ಗರುಡ ಬೆಂಗಳೂರು | ೨೩–೧೧–೨೦೧೦ |
| ಶ್ರೀ ನರಸಣ್ಣ ಸೋನಾರ ಕುಷ್ಟಗಿ | ೦೯–೧೨–೨೦೧೦ |
| ಶ್ರೀ ಎಚ್.ಟಿ. ಅರಸ ಗುಬ್ಬಿ ವೀರಣ್ಣ ಪ್ರಶಸ್ತಿ ಪಡೆದ ಕಲಾವಿದರು ಹನುಮಸಾಗರ | ೦೯–೧೨–೨೦೧೦ |
| ಶ್ರೀಮತಿ ಸರೋಜಮ್ಮ ಧುತ್ತರಗಿ ಹನುಮಸಾಗರ | ೦೯–೧೨–೨೦೧೦ |
| ಶ್ರೀ ಚೆನ್ನಬಸಪ್ಪ ಸಜ್ಜನರ ಉಪ್ಪಿನ ಬೆಟಗೇರಿ | ೧೬–೧೨–೨೦೧೦ |
| ಶ್ರೀ ಲಕ್ಷ್ಮಣಮಾಸ್ತರ ಬಿಸರಹಳ್ಳಿ ಉಪ್ಪಿನ ಬೆಟಗೇರಿ | ೧೬–೧೨–೨೦೧೦ |
| ಶ್ರೀ ಶಿವಲಿಂಗ ಶಾಸ್ತ್ರಿಗಳು ಸಂಕನೂರು ಇಲಕಲ್ಲ | ೧೮–೧೨–೨೦೧೦ |
| ಶ್ರೀ ಹನುಮಂತ ಕುಮಾರ ಮುಧೋಳ ಕುದರಿಮೋತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಸಂಗೀತ ಕಲಾವಿದರು | ೨೭–೧೨–೨೦೧೦ |
| ಶ್ರೀ ಬೀರಪ್ಪಗೂಳಪ್ಪ ಯಡಿಯಾಪುರ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ವಿಜೇತ ಗೀಗೀ ಕಲಾವಿದರು ಕುಕನೂರು | ೨೮–೧೨–೨೦೧೦ |

## ಆಧಾರ ಗ್ರಂಥಗಳು


ಕರ್ನಾಟಕ ರಂಗಭೂಮಿ —ಡಾ. ಎಚ್.ಕೆ. ರಂಗನಾಥ

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿ —ಡಾ. ರಾಮಕೃಷ್ಣ ಮರಾಠೆ

ಗರುಡ ಸದಾಶಿವರಾಯರ ನಾಟಕ ಸಾಹಿತ್ಯ ಹಾಗೂ ವೃತ್ತಿ ರಂಗಭೂಮಿಃ ಅಧ್ಯಯನ —ಡಾ. ಬಸವರಾಜ ಜಗಜಂಪಿ

ಯಲಬುರ್ಗಿ ತಾಲೂಕಿನ ವೃತ್ತಿ ರಂಗಭೂಮಿ ಒಂದು ಅಧ್ಯಯನ (ಮಹಾ ಪ್ರಬಂಧ) —ಡಾ. ಮಲ್ಲಿಕಾರ್ಜುನ ವೀ. ಕುಂಬಾರ

ಕಲಾ ವೈಭವ ನಾಟ್ಯ ಸಂಘ ಬೆಳಗಾಂವ —ಡಾ. ಎಸ್.ಎಫ್.ಜಕಬಾಳ

ನಾಟಕಾರ ಚಿಕ್ಕೋಡಿ ಶಿವಲಿಂಗ ಶಾಸ್ತ್ರಿಗಳು —ಡಾ. ಎನ್. ಎಂ. ಅಂಬಲಿಯವರ

ರಂಗ ಕುಸುಮಗಳು —ಶ್ರೀ ಗವೀಶ ಹಿರೇಮಠ
ಹೊತ್ತು ಮುಳುಗುವ ಮುನ್ನ —ಶ್ರೀ ಗವೀಶ ಹಿರೇಮಠ
ಪಿ.ಬಿ. ಧುತ್ತರಗಿ —ಡಾ. ವೀರಣ್ಣ ರಾಜೂರ
ಗರುಡ ಶ್ರೀ ಪಾದರಾಯರು —ಡಾ. ಶ್ಯಾಮಸುಂದರ ಬಿದರಕುಂದಿ
ಹೆಚ್.ಎನ್. ಹೂಗಾರ —ಶ್ರೀ ಚಂದ್ರಶೇಖರ ವಸ್ತ್ರದ
ಸದಾಶಿವ ನಾಟಕ ದರ್ಶನ —ಶ್ರೀ ದತ್ತಾತ್ರೇಯ ಸ.ಗರುಡ
ಉತ್ತರ ಕರ್ನಾಟಕದ ರಂಗ ಸಂಗೀತ ವೈಭವ —ಡಾ. ಏಣ್ಗಿ ಬಾಳಪ್ಪ, ಶ್ರೀ ಶಿರೀಶ ಜೋಷಿ
ಉತ್ತರ ಕರ್ನಾಟಕದ ರಂಗಗೀತೆಗಳು —ಡಾ. ಏಣ್ಗಿ ಬಾಳಪ್ಪ, ಶ್ರೀ ಶಿರೀಶ ಜೋಷಿ
ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಮತ್ತು ಕೃತಿಗಳು —ಡಾ. ಮೃತ್ಯುಂಜಯ ಬ. ಹೊರಕೇರಿ
ಬಣ್ಣ—ಬೆಳಕು —ಡಾ. ಎಚ್.ಕೆ.ರಂಗನಾಥ
ಜುಬೇದಾಬಾಯಿ —ಶ್ರೀಮತಿ ವೀಣಾ ಕುಲಕರ್ಣಿ
ರಂಗ ಲೋಕ —ಡಾ. ಎಚ್.ಎ. ಪಾರ್ಶ್ವನಾಥ
ರಂಗ ಪ್ರಸಂಗ —ಡಾ. ಎಚ್.ಎ. ಪಾರ್ಶ್ವನಾಥ
ಕನ್ನಡ ರಂಗಭೂಮಿ —ಶ್ರೀ ಬಿ.ವಿ. ವೈಕುಂಠರಾಜು
ಕೊಪ್ಪಳ ಜಿಲ್ಲೆಯ ರಂಗಭೂಮಿ —ಶ್ರೀ ಎಚ್.ಎಸ್. ಪಾಟೀಲ
ಬಣ್ಣದ ಬದುಕಿನ ಚಿನ್ನದ ದಿನಗಳು —ಡಾ. ಗಣೇಶ ಅಮೀನಗಡ
ನನ್ನ ಬಣ್ಣದ ಬದುಕು —ಶ್ರೀ ದು.ನಿಂ. ಬೆಳಗಲಿ
ಬಿ.ಆರ್. ಅರಿಷಣಗೋಡಿ —ಡಾ. ರಾಮಕೃಷ್ಣ ಮರಾಠೆ
ಎನ್.ಬಸವರಾಜ ಗುಡಿಗೇರಿ —ಶ್ರೀ ಬಿ.ಆರ್. ಪೋಲೀಸಪಾಟೀಲ
ಪಾತರದವರು —ಡಾ. ಶೈಲಜಾ ಹಿರೇಮಠ

ಪತ್ರಿಕೆಗಳು, ವಿಶೇಷ ಪುರವಣಿಗಳು ಹಾಗೂ ಸಂದರ್ಭ ಗ್ರಂಥಗಳು, ಮುಂತಾದವು.

■■